
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 17
ಸಂಚಿಕೆ 20
ರೂ. 2.00

ಐಕ್ಯರಂಗ

14 ಮೇ 1995



“ಕಾರ್ಮಿಕ ಮಂತ್ರಿ, ಲೇಬರ್ ಅಧಿಕಾರಿಗಳನ್ನು ತೊಲಗಿಸಿ”

ಇದು ಮೇ 5 ರಂದು ಬೆಂಗಳೂರಿನಲ್ಲಿ ವಿಧಾನಸೌಧದೆದುರು ಮೊಳಗಿದ ಒತ್ತಾಯ. ರಾಜ್ಯದ ಒಂದು ಬಡದುಡಿಯುವ ಜನವಿಭಾಗವಾದ 6 ಲಕ್ಷ ಬೀಡಿ ಕಾರ್ಮಿಕರ ಕನಿಷ್ಠ ಕೂಲಿ ಕರಡು ನೋಟಿಫಿಕೇಷನ್ ಕುರಿತಂತೆ ರಾಜ್ಯದ ಕಾರ್ಮಿಕ ಮಂತ್ರಿ, ಲೇಬರ್ ಕಮಿಶನರ್ ಹಾಗೂ ಲೇಬರ್ ಕಾರ್ಯದರ್ಶಿಯ ವರ್ತನೆ ಬೀಡಿ ಕಾರ್ಮಿಕರನ್ನಷ್ಟೇ ಅಲ್ಲ, ಇತರ ವಿಭಾಗಗಳ ಟ್ರೇಡ್ ಯೂನಿಯನ್ ಕಾರ್ಯಕರ್ತರನ್ನೂ, ಪ್ರಜಾಪ್ರಭುತ್ವವಾದಿಗಳನ್ನೂ ರೊಚ್ಚಿಗೆಬ್ಬಿಸಿದೆ. ಆದ್ದರಿಂದಲೇ ಈ ರಾಜೀನಾಮೆಯ ಒತ್ತಾಯ.

ಕನಿಷ್ಠಕೂಲಿ ಕಾಯ್ದೆಯಡಿ ಬರುವ ಹೆಚ್ಚಿನ ಉದ್ದಿಮೆಗಳಲ್ಲಿ 1984ರಿಂದಲೇ ತುಟ್ಟಿಭತ್ಯೆ ದರ ಪಾಯಿಂಟ್ 3 ಪೈಸೆಯಂತೆ ನಿಗದಿ ಮಾಡಿದ್ದರೂ ಬೀಡಿ ಕಾರ್ಮಿಕರಿಗೆ ಅದನ್ನು ನಿರಾಕರಿಸಲಾಗಿದೆ. 1991ರಲ್ಲಿ ಇತರ ಹಲವು ಉದ್ದಿಮೆಗಳ ಒಳಗೊಂಡು ಕನಿಷ್ಠ ಕೂಲಿ ಪರಿಷ್ಕರಣೆಯು ಮಾಡುವಾಗ ಸೂಚ್ಯಂಕ 908ಕ್ಕೆ ೨೩.೫೦ ರೂ. ಸಲಹಾ ಮಂಡಲಿ ಶಿಫಾರಸು ಮಾಡಿತ್ತು. ಬೀಡಿ ಕಾರ್ಮಿಕರಿಗೆ ಅಂತಹ ಪ್ರಕಟಣೆ ಆಗಿಲ್ಲ, ಇವನ್ನು ಪ್ರತಿಭಟಿಸಿ ಹಾಗೂ ತಮ್ಮ ಇತರ ಕೆಲವು ಬೇಡಿಕೆಗಳನ್ನೂ ಒತ್ತಾಯಿಸಿ ಬೀಡಿ ಕಾರ್ಮಿಕರು ನಡೆಸಿರುವ ಹೋರಾಟದ ಮುಂದಿನ ಭಾಗವಾಗಿ ಮೇ 2 ರಿಂದ ಬೆಂಗಳೂರಿನಲ್ಲಿ ಸಿಐಟಿಯು ಪ್ರಧಾನ ಕಾರ್ಯದರ್ಶಿಗಳೂ ಹಾಗೂ ಬೀಡಿ ಕಾರ್ಮಿಕರ ಫೆಡರೇಷನ್ನಿನ ಅಧ್ಯಕ್ಷ ವಿ.ಜೆ.ಕೆ. ನಾಯರ್, ಸಿಐಟಿಯು ಉಪಾಧ್ಯಕ್ಷ ಹಾಗೂ ಸ್ವಾತಂತ್ರ್ಯ ಹೋರಾಟಗಾರರಾದ ಎನ್.ಕೆ. ಉಪಾಧ್ಯಾಯ ಮತ್ತು ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್. ಸೂರ್ಯನಾರಾಯಣ ರಾವ್ ಅನಿರ್ದಿಷ್ಟ ಕಾಲದ ಉಪವಾಸ ಸತ್ಯಾಗ್ರಹ ಆರಂಭಿಸಿದರು. ನಗರದ ವಿವಿಧ ಕಾರ್ಮಿಕರ ಸಂಘಟನೆಗಳು, ಸಾಮೂಹಿಕ ಸಂಘಟನೆಗಳು ಈ ಹೋರಾಟಕ್ಕೆ ಬೆಂಬಲ, ಸಹಾರ್ದ ಸೂಚಿಸಿದವು.

ಮಾತಿಗೆ ತಪ್ಪಿದ ಮಂತ್ರಿ
ಮಾಲಕರೊಂದಿಗೆ ಅಧಿಕಾರಿಗಳ ಶಾಮೀಲು?

ಲೇಬರ್ ಕಮಿಶನರ್ ಹಾಗೂ ಲೇಬರ್ ಸೆಕ್ರೆಟರಿ ಬೀಡಿ ಮಾಲಕರೊಂದಿಗೆ ಸಭೆ ನಡೆಸಿದರು. ಮೇ 4 ರಂದು ಕೊನೆಗೂ ಒಂದು ಕರಡು ನೋಟಿಫಿಕೇಷನ್ ಸಿದ್ಧವಾಯಿತು. ಆದರೆ ಅದರಲ್ಲೂ 2 ಪೈಸೆ ದರದಲ್ಲೇ ಲೆಕ್ಕ ಹಾಕಿ ಕನಿಷ್ಠ ಕೂಲಿಯನ್ನು ಈಗಿರುವ ರೂ. 30.39ದ ಬದಲು 1513 ಪಾಯಿಂಟ್‌ನಲ್ಲಿ ರೂ. 32.00 ಮಾಡಲಾಯಿತಷ್ಟೆ. ಇದನ್ನು ಬೀಡಿ ಕಾರ್ಮಿಕರು, ಅದರಲ್ಲೂ ಅಪಾರ ಸಂಖ್ಯೆಯಲ್ಲಿ ಇರುವ ಮುಸ್ಲಿಂ ಮಹಿಳಾ ಕಾರ್ಮಿಕರು ಲೇಬರ್ ಕಾರ್ಯದರ್ಶಿ ಕಛೇರಿಯಲ್ಲೇ ಪ್ರತಿಭಟಿಸಿದರು. ಅದು ಕನಿಷ್ಠ ರೂ. 40.13 ಆಗಬೇಕೆಂದು ಒತ್ತಾಯಿಸಿದರು. ಮೇ 5 ರಂದು ಕಾರ್ಮಿಕ ಮಂತ್ರಿಗಳ ನಿವಾಸಕ್ಕೂ ಹೋದರು. ಮಂತ್ರಿಗಳು ಅಪರಾಹ್ನ ಉಪವಾಸ ಕುಳಿತಿದ್ದ ಮುಖಂಡರನ್ನು ಭೇಟಿ ಮಾಡಿ, ಅಲ್ಲಿ ಬೀಡಿ ಸುತ್ತುತ್ತಾ ಕುಳಿತಿದ್ದ ಮಹಿಳಾ ಕಾರ್ಮಿಕರಿಂದಲೇ ಅವರ ಬವಣೆಗಳನ್ನು ಕಿವಿಯಾರೆ ಕೇಳಿ ಕಾರ್ಮಿಕರಿಗೆ ಅನ್ಯಾಯವಾಗದಂತೆ ಕರಡು ಜ್ಯಾರಿ ಮಾಡುವುದಾಗಿ ಮಾತು ಕೊಟ್ಟರು. ಅಲ್ಲಿದ್ದ ಕಾರ್ಮಿಕ ಮುಖಂಡರನ್ನು ತಮ್ಮ ಕಛೇರಿಗೆ ಆಹ್ವಾನಿಸಿದರು. ಕನಿಷ್ಠ ಕೂಲಿಯನ್ನು ರೂ. 36.80 ಎಂದು ನಿಗದಿ ಮಾಡುವುದಾಗಿಯೂ ಹೇಳಿದರು. ಈ ನಡುವೆ ಎಸ್. ಸೂರ್ಯನಾರಾಯಣರಾವ್ ಅರ್ಪಿಸಿದ ಮನವಿಯನ್ನು ಪರಿಶೀಲಿಸಿದ ಮುಖ್ಯಮಂತ್ರಿಗಳೂ ತುರ್ತಾಗಿ ಇದನ್ನು ಪರಿಗಣಿಸಲು ಕಾರ್ಮಿಕ ಸಚಿವರಿಗೆ ಆದೇಶ ನೀಡಿದರು.

ಆದರೆ ಕಾರ್ಮಿಕ ಸಚಿವರು ಈ ವೇಳೆಗಾಗಲೇ ತಮ್ಮ ಮಾತನ್ನೇ ಮರೆತಂತಿತ್ತು, ಲೇಬರ್ ಕಮಿಶನರ್‌ರೊಂದಿಗೆ “ಸಮಾಲೋಚನೆ” ಮಾಡಿದ ಮೇಲೆ ಇನ್ನು ಮುಂದಾದರು. 3 ಪೈಸೆ ದರದಲ್ಲಿ ತುಟ್ಟಿಭತ್ಯೆ ನಿಗದಿ ಪಡಿಸಲು ನಿರಾಕರಿಸಿದರಷ್ಟೇ ಅಲ್ಲ, ರೂ. 36.80 ಎಂದು ನಿಗದಿಪಡಿಸಿದರಲ್ಲೂ ತಪ್ಪಿದೆ, ಅದು ಇನ್ನೂ ಕಮ್ಮಿಯಾಗಬಹುದು ಎಂದರು. ಸಹಜವಾಗಿಯೇ ಏನೋ ಪಿತೂರಿ ನಡೆದಿದೆ ಎಂಬ ಸಂಶಯ ಕಾರ್ಮಿಕರಲ್ಲಿ ಮೂಡಿದೆ. ಮಂತ್ರಿಗಳ ಆಹ್ವಾನದ ಮೇರೆಗೆ ಹೋಗಿದ್ದ ವಿವಿಧ ಸಂಘಟನೆಗಳ ಕಾರ್ಮಿಕ ಮುಖಂಡರು ಮಂತ್ರಿಗಳ ಈ ವರ್ತನೆಯನ್ನು ಪ್ರತಿಭಟಿಸಿದರು. ಲೇಬರ್ ಸೆಕ್ರೆಟರಿ ನಗರದಲ್ಲಿ ಇಲ್ಲವಾದ್ದರಿಂದ ಅವರು ಬಂದ ನಂತರವೇ ಕರಡು ನೋಟಿಫಿಕೇಷನ್ “ಸರಿಪಡಿಸಿ” ಪ್ರಕಟಿಸಲಾಗುವುದು ಎಂದು ಹಿಂದೆ ಕಾರ್ಮಿಕ ಮುಖಂಡರೂ ಎಂದೆನಿಸಿಕೊಂಡಿದ್ದ ಈ ಕಾರ್ಮಿಕ ಮಂತ್ರಿಗಳು ರಾಜ್ಯದ ಒಂದು ಅಸಂಘಟಿತ ಬಡ ಕಾರ್ಮಿಕ ವಿಭಾಗದ ಸಂಕಷ್ಟಗಳ ಪರಿವೆಯೇ ತನಗಿಲ್ಲ ಎಂಬಂತೆ ನಿರ್ಲಕ್ಷ್ಯದಿಂದ ವರ್ತಿಸಿದರು.

ಜನತಾದಳ ಸರಕಾರ
ನಿಜವಾಗಿಯೂ ಎತ್ತ ಸಾಗಿದೆ?

ಎಂದು ರಾಜ್ಯದ ಕಾರ್ಮಿಕರೆಲ್ಲಾ ಪ್ರಶ್ನಿಸುವಂತಾಗಿದೆ ಇದರಿಂದ. ಹಿಂದಿನ ಬಂಗಾರಪ್ಪ ನೇತೃತ್ವದ ಕಾಂಗ್ರೆಸ್(ಐ) ಸರಕಾರ 1991ರಲ್ಲಿ ಬೀಡಿ ಮಾಲಕರ ಪಕ್ಷವಹಿಸಿ ಬೀಡಿ ಕಾರ್ಮಿಕರಿಗೆ ಮಾಡಿದ ಅನ್ಯಾಯವನ್ನು ಸರಿಪಡಿಸಲು ಕೂಡಾ ಈ ಸರಕಾರ ಸಿದ್ಧವಿಲ್ಲ, ಆ ಕಾರ್ಮಿಕ ವಿರೋಧಿ ಹಾದಿಯಲ್ಲೇ ಸಾಗುವ ಯೋಚನೆಯಲ್ಲಿದೆ. ಆ ಹಾದಿ ತುಳಿದ ಬಂಗಾರಪ್ಪ, ಮೊಯಿಲಿಗಳ, ಅದಕ್ಕೂ ಹೆಚ್ಚಾಗಿ ತಮ್ಮದೇ ಪಕ್ಷದ ಬಿಜು ಪಟ್ನಾಯಕರ ಗತಿಯೇನಾಯಿತು ಎಂದಾದರೂ ಜನತಾದಳ ಮುಖಂಡರಿಗೆ ಗೊತ್ತಿರಬೇಡವೇ ಎಂದು ಖೇದಗೊಂಡ ಹೋರಾಟ ಸಮಿತಿಯ ಪರವಾಗಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಪಿ. ರಾಮಚಂದ್ರರಾವ್ ಈ ಹಿನ್ನೆಲೆಯಲ್ಲಿ ಹೋರಾಟದ ಸ್ವರೂಪ ಬದಲಿಸಿ ಜನತಾದಳ ಸರಕಾರ ತನ್ನ ಕರ್ತವ್ಯ ಅರಿಯುವಂತೆ ರಾಜ್ಯಾದ್ಯಂತ ಒತ್ತಡ ತರಬೇಕು, ಅದಕ್ಕಾಗಿ ಸದ್ಯ ಈ ಉಪವಾಸ ಮುಷ್ಕರವನ್ನು ಹಿಂತೆಗೆದುಕೊಳ್ಳಬೇಕು ಎಂದರು. ಈ ಮನವಿಯ ಮೇರೆಗೆ ಸಿಐಟಿಯು ಮುಖಂಡರು ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸಿದರು. ನೆರೆದಿದ್ದ ವಿವಿಧ ಕಾರ್ಮಿಕ ಸಂಘಟನೆಗಳ ಕಾರ್ಯಕರ್ತರು ಬೀಡಿ ಕಾರ್ಮಿಕರ ಪ್ರತಿನಿಧಿಗಳೊಂದಿಗೆ ದನಿಗೂಡಿಸಿ “ಕಾರ್ಮಿಕ ಮಂತ್ರಿ, ಭ್ರಷ್ಟ ಕಾರ್ಮಿಕ ಅಧಿಕಾರಿಗಳು ರಾಜೀನಾಮೆ ನೀಡಬೇಕು” ಎಂದು ಒತ್ತಾಯಿಸುತ್ತಾ ರಾಜ್ಯಾದ್ಯಂತ ಈ ವಂಚನೆ, ಶಾಮೀಲಿನ ವಿರುದ್ಧ ಕಾರ್ಮಿಕರ ನ್ಯಾಯಯುತ ಬೇಡಿಕೆಗಳಿಗಾಗಿ ಹೋರಾಟವನ್ನು ತೀವ್ರಗೊಳಿಸಲು ನಿರ್ಧರಿಸಿದರು.

“ಕೇಂದ್ರದ ಹಣಕಾಸು ಮಂತ್ರಿಗಳಿಗೆ ರೈತರು ಎಂದರೆ ಅಲರ್ಜಿ” ಎಂದು ಮುಖ್ಯಮಂತ್ರಿಗಳು ಹೇಳಿದ್ದಾರಂತೆ ಖಂಡಿತಾ ನಿಜ. ರೈತರು ಮಾತ್ರವಲ್ಲ ಇಡೀ ದುಡಿಯುವ ಜನವಿಭಾಗಗಳ ಬಗ್ಗೆ ಅಲರ್ಜಿ ಇದೆ. ಆದರೆ ರಾಜ್ಯದ ಜನತಾದಳ ಸರಕಾರವನ್ನೂ ಕಾಂಗ್ರೆಸ್ (ಐ) ಸರಕಾರದ ಈ ಅಲರ್ಜಿ ಬಾಧಿಸುತ್ತಿಲ್ಲವೇ ಎಂದು ಬಡ ಬೀಡಿ ಕಾರ್ಮಿಕರು ಕೇಳುತ್ತಿದ್ದಾರೆ. ಜನತಾದಳ ಸರ್ಕಾರದ ಬಳಿ ಇದಕ್ಕೆ ಉತ್ತರವಿದೆಯೇ?

ಕ್ಯೂಬಾ ಜನತೆಗೆ ನೆರವು
ಸಿಪಿಐ(ಎಂ) ಪೊಲಿಟ್ ಬ್ಯೂರೋ ಮನವಿ

ಅಮೇರಿಕಾ ಕ್ಯೂಬಾದ ವಿರುದ್ಧ ಹೇರಿರುವ ನಿರ್ಬಂಧವನ್ನು ಮುಂದುವರಿಸುತ್ತಲೇ ಇರುವ ಸನ್ನಿವೇಶದಲ್ಲಿ 1993 ಮತ್ತು 1994ರಲ್ಲಿ ರಾಷ್ಟ್ರೀಯ ಕ್ಯೂಬಾ ಸೌಹಾರ್ದ ಸಮಿತಿ ನೇತೃತ್ವದಲ್ಲಿ ಕ್ಯೂಬಾ ಜನತೆಗೆ ರಾಜಕೀಯ ಸೌಹಾರ್ದತೆಯೊಂದಿಗೆ ಭೌತಿಕ ನೆರವು ಕೂಡಾ ನೀಡಿದ್ದ ಸೌಹಾರ್ದ ಆಂದೋಲನವನ್ನು ಕೂಡಾ ಮುಂದುವರಿಸಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಪಕ್ಷದ ಘಟಕಗಳಿಗೆ, ಸದಸ್ಯರಿಗೆ, ಹಿತೈಷಿಗಳಿಗೆ ಹಾಗೂ ಜನತೆಗೆ ಕರೆ ನೀಡಿದೆ.

ಈಗ ಕ್ಯೂಬಾದ ಜನತೆಯ ಬಟ್ಟೆ ಒಗೆಯುವ ಡಿಟರ್ಜೆಂಟ್ ಸಾಬೂನುಗಳ ಅಗತ್ಯವನ್ನು ತುರ್ತಾಗಿ ಪೂರೈಸಬೇಕಾಗಿದೆ. ರಾಷ್ಟ್ರೀಯ ಕ್ಯೂಬಾ ಸೌಹಾರ್ದ ಸಮಿತಿ ಇದಕ್ಕಾಗಿ 40 ಲಕ್ಷ ರೂ.ಗಳನ್ನು ಸಂಗ್ರಹಿಸುವ ಕರೆ ನೀಡಿದೆ. ಆದ್ದರಿಂದ ಸಾಕಷ್ಟು ಪ್ರಮಾಣದಲ್ಲಿ ಹಣ ಸಂಗ್ರಹ ಕಾರ್ಯವನ್ನು ಕೈಗೊಂಡು ಸಾಧ್ಯವಾದಷ್ಟು ಬೇಗನೇ ಮೇ ತಿಂಗಳ ಅಂತ್ಯದೊಳಗೆ ಬೇಕಾದ ವಸ್ತುಗಳನ್ನು ಖರೀದಿಸಿ ಕ್ಯೂಬಾಕ್ಕೆ ಕಳಿಸಲು ಸಾಧ್ಯವಾಗುವಂತೆ ಕೊಡಬೇಕೆಂದು ಪೊಲಿಟ್ ಬ್ಯೂರೋ ಮನವಿ ಮಾಡಿದೆ.

ಪಕ್ಷದ ೧೪ನೇ ಮಹಾಧಿವೇಶನದ ನಂತರ ಬೃಹತ್ ಪ್ರಮಾಣದಲ್ಲಿ ನಡೆದ ಸೌಹಾರ್ದ ಕಾರ್ಯಾಚರಣೆಯಿಂದಾಗಿ 10 ಸಾವಿರ ಟನ್‌ಗಿಂತಲೂ ಹೆಚ್ಚು ಗೋಧಿ ಹಾಗೂ 300 ಟನ್ ಗಳಷ್ಟು ಡಿಟರ್ಜೆಂಟ್ ಗಳು ಹಾಗೂ ಸಾಕಷ್ಟು ಪ್ರಮಾಣದಲ್ಲಿ ಔಷಧಿಗಳನ್ನು ಕಳಿಸಲು ಸಾಧ್ಯವಾಗಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಕ್ಯೂಬಾ ವೀರ ಜನತೆ ನಮ್ಮ ಈ ಸೌಹಾರ್ದ ಕಾಣಿಕೆಯನ್ನು ತುಂಬು ಹೃದಯದಿಂದ ಸ್ವೀಕರಿಸಿದರು. ಇತ್ತೀಚಿಗೆ ಚಂಡೀಗಢದಲ್ಲಿ ಸಿಪಿಐ(ಎಂ) 15ನೇ ಮಹಾಧಿವೇಶನದಲ್ಲಿ ಭಾಗವಹಿಸಿದ ಕ್ಯೂಬಾದ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಪ್ರತಿನಿಧಿ ಭಾರತೀಯ ಜನತೆಯ ಈ ಸೌಹಾರ್ದ ಕ್ರಮವನ್ನು ಶ್ಲಾಘಿಸಿದರು. ವಿಶ್ವಾದ್ಯಂತ ಪ್ರಗತಿಪರ ಹಾಗೂ ಸಾಮ್ರಾಜ್ಯಶಾಹಿ-ವಿರೋಧಿ ವಲಯಗಳು ಸೌಹಾರ್ದತೆ ಹಾಗೂ ಅಂತರ್‍ರಾಷ್ಟ್ರೀಯತೆಯ ಈ ಮಹತ್ವದ ಭಾವನೆಯನ್ನು ಶ್ಲಾಘಿಸಿವೆ.

15ನೇ ಮಹಾಧಿವೇಶನ ಕ್ಯೂಬಾದ ಧೀರ ಜನತೆಯ ಸಮಾಜವಾದವನ್ನು ರಕ್ಷಿಸುವ ಸ್ಫೂರ್ತಿದಾಯಕ ಹೋರಾಟದೊಂದಿಗೆ ಸೌಹಾರ್ದತೆಯನ್ನು ಬಲಗೊಳಿಸುವ ಸಿಪಿಐ(ಎಂ)ನ ನಿರ್ಧಾರವನ್ನು ಮತ್ತೊಮ್ಮೆ ಒತ್ತಿ ಹೇಳಿರುವ ಹಿನ್ನೆಲೆಯಲ್ಲಿ ಈ ಹಣಸಂಗ್ರಹದಲ್ಲಿ ತೊಡಗಬೇಕು ಎಂದು ಪೊಲಿಟ್ ಬ್ಯೂರೋ ಮನವಿ ಮಾಡಿದೆ.



ರಾಜ್ಯಾದ್ಯಂತ ಮೇ 1 ರಂದು ಕಾರ್ಮಿಕರು ಮೇ ದಿನದ ಭವ್ಯ ಪರಂಪರೆಯನ್ನು ಎತ್ತಿ ಹಿಡಿಯಲು ನ್ಯಾಯಯುತವಾದ ಮತ್ತು ಸಮಾನತೆಯ ಮೇಲೆ ಆಧಾರಿತವಾದ ಸಾಮಾಜಿಕ ವ್ಯವಸ್ಥೆಯನ್ನು ಸ್ಥಾಪಿಸಲು ತಮ್ಮ ಹೋರಾಟವನ್ನು ಮುಂದುವರೆಸುವ ಪಣವನ್ನು ಪುನರುಚ್ಚರಿಸಿದರು. ಇದರ ಭಾಗವಾಗಿ ಕೇಂದ್ರ ಸರಕಾರದ ಹೊಸ ಆರ್ಥಿಕ ನೀತಿಗಳನ್ನು, ವಿಶ್ವ ವ್ಯಾಪಾರ ಸಂಘಟನೆಯ ಶರತ್ತುಗಳನ್ನು ಪ್ರತಿಭಟಿಸಿ, ದೇಶದ ಸಾರ್ವಭೌಮತ್ವವನ್ನು, ಕೋಮುವಾದಿ, ವಿಚ್ಛಿದ್ರಕಾರಿ ಶಕ್ತಿಗಳಿಂದ ದೇಶದ ಐಕ್ಯತೆಯನ್ನು ಕಾಪಾಡುವ ಹಾಗೂ ಕಾರ್ಮಿಕರ ಐಕ್ಯತೆಯನ್ನು ಬಲಪಡಿಸುವ ಆಂದೋಲನವನ್ನು ಮುಂದುವರೆಸಲು ನಿರ್ಧರಿಸಿದರು. ಬೆಂಗಳೂರಿನಲ್ಲಿ ಸಿಐಟಿಯು ಸೇರಿರುವ ವಿವಿಧ ಕಾರ್ಮಿಕ ಸಂಘಟನೆಗಳು ರಚಿಸಿಕೊಂಡ ಮೇ 1 ದಿನಾಚರಣಾ ಸಮಿತಿಯ ಆಶ್ರಯದಲ್ಲಿ ನಡೆದ ಮೇ ದಿನದ ಒಂದು ದೃಶ್ಯ

ಇತಿಹಾಸ

ಫ್ಯಾಸಿಸಂ

ಮರೆಯಬಾರದ ಭಯಂಕರ ದುಸ್ವಪ್ನ

ಮೇ 9, 1945ರಂದು ಅಂದರೆ ಸರಿಯಾಗಿ ಐವತ್ತು ವರ್ಷಗಳ ಹಿಂದೆ ಇಡೀ ಯುರೋಪನ್ನು ಅಭೂತಪೂರ್ವ ಕ್ರೌರ್ಯಕ್ಕೆ ತುತ್ತಾಗಿಸಿದ್ದ ನಾಝಿ ಯುದ್ಧಯಂತ್ರ ಸೋವಿಯತ್ ಕೆಂಪು ಸೇನೆಗೆ ಶರಣಾಯಿತು. ಆದರೆ ಈ ಫ್ಯಾಸಿಸಂ ಎಂಬ ದುಷ್ಟ ರೋಗ ಮತ್ತೆ ಕಾಣಿಸಿಕೊಳ್ಳುವುದಿಲ್ಲ ಎಂದು ಭಾವಿಸಿದರೆ ಅದು ತಪ್ಪಾಗುತ್ತದೆ. ಏಕೆಂದರೆ ಈ ನಾಝಿವಾದ ಅಥವಾ ಫ್ಯಾಸಿಸಂ ಸಾಮ್ರಾಜ್ಯಶಾಹಿಯ ಒಂದು ಸ್ವರೂಪವೇ -ಅದರ ಅತ್ಯಂತ ಹೊಲಸು ಹಾಗೂ ಅಮಾನುಷ ರೂಪ.

ಫ್ಯಾಸಿಸಂನ ಈ ಅಮಾನುಷ ರೂಪ, ಕರಾಳ ಕೃತ್ಯಗಳು ಎರಡನೇ ಮಹಾಯುದ್ಧ ಮುಗಿದ ನಂತರ ನ್ಯೂರೆಂಬರ್ಗ್ ಎಂಬಲ್ಲಿ ನಡೆದ ಯುದ್ಧಾಪರಾಧಿಗಳ ವಿಚಾರಣೆಯ ಕಾಲದಲ್ಲಿ ಇಡೀ ವಿಶ್ವದ ಗಮನಕ್ಕೆ ಬಂತು. ಈ ವಿಚಾರಣೆಯ ಕಾಲದಲ್ಲಿ ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಪತ್ರಿಕೆ 'ಪ್ರಾವ್ದಾ' ದ ವರದಿಗಾರ ತಂಡದ ನೇತೃತ್ವ ವಹಿಸಿದ್ದ ಬೋರಿಸ್ ಪೋಲೆ ವಾಯ್ ಈ ವಿಚಾರಣೆಗಳನ್ನು ಕುರಿತಂತೆ 1967ರಲ್ಲಿ ಒಂದು ಪುಸ್ತಕ ಪ್ರಕಟಿಸಿದರು. The Final Reckoning ಅಥವಾ 'ಕೊನೆಯ ತೀರ್ಪು' ನ್ಯೂರೆಂಬರ್ಗ್ ವಿಚಾರಣೆಯಲ್ಲಿನ ಕೆಲವು ದಾಖಲೆಗಳಿಂದ ಆಯ್ದ ಭೀಕರ ಸಂಗತಿಗಳ ಸಂಕಲನ ಇದು. ಪೋಲೆವಾಯ್ ಎರಡನೇ ಮಹಾಯುದ್ಧದ ಉನ್ಮಾದವನ್ನು ಹತ್ತಿರದಿಂದಲೇ ಪತ್ರಕರ್ತರಾಗಿ ನೋಡಿದವರು ಕೂಡಾ. ಇವರ ಈ ಕೃತಿಯ ಒಂದು ಅಧ್ಯಾಯವನ್ನು ಇಲ್ಲಿ ಕೊಡುತ್ತಿದ್ದೇವೆ. ಫ್ಯಾಸಿಸಂನ ಕರಾಳತೆಯ ಒಂದು ಚಿತ್ರವನ್ನು ನೆನಪಿಸಲು -ಬೋರಿಸ್ ಪೋಲೆವಾಯ್ ರವರು ಹೇಳಿರುವಂತೆ 'ಜಗತ್ತು ಮರೆಯಲಿಚ್ಛಿಸುವ, ಆದರೆ ಎಂದೆಂದಿಗೂ ಮರೆಯಬಾರದ ಭಯಾನಕ ದುಸ್ವಪ್ನದ' ಒಂದು ಚಿತ್ರ.

ಬೆಂಗಳೂರಿನ 'ನವಕರ್ನಾಟಕ ಪ್ರಕಾಶನ' 1990ರಲ್ಲಿ ಪ್ರಕಟಿಸಿದ ಈ ಕೃತಿಯ ಕನ್ನಡ ಅನುವಾದದಿಂದ ಆರಿಸಿದ 'ನಮಗೆ ನಿದ್ರೆಯೂ ಬರಲಿಲ್ಲ, ಹಸಿವೂ ಆಗಲಿಲ್ಲ" ಎಂಬ ಈ ಅಧ್ಯಾಯ ಇದು.

ಮಾನವ ಕೋಟಿಯ ಮೇಲೆ ಎಸಗಲಾದ ಅಪರಾಧಗಳ ಪುರಾವೆಯನ್ನು ನಾವು ಮಂಡಿಸಲಿದ್ದೇವೆ. ಮಹನೀಯರೆ, ಅದು ನಿಮ್ಮ ನಿದ್ರೆಯನ್ನು ಕೆಡಿಸುವ ಸ್ವರೂಪದ್ದು ಎಂದು ನಿಮಗೆ ಎಚ್ಚರಿಕೆ ನೀಡುತ್ತೇನೆ" ಎಂದು ಅಮೇರಿಕದ ಪ್ರಧಾನ ಪ್ರಾಸಿಕ್ಯೂಟರಾದ ಮಿ. ಜಸ್ಟಿಸ್ ಜಾಕ್ಸನ್ ರು ತನ್ನ ಆರಂಭಿಕ ಭಾಷಣದಲ್ಲಿ ಹೇಳಿದ್ದ ಮಾತುಗಳನ್ನು ನಾನು ಈಗಾಗಲೇ ಉಲ್ಲೇಖಿಸಿದ್ದೇನೆ.

ಈ ಮಾತುಗಳನ್ನು ಕೇಳಿ ಸೋವಿಯತ್ ಪತ್ರಕರ್ತರು ಪರಸ್ಪರರತ್ತ ದೃಷ್ಟಿ ಬೀರಿದರು. ಬಾಬಿ ಯಾರ್, ಟ್ರೆಬ್ಲಿಂಕ, ಮಾಯ್ದಾನೆಕ್ ಮತ್ತು ಅಸ್ವಿಚಿಮ್ ಗಳನ್ನು ಕಣ್ಣಾರೆ ಕಂಡಿದ್ದ ನಮಗೆ ಇನ್ನಷ್ಟು ದಿಗ್ಭ್ರಮೆಯಾಗುವ ಸಂಭವವಿತ್ತೆ? ಆದರೆ ಮಿ ಜಸ್ಟಿಸ್ ಜಾಕ್ಸನ್ ಸರಿಯಾದ ಮಾತನ್ನೇ ಆಡಿದ್ದರು. ನಾಜಿ ರೈಕ್ ನಲ್ಲಿ, ಜನರ ನಿರ್ಮೂಲನವು,ದೊಡ್ಡ, ವ್ಯಾಪಕವಾಗಿ ರೂಪಿಸಲಾದ, ಸುಯೋಜಿತವಾದ ಮತ್ತು ವ್ಯವಸ್ಥಿತವಾದ ಕೈಗಾರಿಕೆಯಾಗಿತ್ತು. ಅದರ ಭಯಾನಕ ಪುರಾವೆಗೆ ನಾವು ಆಗಲೆ ಒಗ್ಗಿ ಹೋಗಿದ್ದೆವು. ಅದರ ವಿಷಯದಲ್ಲಿ ನಾವು ಎಷ್ಟು ಗಟ್ಟಿ ಮನಸ್ಸಿನವರಾಗಿದ್ದೆವು ಹಾಗೂ ನಿರುದ್ವೇಗಿಗಳಾಗಿದ್ದೆವು ಎಂದರೆ ಅದರಿಂದಾಗಿ ನಮಗೆ ನಿದ್ರಾಭಂಗವೂ ಆಗುತ್ತಿರಲಿಲ್ಲ ಅಥವಾ ನಮ್ಮ ಹಸಿವೆಯೂ ಕೆಡುತ್ತಿರಲಿಲ್ಲ.

ಆದರೆ, ಪ್ರಧಾನ ಸೋವಿಯತ್ ಪ್ರಾಸಿಕ್ಯೂಟರ್ ನ ಸಹಾಯಕ ಲೆವ್ ಸ್ಮಿರ್ನೋವ್ ಮಾತನಾಡಲಾರಂಭಿಸಿದ ಮೇಲೆ ನಮಗೆ ಅಕ್ಷರಶಃ ಹಸಿವೂ ಇಲ್ಲವಾಯಿತು. ನಿದ್ದೆಯೂ ಇಲ್ಲವಾಯಿತು. ಉನ್ನತ ಶಿಕ್ಷಣ ಪಡೆದ ವಕೀಲನೂ, ಉಜ್ವಲ ವಾಗ್ಮಿಯೂ ಆಗಿದ್ದ ಆತನು, ನ್ಯಾಯಾಧೀಶರ ಭಾವನೆಗಳನ್ನು ಉದ್ದೀಪಿಸುವ ಬದಲು, ಅಪರ ವಿಚಾರಸರಣಿಗೆ ಹಿಡಿಸುವಂತೆ ಮಾತನಾಡುತ್ತಿದ್ದ. ವಾಸ್ತವ ಸಂಗತಿಗಳನ್ನು ಮಂಡಿಸಿದ ಆತನು, ಅವಕ್ಕೆ ಪುಷ್ಟಿ ನೀಡುವ ಪುರಾವೆಯನ್ನೂ ನ್ಯಾಯಾಲಯದ ಮುಂದೆ ಇಟ್ಟನು. ಆ ಪುರಾವೆಯು ಎಷ್ಟು ಪ್ರಬಲವಾಗಿತ್ತೆಂದರೆ ಕಟಕಟೆಯಲ್ಲಿದ್ದ ಅಪರಾಧಿಗಳಲ್ಲೂ ಗದ್ದಲವುಂಟಾಗಿ, ಅವರು ತಮ್ಮ ತಮ್ಮಲ್ಲೇ ವಾದಿಸಲಾರಂಭಿಸಿದರು. ಫ್ರಾಕ್ಸ್ ಉನ್ಮಾದಕ್ಕೊಳಗಾದ. ಅವನಿಗೆ ಶಾಮಕ ಔಷಧವನ್ನು ನೀಡಬೇಕಾಯಿತು.

ಆ ದೃಶ್ಯವನ್ನು ಮರೆಯುವಂತಿಲ್ಲ. ಅದನ್ನು ನಾನು ದೀರ್ಘವಾಗಿ ವಿವರಿಸುತ್ತೇನೆ. ಏಕೆಂದರೆ ವಿಚಾರವಂತ ಜೀವಿಗಳು ಇರುವ ಈ ಭೂಗ್ರಹದಲ್ಲಿ ಅಂಥ ಸಂಗತಿಗಳು ಎಂದಾದರೂ ನಡೆಯಬಹುದು ಎಂಬುದನ್ನು ಮುಂದೆ ಕಾಲವು ಕ್ರಮಿಸಿದಂತೆ ನಂಬುವುದೂ ಕಷ್ಟವಾಗುತ್ತದೆ.

ಸೋವಿಯತ್ ಪ್ರಾಸಿಕ್ಯೂಟರ್ ಅಂದು ಮಾತನಾಡುವನೆಂಬುದು ಹಿಂದಿನ ದಿನವೇ ನಮ್ಮ ಕಿವಿಗೆ ಬಿದ್ದಿತ್ತು. ವಸಂತ ಕಾಲದ ಆ ದಿನಗಳಲ್ಲಿ ಸಾಮಾನ್ಯವಾಗಿ ಖಾಲಿ ಇರುತ್ತಿದ್ದ ವರದಿಗಾರರ ಸ್ಥಳವು ಅಂದು ಕಿಕ್ಕಿರಿದಿತ್ತು. ಅಂದು ವಿಚಾರಣಾ ಕೊಠಡಿಯ ಮಧ್ಯೆ ಭಾಗದಲ್ಲಿ ಮೇಜುಗಳ ಮೇಲೆ ಇಡಲಾಗಿದ್ದ ಕೆಲವು ದಪ್ಪ ಪದಾರ್ಥಗಳನ್ನು ಹೊದಿಕೆಯಿಂದ ಮುಚ್ಚಲಾಗಿತ್ತು. ಪ್ರಾಸಿಕ್ಯೂಟರ್ ನ ಮೇಜಿನ ಮೇಲೆ ಇದ್ದ ಯಾವುದೋ ವಸ್ತುವಿನ ಮೇಲೆಯೂ ಹೊದಿಕೆ ಹಾಕಲಾಗಿತ್ತು. ಅವರ ಸಹಾಯಕನ ಮೇಜಿನ ಮೇಲೆ, ಮಧ್ಯಕಾಲದ ಮುದ್ರಿತ ಪುಸ್ತಕಗಳನ್ನು ಹೋಲುತ್ತಿದ್ದ, ಚರ್ಮದ ರಟ್ಟು ಹಾಕಿದ್ದ ದಪ್ಪ ಪುಸ್ತಕ ಒಂದಿತ್ತು.

ತಮ್ಮ ಭಾಷಣದ ನಡುವೆ ಸ್ಮಿರ್ನೋವ್ ಅಂದವಾಗಿ ಹೊದಿಕೆ ಹಾಕಿದ್ದ ಈ ಪುಸ್ತಕವನ್ನು ಕುರಿತು ಪ್ರಸ್ತಾಪಿಸಿದರು. ರೈನ್ ನದಿಯ ದಡದಲ್ಲಿದ್ದ ಯಾವುದೋ ಒಂದು ಕ್ಯಾಸ್ಲ್‌ನ ಮಾಲೀಕರ ಕುಟುಂಬದ ಚಿತ್ರ ಸಂಪುಟ ಅದಾಗಿರಲಿಲ್ಲ; ಚಾಂಪಿಯನ್ ರೇಸ್ ಕುದುರೆಗಳ ಚಿತ್ರ ಸಂಗ್ರಹವೂ ಆಗಿರಲಿಲ್ಲ. ನಾಜಿ ಶಿಬಿರಗಳೊಂದರಲ್ಲಿ ಗುಂಡು ಹಾರಿಸಿ ಅಥವಾ ವಿಷಾನಿಲದಿಂದ ಕೊಲ್ಲಲಾದ, ಬೇರೆ ಬೇರೆ ದೇಶಗಳ ಜನರ ಹೆಸರುಗಳ ಕೊನೆಯಿಲ್ಲದ ಪಟ್ಟಿಯು ಅದರಲ್ಲಿತ್ತು. ಕಷ್ಟಪಟ್ಟು ಆ ಹೊತ್ತಗೆಯನ್ನು ಎತ್ತಿಕೊಂಡ ಪ್ರಾಸಿಕ್ಯೂಟರ್ ನ್ಯಾಯಮೂರ್ತಿಗಳತ್ತ ತಿರುಗಿ, "ವಾರ್ಸಾದ ಘೆಟ್ಟೋದಲ್ಲಿನ (ಯೆಹೂದ್ಯರ ಪಾಳ್ಯದಲ್ಲಿನ) ಜನರನ್ನು ಯಶಸ್ವಿಯಾಗಿ ನಿರ್ನಾಮಗೊಳಿಸಿದ ಅಧಿಕೃತ ದಾಖಲೆ ಇದಷ್ಟೇ. ಹತರಾದವರ ಹೆಸರುಗಳು ಮಾತ್ರ ಇದರಲ್ಲಿವೆ ಸ್ವಾಮಿ. ಈ ಪುಸ್ತಕವನ್ನು ಪುರಾವೆಗಳ ಪಟ್ಟಿಗೆ ಸೇರಿಸಬೇಕೆಂದು ಕೋರುತ್ತೇನೆ".

ಆ ಹಂತದಲ್ಲಿ, ಎಲ್ಲರೂ ತಾವಾಗಿಯೇ ಕಟಕಟೆಯತ್ತ ನೋಟ ಬೀರಿದರು. ಪೋಲೆಂಡಿನಲ್ಲಿ ನಾಜಿ ಪ್ರಶಾಸನವನ್ನು ಸ್ಥಾಪಿಸಿದ, ಪೋಲೆಂಡಿನ ಮಾಜಿ ಗೌರ್ನರ್ ಜನರಲ್ ಹ್ಯಾನ್ಸ್ ಫ್ರಾಂಕ್ ಸೆಟೆದು ಕುಳಿತಿದ್ದ. ಕಪ್ಪು ಬಣ್ಣದ ಕನ್ನಡಕವು ಅವನ ಕಣ್ಣುಗಳನ್ನು ಮರೆ ಮಾಡಿದ್ದವು. ಈ ಖಳನಿಗೆ ಇತಿಹಾಸದಲ್ಲಿನ ತನ್ನ ಸ್ಥಾನವನ್ನು ಕುರಿತು ಚಿಂತೆ ಇದ್ದುದು ಸ್ಪಷ್ಟವಾಗಿತ್ತು- ತನ್ನ ಅಪರಾಧೀ ಕೃತ್ಯಗಳ ಮತ್ತು ಆಲೋಚನೆಗಳ ದಿನಚರಿಯನ್ ಅವನು ಬರೆದು ಇಟ್ಟಿದ್ದ. ಪ್ರಧಾನ ಸೋವಿಯತ್ ಪ್ರಾಸಿಕ್ಯೂಟರ್ ರವರ ಇನ್ನೊಬ್ಬ ಸಹಾಯಕನಾಗಿದ್ದ ಲೆವ್ ಷೀನಿನ್ ಘೋರ ಸಿನಿಕತನದಿಂದ ಕೂಡಿದ್ದ ದಿನಚರಿಗಳ ವಿಷಯವನ್ನು ಆಗಲೇ ನನಗೆ ತಿಳಿಸಿದ್ದ. ಷೀನಿನ್ ವಕೀಲನಾಗಿದ್ದುದು ಮಾತ್ರವಲ್ಲದೆ, ಪತ್ರಕರ್ತನೆಂದೂ, ಲೇಖಕನೆಂದೂ "ನೋಟ್ಸ್ ಆಫ್ ಎನ್ ಇನ್ವೆಸ್ಟಿಗೇಟರ್" (ತನಿಖೆಗಾರನೊಬ್ಬನ ಟಿಪ್ಪಣಿಗಳು) -ಎಂಬ ಜನಪ್ರಿಯ ಪುಸ್ತಕದ ಕರ್ತೃವೆಂದೂ ರಷ್ಯದಲ್ಲಿ ಖ್ಯಾತಿ ಗಳಿಸಿದ್ದ.

ಈ ನಾಜಿಯ ಹೃದಯವನ್ನೇ ಸಾರ್ವಜನಿಕರಿಗೆ ತೆರೆದಿಟ್ಟಿದ್ದ ದಪ್ಪವಾದ ಡಜನ್ ಗಟ್ಟಲೆ ನೋಟ್ ಬುಕ್ ಗಳು ಈಗ ಪ್ರಾಸಿಕ್ಯೂಷನ್ ನ ಬಳಿ ಇದ್ದುವು.

ಆ ದಿನಚರಿಯಲ್ಲಿ ಬರೆಯಲಾಗಿದ್ದ ಫ್ರಾಂಕ್ ನ ಚಿಂತನೆಗಳಲ್ಲಿ ಒಂದು ಸ್ಮಿರ್ನೋವ್ ಈಗ ಉಲ್ಲೇಖಿಸಿದ: "ಹನ್ನೆರಡು ಲಕ್ಷ ಯೆಹೂದಿಗಳನ್ನು ಹಸಿವಿನಿಂದ ಸಾಯುವ ಶಿಕ್ಷೆಗೆ ನಾವು ಗುರಿಪಡಿಸಿದೆವು ಎಂಬುದನ್ನು ಕೇವಲ ಗೌಣವಾಗಿ ಪರಿಗಣಿಸಬೇಕು". ಇದನ್ನು ಕೇಳಿದ ಫ್ರಾಂಕ್ ಒಣ ಮುಗುಳು ನಗೆ ನಕ್ಕನು.



ಇದು ನಾಝಿ ಫ್ಯಾಸಿಸಂನ ಅಸಹಿಷ್ಣುತೆಯನ್ನು ತೋರುವ ಚಿತ್ರ. ಇವರೆಲ್ಲಾ ಹಿಟ್ಲರನ ಸೇನೆಗೆ ಕೈಗೆ ಸಿಲುಕಿದ ಅಲ್ಪಸಂಖ್ಯಾತ ಯೆಹೂದಿಯರು ಹಾಗೂ ಇತರ ವಿದೇಶೀ ಜನಾಂಗಗಳ ಜನ. ನಾಝಿ ಶ್ರಮ ಶಿಬಿರಗಳಲ್ಲಿ ಎಲುಬುಗೂಡಾದ ಇವರನ್ನು ಸಾವಿನತ್ತ ಸಾಗಿಸುತ್ತಿದ್ದಾರೆ

ಆದರೆ, ಸತ್ತವರ ಹೆಸರುಗಳು ಇದ್ದ ಪುಸ್ತಕವನ್ನು ನ್ಯಾಯಾಧೀಶರುಗಳ ಮೇಜಿಗೆ ತಳ್ಳಿದ ಬಳಿಕ ಹಾಗೂ ವಾರ್ಸಾ ಘೆಟ್ಟೋವಿನ ನಿವಾಸಿಗಳ ನಿರ್ಮೂಲನದ ದುರಂತಮಯ ನಿರೂಪಣೆಯನ್ನು -ಎಲ್ಲರಿಗೂ ಕೇಳಿಸುವಂತೆ-ಜೋರಾಗಿ ಓದಿದಾಗ, ಫ್ರಾಂಕ್ ತನ್ನ ಕುರ್ಚಿಯಲ್ಲಿ ಹಿಂದಕ್ಕೆ ಒರಗಿಕೊಂಡು, ತನ್ನ ಪೆನ್ಸಿಲನ್ನು ಮುರಿದು, ಎಲ್ಲರಿಗೂ ಕಾಣಿಸುವಂತೆ ಏನೋ ಒಂದು ಬಡಬಡಿಸಲಾರಂಭಿಸಿದನೆಂದರೆ, ಅವನ ಪಕ್ಕದಲ್ಲಿದ್ದ ರೋಸೆನ್ ಬರ್ಗ ತಿರಸ್ಕಾರ ಭಾವದಿಂದ ಮುಖಗಂಟು ಹಾಕಿಕೊಂಡು, ತನ್ನ ಮೊಣ ಕೈಯಿಂದ ಅವನನ್ನು ತಿವಿದ.

ಆಚರಣೆಯಲ್ಲಿ ನ್ಯಾಷನಲ್ ಸೋಷಲಿಸಂ (ರಾಷ್ಟ್ರೀಯ ಸಮಾಜವಾದ, ಅರ್ಥಾತ್ ನಾಜಿವಾದ) ಹೇಗಿತ್ತು ಎಂಬುದನ್ನು ಈ ಭಯಾನಕ ಹೊತ್ತಗೆಯ ಪ್ರತಿಯೊಂದು ಪುಟವೂ, ಪ್ರತಿಯೊಂದು ಸಾಲೂ ಪ್ರಪಂಚಕ್ಕೆ ತಿಳಿಸಿದುವು.

ಜರ್ಮನಿ ಮತ್ತು ಆಕ್ರಮಿತ ದೇಶಗಳ ಯೆಹೂದಿಗಳ ಸಾಮೂಹಿಕ ನಿರ್ಮೂಲನವು ಹೇಗೆ ನಡೆಯಿತು ಎಂಬುದನ್ನು ಸಾಕಷ್ಟು ವಿಶದವಾಗಿ ವಿವರಿಸಿದ್ದ ಅನೇಕ ದಾಖಲೆಗಳನ್ನು ಅಮೇರಿಕನ್ ಪ್ರಾಸಿಕ್ಯೂಷನ್ ಆಗಲೇ ಮಂಡಿಸಿತ್ತು. ಆಸ್ತಿ ಪಾಸ್ತಿಗಳನ್ನು ಕಳೆದುಕೊಂಡು ತಮ್ಮ ಮನೆಗಳಿಂದ ಹೊರದೂಡಲ್ಪಟ್ಟ ಲಕ್ಷಾಂತರ ಜನರನ್ನು ಹಾಗೂ ವಿಷಾನಿಲದ ಕೋಣೆಗಳಲ್ಲಿ ಮತ್ತು ಅನಿಲದ ವಾಹನಗಳಲ್ಲಿ ಸತ್ತ ಲಕ್ಷೋಪಲಕ್ಷ ಜನರನ್ನು ಕುರಿತ ವರದಿಗೆ ಸಮನಾದ ಏನನ್ನೂ ನಾವು ಅವರೆಗೆ ಕೇಳಿರಲಿಲ್ಲ. ವಾರ್ಸಾ ಘೆಟ್ಟೋವನ್ನು ಅತ್ಯಂತ ನಿರ್ದಯವಾದ ರೀತಿಯಲ್ಲಿ ನೆಲಸಮ ಮಾಡಬೇಕೆಂದು ಎಸ್.ಎಸ್.ನ ರೈಕ್ಸ್ ಫ್ಯೂಹ್ರರನು (ಅಖಿಲ-ಜರ್ಮನ್ ಮುಖ್ಯಸ್ಥನು) ಕ್ರಾಕೋದಲ್ಲಿನ ಫ್ಯೂಹ್ರರ್ ನ (ಮುಖ್ಯಸ್ಥನ) ಮೂಲಕ 1943 ರ ಏಪ್ರಿಲ್ 23 ರಂದು ಆಜ್ಞೆ ಮಾಡಿದ್ದ. ವರದಿಯಲ್ಲಿ ಸ್ಟ್ರೂಪ್ ಹೀಗೆ ಬರೆದಿದ್ದ: "ಆದ ಕಾರಣ, ನಿವಾಸಿಗಳು ತಪ್ಪಿಸಿಕೊಂಡು ಹೋಗದಂತೆ, ಮನೆಗಳ ಪ್ರತಿಯೊಂದು ಗುಂಪಿಗೂ ಬೆಂಕಿ ಇಟ್ಟು ಯೆಹೂದಿಗಳ ಇಡೀ ವಸತಿ ಪ್ರದೇಶವನ್ನು ನಾಶ ಪಡಿಸಲು ನಾನು ನಿರ್ಧರಿಸಿದೆ." ಎಸ್‌ಎಸ್ ಹಾಗೂ ಅದರ ನೆರವಿಗಾಗಿ ನೀಡಲಾಗಿದ್ದ ಮಿಲಿಟರಿ ಪೋಲೀಸರು ಮತ್ತು ಸ್ಯಾಪರ್ ಗಳು (ಸೇನೆಯ ಇಂಜಿನಿಯರಿಂಗ್ ವಿಭಾಗಕ್ಕೆ ಸೇರಿದವರು) ನಿರ್ಗಮನದ ದ್ವಾರಗಳನ್ನು ಮುಚ್ಚಿ, ನೆಲದ ಮಟ್ಟದ ಅಂತಸ್ತಿನ ಕಿಟಕಿಗಳಿಗೆ ಹಲಗೆಗಳನ್ನು ಹೊಡೆದು, ಆಮೇಲೆ ಕಟ್ಟಡಗಳಿಗೆ ಬೆಂಕಿ ಇಟ್ಟುದ್ದನ್ನು ಅವನು ಕಾರ್ಯಸಾಧಕನ ರೀತಿಯಲ್ಲಿ ವಿವರಿಸಿದ್ದ. ನಗರದ ಇತರ ಎಲ್ಲ ಭಾಗಗಳಿಂದ ಓಡಿಸಲಾಗಿದ್ದ ಯೆಹೂದಿಗಳು ಇಲ್ಲಿ ಸೇರಿದ್ದುದರಿಂದ ಇಲ್ಲಿನ ಮನೆಗಳು ಅತ್ಯಂತ ಜನನಿಬಿಡವಾಗಿದ್ದವು. ಜೀವಸಹಿತವಾಗಿ ಬೆಂದು ಹೋಗುತ್ತಿದ್ದ ಈ ಜನಸಮೂಹಗಳ ಹೃದಯಭೇದಕವಾದ ಆಕ್ರಂದನವು ಆ ಮನೆಗಳಿಂದ ಹೊರಬರುತ್ತಿದ್ದಿತು. ಸಹಜ ಪ್ರವೃತ್ತಿಯಿಂದ ಜನರು, ಇನ್ನೂ ಬೆಂಕಿಯು ತಾಗದಿದ್ದ ಮೇಲಂತಸ್ತುಗಳಿಗೆ ಹೋಗಿ ಬದುಕಲ್ಯಾಸಿಸಿದರು. ಆದರೆ, ಉರಿಯು ಆ ಕಟ್ಟಡಗಳನ್ನು ನುಂಗಿ ಹಾಕಿತು. ಆ ಕಟ್ಟಡಗಳೊಳಗೆ ಸಿಕ್ಕಿಕೊಂಡಿದ್ದವರು ಎಲ್ಲ ಬಗೆಯ ಸುಪ್ಪತ್ತಿಗೆ-ದಿಂಬುಗಳನ್ನು ಕಿಟಕಿಗಳ ಮೂಲಕ ಆಚೆಗೆ ಎಸೆದರು. ಆಮೇಲೆ, ತಮ್ಮ ಮಕ್ಕಳನ್ನೂ, ಮುದುಕರನ್ನೂ ಉಳಿಸಲೋಸುಗ, ಅವರನ್ನು ಆ ಸುಪ್ಪತ್ತಿಗೆ -ದಿಂಬುಗಳ ಮೇಲಕ್ಕೆ ಎಸೆದರು. ಆಮೇಲೆ ಅವರು ತಾವೇ ಹೊರಕ್ಕೆ ನೆಗೆದರು. ಕೆಲವರ ಕೈಕಾಲುಗಳು ಮುರಿದು ಹೋದವು. ಕೆಲವರು ಸತ್ತರು. ಪವಾಡದ ರೀತಿಯಲ್ಲಿ ಉಳಿದುಕೊಂಡಿದ್ದ, ಕರಕಾಗಿ ಹೋಗಿದ್ದ ಅವಶೇಷಗಳಿಂದ ಹೊರಬರಲು ಯತ್ನಿಸಿದವರನ್ನು ಬೆನ್ನಟ್ಟಿ ಹಿಡಿಯಲಾಯಿತು. ಆ ವರದಿಯು ತಿಳಿಸಿರುವಂತೆ, "ಎಸ್.ಎಸ್. ದಳದವರು ತಮ್ಮ ಕರ್ತವ್ಯವನ್ನು ಕಟ್ಟುನಿಟ್ಟಾಗಿ ಪಾಲಿಸಿದರು ಮತ್ತು ಹೀಗೆ ಅಳಿದುಳಿದವರನ್ನು ನೋವಿನಿಂದಲೂ ಅನಗತ್ಯವಾದ ಸಂಕಟದಿಂದಲೂ ಪಾರು ಮಾಡಲು ಅವರನ್ನು ಗುಂಡಿಟ್ಟು ಕೊಂದರು.

(ಮುಂದುವರಿಯುವುದು)



ಮೈಸೂರಿನಲ್ಲಿ ಒಂದು ಸಂವಾದ

'ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶದ ಅನುಕೂಲಕ್ಕಾಗಿ ಭೂಕಾಯ್ದೆ ತಿದ್ದುಪಡಿ ರೈತನ ಗುಲಾಮಗಿರಿ''

ಇತ್ತೀಚಿನ ದಿನಗಳಲ್ಲಿ ಅನೇಕ ಬುದ್ಧಿಜೀವಿಗಳು, ರೈತರು ಯುವಕರು ಒಂದಲ್ಲ ಒಂದು ರೀತಿಯಲ್ಲಿ ಎಡಚಿಂತನೆಯಲ್ಲಿ ಕಾರ್ಯಪ್ರವೃತ್ತರಾಗುತ್ತಿರುವ ಮೈಸೂರಿನಲ್ಲಿ ಮೈಸೂರು ನಗರದ 'ಸಂವಾದ' ಪ್ರಗತಿಪರ ಜನರ ವೇದಿಕೆಯಲ್ಲಿ "ಸಾಮಾಜಿಕ ನ್ಯಾಯ ಮತ್ತು ಭೂಸುಧಾರಣಾ ತಿದ್ದುಪಡಿ' ಎಂಬ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು.

ವಿಷಯವನ್ನು ಕುರಿತು ಪ್ರಾಸ್ತಾವಿಕ ಭಾಷಣ ಮಾಡಿದ ಶಾಸಕ ಜಿ.ವಿ. ಶ್ರೀರಾಮರೆಡ್ಡಿ "ಅನಾದಿಕಾಲದಿಂದ ಇಂದಿನವರೆಗೆ ಭೂಮಿಯ ಮೇಲಿನ ಒಡೆತನ ಉಳುವವನ ಕೈಯಲ್ಲಿಲ್ಲದೇ ಕೆಲವೇ ಕೆಲವು ಆಳುವ ಜಮೀನ್ದಾರರು ಅಥವಾ ಭೂಮಾಲಿಕನ ಕೈಯಲ್ಲಿದೆ. ಅಲ್ಲದೇ ಉಳುವವನು ತನ್ನ ಶ್ರಮದ ಬೆಲೆಯನ್ನು ನಿರ್ಧರಿಸಲು ಅವಕಾಶವಾಗಿಲ್ಲ ಎಂದರು. 1952ರಿಂದ ಇಲ್ಲಿಯವರೆಗೆ ಅನೇಕ ಭೂಕಾಯ್ದೆ ಜಾರಿಯಾಗಿದ್ದರು ಭೂ ಒಡೆತನದಲ್ಲಿ ಮತ್ತು ಅದರ ಹಂಚಿಕೆಯಲ್ಲಿ ಅದು ಯಶಸ್ವಿಯಾಗಿ ಉಳುವವನ ಕೈಯಲ್ಲಿ ಸೇರಿಲ್ಲ. ಒಂದು ಸಮಾಧಾನಕರ ಅಂಶವೆಂದರೆ 1974 'ದೇವರಾಜ ಅರಸ ಭೂ ತಿದ್ದುಪಡಿ ಸ್ವಲ್ಪ ಮಟ್ಟಿಗೆ ಕ್ರಾಂತಿಕಾರಿಯಾಗಿ ಪರಿಣಮಿಸಿದೆ. ಈ ದಿಕ್ಕಿನಲ್ಲಿ ಬಂಗಾಳ ಮತ್ತು ಕೇರಳದಲ್ಲಿ ಹೆಚ್ಚಿನ ಮಟ್ಟದ ಭೂಸುಧಾರಣೆಯಾಗಿದೆ ಎಂದರು. ಅಲ್ಲದೇ ಸಾಮಾಜಿಕ ನ್ಯಾಯ ಕೇವಲ ಭೂಸುಧಾರಣೆಯೊಂದರಿಂದಲೇ ಸಾಧ್ಯವಿಲ್ಲ". ಎಲ್ಲಿಯವರೆಗೆ ಆರ್ಥಿಕ ಅಸಮಾನತೆ ಇರುವುದೋ ಅಲ್ಲಿಯವರೆಗೆ ಸಾಮಾಜಿಕ ನ್ಯಾಯ ಕೇವಲ ಜಾತಿ, ಜಾತಿಗೆ ಸೀಮಿತವಾಗಿರುವುದು. ಇದಕ್ಕಾಗಿ ಮುಂಬರುವ ದಿನಗಳಲ್ಲಿ ಒಂದು ದೊಡ್ಡ ಹೋರಾಟ ಮಾಡಬೇಕಾಗಿದೆ. ಕಾರಣ ಅಮೇರಿಕನ್ನರ ಸಾಮ್ರಾಜ್ಯಶಾಹಿಗಳು ಹಾಗೂ ಇತರ ಮುಂದುವರೆದ ದೇಶದ ಕಣ್ಣು ನಮ್ಮ ಭೂಮಿಯ ಮೇಲೆ ಬಿದ್ದಿದೆ ಎಂದು ಅವರು ಹೇಳಿದರು.

ನಂತರ ಮಾತನಾಡಿದ 'ಮೈಸೂರು ಅಧ್ಯಯನ ಸಂಸ್ಥೆ (ಅಭಿವೃದ್ಧಿ) ಪ್ರೊ. ವಿ.ಕೆ. ನಟರಾಜ ಶ್ರೀರಾಮರೆಡ್ಡಿಯವರು ಮಾತನ್ನು ಸಮರ್ಥಿಸುತ್ತಾ ದೇಶದಲ್ಲಿರುವ ಅನೇಕ ರಾಜಕೀಯ ಪಕ್ಷಗಳಲ್ಲಿ ಕೇವಲ ಎಡಪಕ್ಷ ಅದರಲ್ಲಿ 'ಮಾರ್ಕ್ಸ್‌ವಾದಿ ಚಿಂತಕ ಪಕ್ಷಕ್ಕೆ ಮಾತ್ರ. ಭೂಕಾಯ್ದೆಯ ಪರಿಮಿತಿಯ ಅನಾಹುತದ ಗಂಭೀರತೆ ತಿಳಿದಿದೆ. 1952ರಿಂದ ಜತ್ತಿ ಕಮಿಟಿಯಿಂದ, ದೇವರಾಜ ಅರಸರವರೆಗೆ 1974ರವರೆಗೆ ಅನೇಕ ಭೂಕಾಯ್ದೆ ಜಾರಿಗೆ ಬಂದರೂ ಅದರ ಆಚರಣೆ ಬರಲು ಕನಿಷ್ಠ 10-15 ವರ್ಷಗಳಾಗಿದೆ. ಕಾರಣ ಕಾನೂನಿನಲ್ಲಿರುವ ಅನೇಕ ಲೋಪದೋಷಗಳು. ಇದರಿಂದ ಮತ್ತೆ ಮತ್ತೆ ರೈತರಿಗೆ ಅನ್ಯಾಯವಾಗುತ್ತದೆ, ಎಲ್ಲದರ ಮಧ್ಯೆಯು 'Tenancy abolition' ಸ್ವಲ್ಪ ಕ್ರಾಂತಿಯುತವಾಗಿದೆ. ಭೂ ಪರಿಮಿತಿ ಕಾಯ್ದೆ ಜಾರಿಗೊಳಿಸುವಾಗ ಅದಕ್ಕೆ ಅಡ್ಡಬರುವ ಭೂಮಾಲಿಕರು ಒತ್ತುವರಿ ಭೂಮಿಯನ್ನು ಸಕ್ರಮಗೊಳಿಸುವಾಗ ತಾವು ಮುಂದಿರುತ್ತಾರೆ. ಈ ವಿಷಯದಲ್ಲಿ ರೈತ ಜಾಗರೂಕನಾಗಿರಬೇಕಾಗಿದೆ' ಎಂದರು.

ರಾಜ್ಯ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷ ಜಿ.ಎನ್. ನಾಗರಾಜ್ 'ಕೃಷಿಯಲ್ಲಿ ಉದಾರೀಕರಣದ ಪರಿಣಾಮ -ಅಂತರರಾಷ್ಟ್ರೀಯ ಅನುಭವ' ಎಂಬ ವಿಷಯವನ್ನು ಪ್ರಸ್ತಾವಿಸಿ ಈಗಲೂ ನರಸಿಂಹರಾಯರು ಹರಿಬಿಟ್ಟಿರುವ ಹೊಸ ಆರ್ಥಿಕ ನೀತಿ, ಜನಸಾಮಾನ್ಯನ ಎಲುಬುಗಳನ್ನು ಮುರಿದಿವೆ, ಐ.ಎಂ.ಎಫ್. ಮತ್ತು ವಿಶ್ವಬ್ಯಾಂಕ್ ನ ತಾಳಕ್ಕೆ ತಕ್ಕಂತೆ ಕುಣಿದು ಗ್ಯಾಟ್ ಪ್ರವೇಶದಿಂದ ನಮಗೆ ಪ್ರಯೋಜನ ಎಂಬ ಪೊಳ್ಳುವಾದದಿಂದ ನಮ್ಮನ್ನು ಮೋಸಗೊಳಿಸುವ ಪ್ರಯತ್ನ ನಡೆದಿದೆ. ನಮ್ಮ ನೆಲೆಯ ಬೆಲೆಯನ್ನು ಐ.ಎಂ.ಎಫ್. ನಿರ್ಧರಿಸುತ್ತಾರೆ ಎಂದರು. 'ಮೆಕ್ಸಿಕೋದಲ್ಲಿ ಆದ ಅಪಘಾತ ಭಾರತಕ್ಕೂ ಬರಬಹುದು ಎಂಬ ಶಂಕೆ ವ್ಯಕ್ತಪಡಿಸಿದರು. ಅಮೇರಿಕಾ ತನ್ನ ಕಪಿಮುಷ್ಠಿಯಿಂದ ಅರ್ಜೆಂಟಿನಾ, ಚಿಲಿ ದೇಶಗಳ ಭೂಹಿಡಿತವನ್ನು ಹೊಂದಿ ಅಲ್ಲಿ ಭೂಮಿಯನ್ನು ಬರಿದು ಮಾಡಿ, ಸರ್ವಾಧಿಕಾರ ಸ್ಥಾಪಿಸಿ, ದೇಶದ ಅರ್ಥಸ್ಥಿತಿಯನ್ನು ಛಿದ್ರಗೊಳಿಸಿತು. ಹೆಚ್ಚು ಆಮದು ಮಾಡಿಕೊಳ್ಳಲು ಒತ್ತಡ ಹೇರಿತು. [illegible] ದೇಶದಲ್ಲಿ ಕಾರ್ಗಿಲ್ ಮತ್ತು ಪಯೋನೀರ್ ಕಂಪನಿಗಳು ಸುಮಾರು 15000 ಹೆಕ್ಟೇರ್ ಜಮೀನನ್ನು ತಮ್ಮ ವಶಕ್ಕೆ ತೆಗೆದುಕೊಂಡಿವೆ. ಕೃಷಿ ಭೂಮಿಯನ್ನು ತಮ್ಮ ಕೈಗಾರಿಕೆಯ ಉದ್ಧಾರಕ್ಕೆ ತಯಾರು ಮಾಡಿದೆ. ಈ ಬಹುರಾಷ್ಟ್ರೀಯ ಕಂಪನಿ ಪ್ರವೇಶದಿಂದ ನಮ್ಮ ದೇಶಕ್ಕೆ ದೊಡ್ಡ ಪೆಟ್ಟು ಬೀಳಲಿದೆ. ಆರ್ಥಿಕ ಸಾರ್ವಭೌಮತೆ ನಾಶವಾಗಲಿದೆ. ಆದ್ದರಿಂದ ಇದರ ವಿರುದ್ಧದ ಹೋರಾಟ ದೇಶಪ್ರೇಮಿ ಹೋರಾಟ ಗೆಳೆಯರೆ" ಎಂದರು.

ಡಿ.ಎಸ್.ಎಸ್.ನ್ನು ಪ್ರತಿನಿಧಿಸಿ ಮಾತನಾಡಿದ ಹರಿಹರ ಆನಂದಸ್ವಾಮಿ 'ಪುರೋಹಿತಶಾಹಿ ವ್ಯವಸ್ಥೆ ಮತ್ತು ಬಂಡವಾಳಶಾಹಿ ವ್ಯವಸ್ಥೆ ಜೊತೆಜೊತೆಯಾಗಿ ಹೋಗುತ್ತವೆ. ಇಂದು ಸಹ ಕೃಷಿ ಕೂಲಿಕಾರರನ್ನು ಅಸ್ಪೃಶ್ಯರಂತೆ ಕಾಣಲಾಗುತ್ತದೆ. ಆದ್ದರಿಂದ ನಾವು ಇಂದು ಜಾತಿ ಮತ ಭೇದವನ್ನು ಮರೆತು ಪರಕೀಯರ ವಿರುದ್ಧ ಸಮರ ಸಾರಬೇಕಾಗಿದೆ ಎಂದರು.

ರೈತ ಸಂಘದ ಪ್ರತಿನಿಧಿ ನಾಗೇಂದ್ರ 'ಈಗಾಗಲೇ ಕಾರ್ಗಿಲ್ ನ ವಿರುದ್ಧ ಕೂಗು ಎದ್ದಿದೆ, ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ ಹೋರಾಟದಲ್ಲಿ ರೈತ ಸಂಘ ಅಲ್ಲದೇ ಎಲ್ಲ ಕಾರ್ಮಿಕ, ರೈತ, ಯುವ ಸಂಘಟನೆ ಒಂದು ದೊಡ್ಡ ವೇದಿಕೆಯಲ್ಲಿ ಐಕ್ಯ ಹೋರಾಟ ಮಾಡಬೇಕಾಗಿದೆ ಎಂದರು. 'ಸಂವಾದ' ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಮಾಜವಾದಿ ಈಶ್ವರ ವಹಿಸಿದ್ದರು. ವಂದನೆ ಬಸವರಾಜು ಡಿ.ವೈ.ಎಫ್.ಐ. ನ ಜಿಲ್ಲಾ ಕಾರ್ಯದರ್ಶಿ ನೆರವೇರಿಸಿದರು.

(ವರದಿ: ಆರ್. ಸುಬ್ರಮಣ್ಯ)

ವಿದ್ಯುತ್ ನೀತಿಯ ವಿರುದ್ಧ ರೈತರ ಧರಣಿ

ದೊಡ್ಡಬಳ್ಳಾಪುರ: ಏಪ್ರಿಲ್ 18ರಂದು ದೊಡ್ಡಬಳ್ಳಾಪುರ ತಾಲ್ಲೂಕಿನ ಹಲವಾರು ಗ್ರಾಮಗಳಿಂದ ಬಂದ ನೂರಾರು ರೈತರು, ವಿದ್ಯುತ್ ಉತ್ಪಾದನೆಯ ಸಂಪೂರ್ಣ ವಿದೇಶೀಕರಣ ಬೇಡವೆಂದು, ಸಮಗ್ರ ಯೋಜನೆಗಳನ್ನು ಕೈಗೊಳ್ಳಲು, ವಿದ್ಯುತ್ ಘಟಕ ಸ್ಥಾಪನೆಯ ಒಪ್ಪಂದಗಳನ್ನು ಬಹಿರಂಗ ಪಡಿಸಬೇಕು, ಜನಸಾಮಾನ್ಯರಿಗೆ ಮತ್ತು ರೈತರಿಗೆ ನೀಡುತ್ತಿರುವ ರಿಯಾಯಿತಿ ವಿದ್ಯುತ್ ಮುಂದುವರಿಸಬೇಕು ಎಂಬ ಬೇಡಿಕೆಗಳಿಗಾಗಿ ದೊಡ್ಡಬಳ್ಳಾಪುರ ವಿದ್ಯುಚ್ಛಕ್ತಿ ಮಂಡಳಿ ಮುಂದೆ ಧರಣಿ ನಡೆಸಿದರು.

ನೆರೆದಿದ್ದ ರೈತರನ್ನು ಮತ್ತು ಸಾರ್ವಜನಿಕರನ್ನು ಉದ್ದೇಶಿಸಿ ರೈತ ಮುಖಂಡರಾದ ಕಾಂ. ಮುಗುವಾಳಪ್ಪನವರು ಮತ್ತು ಕಾಂ. ಆರ್. ಚಂದ್ರತೇಜಸ್ವಿ ಮಾತನಾಡಿದರು. ಧರಣಿಯ ಸ್ಥಳಕ್ಕೆ ಭೇಟಿ ನೀಡಿದ ಕೆ.ಇ.ಬಿ.ಯ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರಿಗೆ ಮನವಿ ಪತ್ರವನ್ನು ಸಲ್ಲಿಸಲಾಯಿತು. ವೋಲ್ಟೇಜ್ ಸಮಸ್ಯೆಯನ್ನು ಕುರಿತಂತೆ ನಿರ್ದಿಷ್ಟವಾದ ದೂರುಗಳನ್ನು ಸ್ವತಃ ತಾವೇ ಗಮನಿಸಿ ಪರಿಹಾರ ನೀಡುವುದಾಗಿ ತಿಳಿಸಿದ ಅಭಿಯಂತರರು ಮನವಿಯನ್ನು ಸರ್ಕಾರಕ್ಕೆ ಕಳುಹಿಸುವುದಾಗಿ ಭರವಸೆ ನೀಡಿದರು.

ಪ್ರಾಂತ ರೈತ ಸಂಘದಿಂದ ಕೆ.ಇ.ಬಿಗೆ ಮುತ್ತಿಗೆ.

ಬಿಜಾಪುರ: ಕರ್ನಾಟಕ ಪ್ರಾಂತ ರೈತ ಸಂಘ ತಾಲೂಕ ಸಮಿತಿ ಬಿಜಾಪುರ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ತೆಗೆದು ಭ್ರಷ್ಟ ಕೆ.ಇ.ಬಿ. ಅಧಿಕಾರಿಗಳ ವಿರುದ್ಧ ಮತ್ತು ರೈತರ ಪಂಪ್ ಸೆಟ್ಟುಗಳಿಗೆ ವಿದ್ಯುತ್ ಕೊಡದ ವಿರುದ್ಧ ಘೋಷಣೆಗಳನ್ನು ಕೂಗುತ್ತ ಮೆರವಣಿಗೆಯು ಜಿಲ್ಲಾಧಿಕಾರಿಗಳ ಕಛೇರಿಗೆ ತೆರಳಿ ಮನವಿ ಕೊಟ್ಟಿತು. ನಂತರ ಕೆ.ಇ.ಬಿ. ಕಚೇರಿಗೆ ಹೋಗಿ ಮುತ್ತಿಗೆ ಹಾಕಿತು. ಮತ್ತು ಎಕ್ಸಿಕ್ಯೂಟಿವ್ ಇಂಜಿನಿಯರ್ ಶ್ರೀ ಶಂಕರಪ್ಪ ಇವರಿಗೆ ರೈತರ ಬೇಡಿಕೆಗಳ ಮನವಿ ಪತ್ರವನ್ನು ಕೊಡಲಾಯಿತು. ಈ ಸಂದರ್ಭದಲ್ಲಿ ರೈತ ಸಂಘದ ಜಿಲ್ಲಾ ಅಧ್ಯಕ್ಷ ಭೀಮಶಿ ಕಲಾದಗಿಯವರು ಮಾತನಾಡಿ ಅಧಿಕಾರಿಗಳು, ರಾಜಕಾರಣಿಗಳು ಮುಗ್ಧ ಬಡರೈತರನ್ನು ನಾಶ ಮಾಡುತ್ತಿದ್ದಾರೆ, ದೇವೆಗೌಡರು ಮಣ್ಣಿನ ಮಗ ಎಂದು ಹೇಳಿ ಮಣ್ಣಿನಲ್ಲಿ ದುಡಿಯುವ ರೈತರನ್ನೇ ಇವತ್ತು ಕಡೆಗಣಿಸಿ ನೋಡುತ್ತಿದ್ದಾರೆ ಇಂಥ ಅವಕಾಶವಾದಿಗಳು ಇರುವವರೆಗೆ ರೈತರ ಶೋಷಣೆ ತಪ್ಪುವುದಿಲ್ಲಾ ಇದರಿಂದ ರೈತರು ಜಾಗೃತರಾಗಬೇಕೆಂದು ರೈತರಿಗೆ ಕರೆಕೊಟ್ಟರು. ಮೆರವಣಿಗೆಯ ನೇತೃತ್ವವನ್ನು ಮಳಸಿದ್ಧ ನಾಯಕೊಡಿ, ಸೋಮು ರಾಠೋಡ್, ಭೀಮಸಿಕಲಾದಗಿ ಮೊದಲಾದ ಮುಖಂಡರು ಮತ್ತು ಮಹಿಳಾಸಂಘದ ಜಗ್ಗವ್ವ, ಅನುಸೂಯಾ ಕಾಶೆ ಮುಂತಾದವರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಶ್ರೀನಿವಾಸ ಪುರ:

ಕೋಲಾರ ಜಿಲ್ಲಾದ್ಯಾಂತ ಹಮ್ಮಿಕೊಂಡಿದ್ದ ರೈತರ ಪತಿಭಟನಾ ಧರಣಿಯ ಅಂಗವಾಗಿ ಶ್ರೀನಿವಾಸಪುರ ತಾಲ್ಲೂಕಿನಲ್ಲಿ ವಿದ್ಯುತ್ ಸಮಸ್ಯೆ ಕುಡಿಯುವ ನೀರಿನ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ತಾಲ್ಲೂಕಿನ ರೈತರು ನೂರಾರು ಸಂಖ್ಯೆಯಲ್ಲಿ ಏಪ್ರಿಲ್ 18 ರಂದು ಕೆ.ಇ.ಬಿ. /ಲೋಕೋಪಯೋಗಿ ಇಲಾಖೆ ಮತ್ತು ತಹಶೀಲ್ದಾರ್ ಕಛೇರಿಗಳ ಮುಂದೆ ಪ್ರತಿಭಟಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಪತ್ರಗಳನ್ನು ಸಲ್ಲಿಸಿದರು.

ಕೆ.ಇ.ಬಿ. ಕಛೇರಿ ಮುಂದೆ ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷ ಎನ್.ವೀರಪ್ಪರೆಡ್ಡಿ ಮತ್ತು ಕಾರ್ಯದರ್ಶಿ ಪಿ.ಆರ್. ನಾರಾಯಣಸ್ವಾಮಿಯವರು ರೈತರನ್ನು ಉದ್ದೇಶಿಸಿ ಮಾತನಾಡಿದರು.

ತಾಲ್ಲೂಕು ಕಛೇರಿ ಮುಂದೆ ಸೇರಿದ ರೈತರು ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ನಷ್ಟಗೊಳಗಾದ ರೈತರಿಗೆ ನಷ್ಟ ಪರಿಹಾರ ನೀಡಬೇಕೆಂದು ಒತ್ತಾಯಿಸಿದರು. ಇಲ್ಲಿನ ಈ ಹೋರಾಟದ ನಾಯಕತ್ವವನ್ನು ರಾಮಚಂದ್ರರೆಡ್ಡಿ(ಪಾತಕೋಟೆ), ವದಲಿ ನರಸಿಂಹ ವಿಶ್ವನಾಥ್ ಮತ್ತು ಕೂರಿಗೇಪಲ್ಲಿ ವೆಂಕಟರಮಣಪ್ಪ ನವರು ವಹಿಸಿದ್ದರು.

ಪವರ್ ಲೂಂ ಕೈಗಾರಿಕೆ ಬಂದ್

ದೊಡ್ಡಬಳ್ಳಾಪುರ: ಏಪ್ರಿಲ್ 15 ರಂದು ದೊಡ್ಡಬಳ್ಳಾಪುರದ ಪುರಭವನ ಆವರಣದಿಂದ ಬೆಳಿಗ್ಗೆ 10ಗಂಟೆಗೆ ಶೇ.4 ತೆರಿಗೆ ರದ್ದು ಮಾಡಲು ಇಲ್ಲವೇ ರೇಷ್ಮೆ ಬಟ್ಟೆ ಖರೀದಿಗೆ ಸರ್ಕಾರವೇ ತಕ್ಷಣ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿ, ತಮ್ಮ ಮಗ್ಗಗಳನ್ನು ನಿಲ್ಲಿಸಿ ಸಾವಿರಾರು ನೇಕಾರರು ಬೃಹತ್ ಮೆರವಣಿಗೆ ನಡೆಸಿದರು. ಮೆರವಣಿಗೆಯ ನೇತೃತ್ವವನ್ನು 'ಹೋರಾಟ ಸಮಿತಿಯ' ಅಧ್ಯಕ್ಷರಾದ ಕಾ. ಹೆಚ್. ಮುಗುವಾಳಪ್ಪ ಮತ್ತು ಕಾರ್ಯದರ್ಶಿ ಕಾ. ಕೃಷ್ಣಮೂರ್ತಿವಹಿಸಿದ್ದರು.

ತಾಲ್ಲೂಕು ಕಛೇರಿಯ ಮುಂದೆ ಪ್ರತಿಭಟನೆಯನ್ನು ನಡೆಸಿದ ನೇಕಾರರು ಮತ್ತು ಕಾರ್ಮಿಕರನ್ನು ಉದ್ದೇಶಿಸಿ ಕಾ. ಮುಗುವಾಳಪ್ಪ, ಕಾಂ. ಕೃಷ್ಣಮೂರ್ತಿ, ಜನತಾದಳದ ಶ್ರೀವೆಂಕಟರಾಮು ಹಾಗೂ ಸಗಟು ವ್ಯಾಪಾರಗಾರರ ಸಂಘದ ಶ್ರೀ ಉತ್ತಮ್ ಚಂದ್ ಮಾತನಾಡಿದರು. ಮನವಿಯನ್ನು ಸ್ವೀಕರಿಸಿದ ತಾಲ್ಲೂಕಿನ ತಹಸಿಲ್ದಾರರು ನೇಕಾರರ ಸಮಸ್ಯೆಯ ಪರಿಹಾರಕ್ಕೆ ಸರ್ಕಾರದೊಂದಿಗೆ ಸಮಾಲೋಚಿಸುವುದಾಗಿ ತಿಳಿಸಿದರು.

ಹೋರಾಟದ ತೀವ್ರತೆಯನ್ನು ಪರಿಗಣಿಸಿ. ತೆರಿಗೆಯನ್ನು ತೆಗೆದು ಹಾಕಿ ಬೇರೆ ವಿಧದಲ್ಲಿ ತೆರಿಗೆ ವಸೂಲಿ ಮಾಡಲು ಈಗ ಸರ್ಕಾರ ತೀರ್ಮಾನಿಸಿದೆ.



ಹಾಲು ಉತ್ಪಾದಕರ ಸಂಘದ ಚುನಾವಣೆ: ಸಿ.ಪಿ.ಐ(ಎಂ)ಗೆ ಜಯ

ಕೋಲಾರ: ಏಪ್ರಿಲ್ 29 ರಂದು ನಡೆದ ಕೋಲಾರ ಜಿಲ್ಲೆ ಶಿಡ್ಲಘಟ್ಟ ತಾಲ್ಲೂಕು ಕುಂದಲಗುರ್ಕಿ ಹಾಲು ಉತಾದಕರ ಸಹಕಾರ ಸಂಘಕ್ಕೆ ಚುನಾವಣೆಯಲ್ಲಿ ಕಾಂಗ್ರೆ ಜನತಾದಳ ಹಾಗೂ ಬಿ.ಜೆ.ಪಿ. ಮೈತ್ರಿ ಕೂಟ ಮತ್ತು ಸಿ.ಪಿ.ಐ(ಎಂ) ಮಧ್ಯೆ ತೀವ್ರ ಸೆಣಸಾಟ ನಡೆದು ಸಿ. ಪಿ.ಐ(ಎಂ) ಪಕ್ಷದ 9 ಜನ ಆರಿಸಿ ಬಂದಿದ್ದಾರೆ.

ಚುನಾಯಿತರಾದ ಅಭ್ಯರ್ಥಿಗಳು: ಸಿ.ಎನ್. ವೆಂಕಟೇಶ. ಕೊ. ನಾರಾಯಣಮ್ಮ ಕೆ.ವಿ. ವೆಂಕಟರಾಯಪ್ಪ, ಎಂ. ಮುನಿರಾಜು, ಕೆ.ಎಂ. ರಾಮಪ್ಪ, ಕೆ.ಹೆಚ್. ಹನುಮಂತರಾಯಪ್ಪ, ಮುನಿಹನುಮಂತಪ್ಪ, ಕೆ. ಸಿ ವೆಂಕಟೇಶ್ ಮತ್ತು ಕೆ.ಪಿ. ವೆಂಕಟೇಶ್.

ಕರ್ನಾಟಕ ಸುದ್ದಿ ಸಮಾಚಾರ

ಜನರಲ್ ವರ್ಕರ್ಸ್ ಯೂನಿಯನ್‌ನ ಮಹಾಸಭೆ

ಉಡುಪಿ: ಏಪ್ರಿಲ್ 23 ರಂದು ಉಡುಪಿ ತಾಲೂಕು ಜನರಲ್ ವರ್ಕರ್ಸ್ ಯೂನಿಯನ್ ಮಹಾಸಭೆ ಜರುಗಿತು. ಈ ಸಮಿತಿಯ ಅಧ್ಯಕ್ಷತೆಯನ್ನು ವಹಿಸಿದ್ದ ಕಾಂ. ಪಿ. ವಿಶ್ವನಾಥ ರೈಯವರು ಮಾತನಾಡುತ್ತಾ ಸರಕಾರ ಜ್ಯಾರಿ ಮಾಡಿದ ಕನಿಷ್ಠ ಸವಲತ್ತುಗಳ ಪ್ರಯೋಜನವನ್ನು ಕಾರ್ಮಿಕರಿಗೆ ಕೊಡದೆ, ಸರಿಯಾದ ದಾಖಲೆ ಪುಸ್ತಕಗಳನ್ನೂ ಇಡದೇ ಕಾರ್ಮಿಕರನ್ನು ದುಡಿಸುವ ಕ್ರಮಗಳು ಈಗಲೂ ಇವೆ. ಈ ಎಲ್ಲಾ ಅವ್ಯವಸ್ಥೆಗಳನ್ನು ಹೋಗಲಾಡಿಸಲು ಕಾರ್ಮಿಕರು ಸಂಘಟಿತರಾಗಬೇಕು ಎಂದು ಹೇಳಿದರು.

ಕಾರ್ಯದರ್ಶಿ ಕಾಂ. ಡೇವಿಡ್ ಎ. ಕರ್ಕಡರು ವರದಿಯನ್ನು ಮಂಡಿಸಿದರು. ನೈಯ್ಗೆ ಯೂನಿಯನ್‌ನ ಕಾರ್ಯದರ್ಶಿ ಕಾಂ. ಕೆ. ಗುರುರಾಜ ಸೆಟ್ಟಿಗಾರರು ಶುಭ ಕೋರಿ ಮಾತನಾಡಿದರು.

1995-96ನೇ ವರ್ಷಕ್ಕೆ ರಚಿಸಲಾದ ಹೊಸ ಕಾರ್ಯಕಾರಿ ಸಮಿತಿಯಲ್ಲಿ ಕಾಂ. ವಿಶ್ವನಾಥ ರೈ ಅಧ್ಯಕ್ಷರಾಗಿ, ಕಾಂ. ಡೇವಿಡ್ ಎ. ಕರ್ಕಡರು ಉಪಾಧ್ಯಕ್ಷರಾಗಿ, ಕಾಂ. ರಮೇಶ್ ಮೆಂಡನ್ ಕಾರ್ಯದರ್ಶಿಯಾಗಿ ಶ್ರೀಮತಿ ಕೆ. ಇಂದಿರಾ ಜತೆ ಕಾರ್ಯದರ್ಶಿಯಾಗಿ, ಶ್ರೀಮತಿ ಗೋಪಿಯವರು ಖಜಾಂಚಿಯಾಗಿ ಆಯ್ಕೆಯಾದರು.

ಆರಂಭದಲ್ಲಿ ಕಾಂ. ಡೇವಿಡ್ ಎ. ಕರ್ಕಡರು ಸ್ವಾಗತಿಸಿ ಧನ್ಯವಾದ ಅರ್ಪಿಸಿದರು.

ಬೀಡಿ ಕಾರ್ಮಿಕರ 29ನೇ ವಾರ್ಷಿಕ ಮಹಾಸಭೆ

ಉಡುಪಿ: ಬೀಡಿ ಎಂಡ್ ಟೊಬೆಕೋ ಲೇಬರ್ ಯೂನಿಯನ್‌ನ 29ನೇ ವಾರ್ಷಿಕ ಮಹಾ ಸಭೆಯು ಏಪ್ರಿಲ್ 23 ರಂದು ಉಡುಪಿಯ ಹನುಮಂತನಗರದಲ್ಲಿ ಕಾಂ. ಗುರುವ ಪೂಜಾರಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಸಿಪಿಐ(ಎಂ)ನ ಉಡುಪಿ ತಾಲೂಕು ಸಮಿತಿ ಕಾರ್ಯದರ್ಶಿ ಕಾಂ. ವಿಶ್ವನಾಥ ರೈಯವರು ಈ ಮಹಾಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಸಂಘದ ಕಾರ್ಯದರ್ಶಿ ಎಸ್. ಸಾಧು ಅಮೀನರು ಚಟುವಟಿಕೆಗಳ ವರದಿಯನ್ನು ಮಂಡಿಸಿದರು. ಮತ್ತು ಕನಿಷ್ಠ ವೇತನದ ಒತ್ತಾಯಕ್ಕಾಗಿ ನಡೆಯಲಿರುವ ಹೋರಾಟದ ವಿವರಣೆ ನೀಡಿದರು.

1995-96ನೇ ವರ್ಷಕ್ಕೆ ಯೂನಿಯನ್‌ಗೆ ಅಧ್ಯಕ್ಷರಾಗಿ ಗುರುವ ಪೂಜಾರಿ, ಉಪಾಧ್ಯಕ್ಷರಾಗಿ ಸುಂದರ ಪೂಜಾರಿ, ಶ್ರೀಮತಿ ಸುನಂದ, ಕಾರ್ಯದರ್ಶಿಯಾಗಿ ಎಸ್. ಸಾಧು ಅಮೀನ್, ಜತೆ ಕಾರ್ಯದರ್ಶಿಗಳಾಗಿ ಶ್ರೀಮತಿ ಎಸ್. ಗಿರಿಜ, ಶ್ರೀಮತಿ ವಿ. ಗಿರಿಜ, ಕೋಶಾಧಿಕಾರಿಯಾಗಿ ರಮೇಶ್ ಮೆಂಡನ್ ಇವರನ್ನು ಆಯ್ಕೆ ಮಾಡಲಾಯಿತು. ಮತ್ತು 13 ಜನರನ್ನು ಕಾರ್ಯಕಾರಿ ಸಮಿತಿಗೆ ಸದಸ್ಯರನ್ನಾಗಿ ಆಯ್ಕೆ ಮಾಡಲಾಯಿತು.

ಸಭೆಯ ಆರಂಭದಲ್ಲಿ ಕಾರ್ಯದರ್ಶಿ ಎಸ್. ಸಾಧು ಅಮೀನ್ ಸ್ವಾಗತಿಸಿ ಕೊನೆಗೆ ವಂದನಾರ್ಪಣೆ ಮಾಡಿದರು.

ಮೇ 9, 1995

ಫ್ಯಾಸಿಸಂ ಮೇಲೆ ವಿಜಯದ 50ನೇವಾರ್ಷಿಕೋತ್ಸವದ ಸಂದರ್ಭದಲ್ಲಿ ವಿಶೇಷ ಲೇಖನ

ಇಂದು ಫ್ಯಾಸಿಸಂನ ಸೋಲಿನ ವಾರ್ಷಿಕೋತ್ಸವದ ಆಚರಣೆಯೆಂದರೆ ನಮ್ಮ ದೇಶದಲ್ಲಿನ ಪ್ರತಿಗಾಮಿ ಶಕ್ತಿಗಳನ್ನು ಸೋಲಿಸುವ ನಮ್ಮ ನಿರ್ಧಾರವನ್ನು ಮತ್ತೊಮ್ಮೆ ಒತ್ತಿ ಹೇಳುವುದು. ಇದು ಎಲ್ಲಾ ದೇಶಪ್ರೇಮಿ ಶಕ್ತಿಗಳಿಗೆ ಸಿಪಿಐ(ಎಂ) ಕರೆ ಎನ್ನುವ ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯರಾದ ಕಾಂ. ಸೀತಾರಾಂ ಯೆಚೂರಿ ಈ ಲೇಖನದಲ್ಲಿ ಫ್ಯಾಸಿಸಂ ಮೇಲೆ ಚಾರಿತ್ರಿ... ವಿಜಯದಲ್ಲಿ ದುಡಿಯುವ ಜನಗಳ, ಸಮಾಜವಾದಿ ಸೋವಿಯೆತ್ ಒಕ್ಕೂಟದ ಮಹಾನ್ ಪಾತ್ರವನ್ನು ನೆನಪಿಸುತ್ತಾ ಫ್ಯಾಸಿಸಂ ಏಕೆ ಉದ್ಭವಿಸುತ್ತದೆ, ಭಾರತದಲ್ಲಿ ಫ್ಯಾಸಿಸ್ಟ್ ಮಾದರಿ... ಶಕ್ತಿಗಳು ಏಕೆ ಹೇಗೆ ತಲೆಯೆತ್ತಿವೆ ಎಂದು ವಿವರಿಸುತ್ತಾರೆ.

ಹಿಟ್ಲರನ ಹಾದಿಯಲ್ಲಿ ಭಾರತದ ಕಾವಿಪಡೆಗಳು

-ಸೀತಾರಾಂ ಯೆಚೂರಿ

ಫ್ಯಾಸಿಸಂ ಮೇಲೆ ವಿಜಯದ ಐವತ್ತನೇ ವಾರ್ಷಿಕೋತ್ಸವ ಆಚರಿಸುವ ವೇಳೆಗೆ ಸಮಾಜವಾದಿ ಸೋವಿಯೆತ್ ಒಕ್ಕೂಟದ ಅಸ್ತಿತ್ವ ಉಳಿದಿಲ್ಲ, ಇದೊಂದು ವಿಡಂಬನೆ, ಇತಿಹಾಸದ ದುರಂತ. ಆದರೆ ಫ್ಯಾಸಿಸಂ ಎಂಬ ದುರಂತವನ್ನು ನಾಗರಿಕತೆಯ ಮುನ್ನಡೆ ಸರಿಪಡಿಸಿದಂತೆ, ಇತಿಹಾಸ ಅದನ್ನು ಮೀರಿ ನಿಂತಂತೆ ಈ ದುರಂತವನ್ನು ಕೂಡಾ ಮಾನವ ಕುಲ ಅದಕ್ಕೆಷ್ಟೇ ಬೆಲೆ ತೆರಬೇಕಾಗಿ ಬಂದರೂ ಮೀರಿ ನಿಲ್ಲುತ್ತದೆ.

ಫ್ಯಾಸಿಸಂ ಸೋಲಿನಲ್ಲಿ ಸ್ಟಾಲಿನ್ ನೇತೃತ್ವದ ಸಮಾಜವಾದಿ ಸೋವಿಯೆತ್ ಒಕ್ಕೂಟದ ನಿರ್ಣಾಯಕ ಪಾತ್ರವನ್ನು ಪಕ್ಕಾ ಕಮ್ಯುನಿಸ್ಟ್ ದ್ವೇಷಿಗಳು ಮತ್ತು ಅವರ ಬಾಡಿಗೆ ಲೆಕ್ಕಣಿಕೆ ಓಡಿಸುವವರು ಮಾತ್ರ ನಿರಾಕರಿಸಲು ಸಾಧ್ಯ. ಆ ಯುದ್ಧದ ಪ್ರತಿಯೊಂದು ನಿಮಿಷಕ್ಕೂ ಸೋವಿಯೆತ್ ಒಕ್ಕೂಟ 9 ಜೀವಗಳ, ಪ್ರತಿಗಂಟೆಯೂ 857, ಹಾಗೂ ಪ್ರತಿದಿನವೂ 14000 ಜೀವಗಳ ಬೆಲೆ ತೆರಬೇಕಾಯಿತು. ಆದರೂ ಅವರು ಗೆದ್ದೇ ಗೆದ್ದರು. ಕೊನೆಗೂ ಹಿಟ್ಲರನ ರಾಜಧಾನಿಯ ಮೇಲೆ ಹಾರಿಸಿದ್ದು ಕುಡುಗೋಲು, ಸುತ್ತಿಗೆಯ ಕೆಂಬಾವುಟವೇ ಹೊರತು ಅಮೇರಿಕಾದ ನಕ್ಷತ್ರಗಳು ಮತ್ತು ಪಟ್ಟಿಗಳ ಬಾವುಟವಲ್ಲ!

ಅವರ ಇಂತಹ ಬೃಹತ್, ಅಭೂತಪೂರ್ವ ಮಾನವ ಪ್ರಯತ್ನ ಸಮಾಜವಾದದ ಶಕ್ತಿಗೆ, ದುಡಿಯುವ ಜನರ ಅಂತಿಮ ಸಾಮರ್ಥ್ಯಕ್ಕೆ ಜ್ವಲಂತ ಸಾಕ್ಷಿ. ಆರಂಭದಲ್ಲಿ ಸಾಮ್ರಾಜ್ಯಶಾಹಿ ಮಿತ್ರರು ವಿಶ್ವಾಸಘಾತ ಮಾಡಿದ್ದರೂ ಕೂಡಾ ಅವರು ಇದನ್ನು ಸಾಧಿಸಿದರು. ಅಮೇರಿಕಾ, ಬ್ರಿಟನ್, ಫ್ರೆಂಚ್ ಸೇನೆಗಳು "ಎರಡನೇ ಯುದ್ಧರಂಗ"ವನ್ನು 1942ರಲ್ಲೇ ಆರಂಭಿಸಿ ಕಾರ್ಯಾಚರಣೆ ಆರಂಭಿಸುವುದಾಗಿ ವಚನ ಕೊಟ್ಟಿದ್ದರೂ ಅದು ಎರಡು ವರ್ಷ "ವಿಳಂಬ"ಗೊಂಡು 1944 ರಲ್ಲಷ್ಟೇ ಆರಂಭವಾಯಿತು. ನಂತರ ಅಮೇರಿಕಾದ ಅಧ್ಯಕ್ಷರಾದ ಹ್ಯಾರಿ ಟ್ರೂಮನ್ "ಜರ್ಮನರು ಗೆಲ್ಲುವಂತಿದ್ದರೆ ನಾವು ರಷ್ಯನರಿಗೆ ಸಹಾಯ ಮಾಡಬೇಕು, ರಷ್ಯನ್ನರು ಗೆಲ್ಲುವಂತಿದ್ದರೆ ಜರ್ಮನರಿಗೆ ಸಹಾಯ ಮಾಡಬೇಕು. ಈ ರೀತಿ ಅವರು ಪರಸ್ಪರ ಎಷ್ಟು ಸಾಧ್ಯವೋ ಅಷ್ಟು ಜನರನ್ನು ಕೊಂದುಕೊಳ್ಳಲಿ" (ಜೂನ್ 24, 1941ರ ನ್ಯೂಯಾರ್ಕ್ ಟೈಮ್ಸ್ ವರದಿ) ಎಂದಿದ್ದರಂತೆ. ಬ್ರಿಟನ್ನಿನ ಪ್ರಧಾನಿಯಾಗಿದ್ದ ವಿನ್ಸ್‌ಟನ್ ಚರ್ಚಿಲ್ ರ ನೆನಪುಗಳಲ್ಲೂ "......ರಶ್ಯನ್ ಸೇನೆ ಶೀಘ್ರದಲ್ಲೇ ಸೋಲುತ್ತದೆ, ಬಹಳಷ್ಟು ಪ್ರಮಾಣದಲ್ಲಿ ನಾಶಗೊಳ್ಳುತ್ತದೆ ಎಂದು ಸುಮಾರಾಗಿ ಎಲ್ಲಾ ಜವಾಬ್ದಾರಿಯುತ ಮಿಲಿಟರಿ ಅಭಿಪ್ರಾಯ ಇತ್ತು" ಎಂದಾಗ ಇದೇ ಭಾವನೆಯ ಪ್ರತಿಧ್ವನಿ ಕಾಣಿಸುತ್ತದೆ. ಮೊದಲು ಸಮಾಜವಾದ ನಾಶವಾಗಲಿ, ನಂತರ ಯುದ್ಧದಿಂದ ಸುಸ್ತಾದ ಫ್ಯಾಸಿಸಂನ್ನು ಸೋಲಿಸಿ ಜಗತ್ತಿನ ಮೇಲೆ ತಮ್ಮ ಪ್ರಾಬಲ್ಯವನ್ನು ಮತ್ತೊಮ್ಮೆ ಸ್ಥಾಪಿಸಬಹುದು ಎಂಬುದು ಸಾಮ್ರಾಜ್ಯಶಾಹಿಗಳ ಅಭಿಪ್ರಾಯವಾಗಿತ್ತು. ಆದರೆ ಹಿಟ್ಲರ್ ಇಡೀ ಯುರೋಪನ್ನೇ ಧ್ವಂಸ ಮಾಡಿದ್ದ, ಸೋವಿಯೆತ್ ಒಕ್ಕೂಟದ ಮೇಲೆ ಏರಿಹೋಗುವ ಮೊದಲು ಪ್ಯಾರಿಸ್ ಮೂಲಕ ಹಾದು ಹೋಗಿದ್ದ ಎಂಬುದನ್ನು ಮಾತ್ರ ಅವರು ಅರಿಯಲಿಲ್ಲ.

> **ಪ್ರಜಾಪ್ರಭುತ್ವ, ಸಾಮಾಜಿಕ ಭದ್ರತೆ, ಸಾರ್ವಜನಿಕ ವಲಯ, ನಿರುದ್ಯೋಗ ಭತ್ಯೆ ಇತ್ಯಾದಿ ಆಧುನಿಕ ಪ್ರಜಾಪ್ರಭುತ್ವ ಮೌಲ್ಯಗಳೆಲ್ಲಾ ಸಮಾಜವಾದೀ ವಿಜಯದ ಫಲಗಳು.**

"ಬರ್ಲಿನ್‌ವರೆಗೂ ಬರುತ್ತೇವೆ"

ಇಂತಹ ವಿಶ್ವಾಸಘಾತವನ್ನೂ ಮೀರಿ ನಿಂತು ಸೋವಿಯೆತ್ ಒಕ್ಕೂಟ ಸ್ಟಾಲಿನ್ ಗ್ರಾಡ್ ನಲ್ಲಿ ಯುದ್ಧದ ಸ್ವರೂಪವನ್ನೇ ಬದಲಿಸಿತು. "ವೋಲ್ಗಾದ (ನದಿಯ) ಆಚೆ ನೆಲೆ ಇಲ್ಲ" ಎಂಬ ಸ್ಟಾಲಿನ್ ಘೋಷಣೆಗೆ ಓಗೊಡುತ್ತಾ ಪ್ರತಿಯೊಬ್ಬರೂ ತಮ್ಮ ಕೈಗೆ ಏನೇನು ಸಿಕ್ಕಿತೋ -ಹಾರೆ, ಪಿಕಾಸಿ, ಮನೆ ಬಳಕೆಯ ವಸ್ತುಗಳು- ಇವನ್ನೇ ಹಿಡಿದು ಯುದ್ಧದಲ್ಲಿ ಹೋರಾಡಿದರು.

ಮೊದಲ ಬಾರಿಗೆ ಸೋಲುಂಡು ಅವಾಕ್ಕಾದ ಹಿಟ್ಲರ್ ಸೇನಾ ಪಡೆಗಳು ಹಿಂದೆ ಸರಿಯುತ್ತಾ ಮಾಸ್ಕೋದ ಗೋಡೆಗಳ ಮೇಲೆ ಬರೆದರಂತೆ -"ಮಾಸ್ಕೋಗೆ ವಿದಾಯ, ನಾವು ಬರ್ಲಿನ್‌ಗೆ ಹಿಂದಿರುಗುತ್ತಿದ್ದೇವೆ" ಅದರ ಕೆಳಗೇ ಕೆಂಪು ಸೇನೆ ಬರೆಯಿತಂತೆ -"ನಾವು ಬರ್ಲಿನ್‌ವರೆಗೂ ಬರುತ್ತೇವೆ". ಅವರು ನಿಜವಾಗಿಯೂ ಅಲ್ಲಿಯ ವರೆಗೂ ಬೆನ್ನಟ್ಟಿ ಹೋದರು.

ಬಂಡವಾಳಶಾಹಿ ಸಿದ್ಧಾಂತಿಗಳು ಇವನ್ನೆಲ್ಲಾ ಅಳಿಸಿ ಹಾಕಲು ಎಷ್ಟೇ ಬಯಸಿದರೂ ಮಾನವ ಇತಿಹಾಸದಲ್ಲಿ ಸಮಾಜವಾದಿ ಸೋವಿಯೆತ್ ಒಕ್ಕೂಟದ ಈ ಪಾತ್ರ ರಕ್ತದಿಂದ ಬರೆದ, ಕೆತ್ತಿಟ್ಟ ಅಧ್ಯಾಯ. ಇವೆಲ್ಲಾ ಇತಿಹಾಸಲ್ಲಿ ಸ್ಪಷ್ಟವಾಗಿ ದಾಖಲಾಗಿವೆ. ಇಡೀ ಜಗತ್ತು ಇಂದು ಸ್ವಾತಂತ್ರ್ಯ, ಮುಕ್ತಿ ಹಾಗೂ ಎರಡನೇ ಮಹಾಯುದ್ಧದ ನಂತರ "ಪ್ರಜಾಪ್ರಭುತ್ವ"ದ ಬಗ್ಗೆ ಮಾತನಾಡಲು ಸಾಧ್ಯವಾಗಿದ್ದರೆ ಅದು ಕೆಂಪು ಸೇನೆ ಹಾಗೂ ಸೋವಿಯೆತ್ ಜನತೆಗೆ ಋಣಿಯಾಗಿರಬೇಕು.

ಸಮಾಜವಾದೀ ವಿಜಯದ ಫಲಗಳು

ನಿಜವಾಗಿ ಎರಡನೇ ಮಹಾಯುದ್ಧ ನಾಲ್ಕು ಯುದ್ಧಗಳ ಮೇಳ -ನಮ್ಮ ಯುಗದ ನಾಲ್ಕು ಮೂಲಭೂತ ವೈರುಧ್ಯಗಳನ್ನು ಬಿಂಬಿಸುವಂತದ್ದು -ಸ್ಪೇನಿನ ಅಂತರ್ಯುದ್ಧ (ಬಂಡವಾಳ ಮತ್ತು ಶ್ರಮಶಕ್ತಿಯ ನಡುವಿನ ವೈರುಧ್ಯ), ಮಂಚೂರಿಯಾದ ಮೇಲೆ ಜಪಾನಿನ ಧಾಳಿ (ವಸಾಹತು ಅಥವಾ ಮೂರನೇ ಜಗತ್ತು ಮತ್ತು ಸಾಮ್ರಾಜ್ಯಶಾಹಿ ನಡುವೆ ವೈರುಧ್ಯ), ಸಾಮ್ರಾಜ್ಯಶಾಹಿಗಳ ನಡುವಿನ ಯುದ್ಧ ಮತ್ತು ಸಾಮ್ರಾಜ್ಯಶಾಹಿ ಹಾಗೂ ಸಮಾಜವಾದದ ನಡುವಿನ ಯುದ್ಧ.

ಸಮಾಜವಾದ ಜಯಶಾಲಿಯಾದದ್ದು ಭವಿಷ್ಯದ ಬೆಳವಣಿಗೆಗಳಿಗೆ ಹಾದಿ ತೋರಿಸಿತು. ವಸಾಹತುಗಳು ಒಂದೊಂದಾಗಿ ವಿಮೋಚನೆಗೊಂಡವು. ಬಂಡವಾಳಶಾಹಿ "ಕಲ್ಯಾಣ ಆರ್ಥಿಕ"ದ ನೀತಿ ಅಂಗೀಕರಿಸಿ ಕಾರ್ಮಿಕ ವರ್ಗ ಅದುವರೆಗೆ ಊಹಿಸಲಾಗದ ರಿಯಾಯ್ತಿಗಳನ್ನು ಕೊಟ್ಟಿತು. ಪ್ರಜಾಪ್ರಭುತ್ವ, ಸಾಮಾಜಿಕ ಭದ್ರತೆ, ಸಾರ್ವಜನಿಕ ವಲಯ, ನಿರುದ್ಯೋಗ ಭತ್ಯೆ ಇತ್ಯಾದಿ ಆಧುನಿಕ ಪ್ರಜಾಪ್ರಭುತ್ವ ಮೌಲ್ಯಗಳೆಲ್ಲಾ ಸಮಾಜವಾದೀ ವಿಜಯದ ಫಲಗಳು.

ಇಂದು ಆಧುನಿಕ ನಾಗರಿಕತೆಯ ಸಂಕೇತಗಳು, ಪ್ರತೀಕಗಳು ಎಂದೆಲ್ಲಾ ಪ್ರದರ್ಶಿಸುತ್ತಿರುವ ಪರಿಕಲ್ಪನೆಗಳು ಫ್ಯಾಸಿಸಂ ಮೇಲಿನ ವಿಜಯದ ಪರಿಣಾಮವಲ್ಲದೆ ಬೇರೇನೂ ಅಲ್ಲ. ಇಂತಹ ವಿಜಯದ ಮುಂಚೂಣಿಯಲ್ಲಿದ್ದದ್ದು ಸಮಾಜವಾದಿ ಸೋವಿಯೆತ್ ಒಕ್ಕೂಟ.

> **ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯ ಹಾಗೂ ಅದರ ಕಾರ್ಯದರ್ಶಿಯಾಗಿದ್ದ ಜೋರ್ಜಿ ದಿಮಿತ್ರೋವ್ ಫ್ಯಾಸಿಸಂ "ಗುತ್ತೇದಾರಿ ಬಂಡವಾಳದ ಬಹಿರಂಗ ಭಯೋತ್ಪಾದಕ ಸರ್ವಾಧಿಕಾರ" ಎಂದು ವರ್ಣಿಸಿದರು.**

ಫ್ಯಾಸಿಸಂ ಎಂದರೇನು?

ಆದರೆ ಒಂದು ಪ್ರಶ್ನೆ ಏಳುತ್ತದೆ. 50 ವರ್ಷಗಳ ಹಿಂದಿನ ಈ ವಿಜಯದ ಅರ್ಥ ಫ್ಯಾಸಿಸಂ ಮುಂದೆಂದೂ ಕಾಣಿಸಿಕೊಳ್ಳದಂತೆ ಅದನ್ನು ಸಮಾಧಿ ಮಾಡಲಾಯಿತು ಎಂದೇ? ಅಲ್ಲ, ಸಾಮ್ರಾಜ್ಯಶಾಹಿ ಹಾಗೂ ಬಂಡವಾಳಶಾಹಿ ಶೋಷಣಾ ವ್ಯವಸ್ಥೆ ಇರುವವರೆಗೆ ಫ್ಯಾಸಿಸ್ಟ್ ಪ್ರವೃತ್ತಿಯೂ ಇದೇ ಇರುತ್ತದೆ. ಅದು ವಿಭಿನ್ನ ಸಂದರ್ಭಗಳಲ್ಲಿ ವಿಭಿನ್ನ ಸ್ವರೂಪಗಳಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತದೆ.

ಫ್ಯಾಸಿಸಂ ಎಂಬುದು ಅದೇ ಬಂಡವಾಳಶಾಹೀ ವರ್ಗಆಳ್ವಿಕೆಯ ಒಂದು ರೂಪ. ಆಳುವ ವರ್ಗಗಳು ತಮ್ಮ ಆಳ್ವಿಕೆಯನ್ನು ಉಳಿಸಿಕೊಳ್ಳಲು ಸದ್ಯದ ಅದರ ಸ್ವರೂಪಗಳನ್ನು ಕಿತ್ತೆಸೆಯಬೇಕಾದಾಗ ಫ್ಯಾಸಿಸಂ ಮೂಡಿ ಬರುತ್ತದೆ. ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯ ಹಾಗೂ ಅದರ ಕಾರ್ಯದರ್ಶಿಯಾಗಿದ್ದ ಜೋರ್ಜಿ ದಿಮಿತ್ರೋವ್ ಫ್ಯಾಸಿಸಂ "ಗುತ್ತೇದಾರಿ ಬಂಡವಾಳದ ಬಹಿರಂಗ ಭಯೋತ್ಪಾದಕ ಸರ್ವಾಧಿಕಾರ" ಎಂದು ವರ್ಣಿಸಿದರು.

ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯದ 7ನೇ ಮಹಾಧಿವೇಶನಕ್ಕೆ ದಿಮಿತ್ರೋವ್ ಸಲ್ಲಿಸಿದ ವರದಿ ಇಂದಿಗೂ ಫ್ಯಾಸಿಸಂನ ಉದಯದ ಬಗ್ಗೆ ಅತ್ಯಂತ ವೈಜ್ಞಾನಿಕವಾದ, ವಿಸ್ತಾರವಾದ ವಿವರಣೆ. ಆಳುವ ವರ್ಗಗಳಿಗೆ ಪ್ರಜಾಪ್ರಭುತ್ವದ ಮುಖವಾಡವನ್ನು ಕಿತ್ತೆಸೆದು ಫ್ಯಾಸಿಸಂನ್ನು ಅಪ್ಪಿಕೊಳ್ಳುವ ಅಗತ್ಯ ಯಾವಾಗ ಬರುತ್ತದೆ? ಒಂದೋ ಅದರ ಆಳ್ವಿಕೆಗೆ ಕಾರ್ಮಿಕ ವರ್ಗದಿಂದ ಬೆದರಿಕೆ ಬಂದಾಗ ಅಥವಾ ಹಳೆಯ ರೀತಿಯಲ್ಲಿ ಆಳ್ವಿಕೆ ನಡೆಸುವುದು ಇನ್ನು ಮುಂದೆ ತಮಗೆ ಸಾಧ್ಯವಿಲ್ಲ ಎಂದು ಅನಿಸಿದಾಗ.

ಕ್ರಾಂತಿಕಾರಿ ಸನ್ನಿವೇಶದ ಬಗ್ಗೆ ಹೇಳುತ್ತಾ ಒಮ್ಮೆ ಲೆನಿನ್ ಆಳುವ ವರ್ಗಗಳು ಹಳೆಯ ರೀತಿಯಲ್ಲಿ ಆಳಲು ಸಾಧ್ಯವಿಲ್ಲವಾದಾಗ ಹಾಗೂ ಜನ ಕೂಡಾ ಹಳೆಯ ರೀತಿಯಲ್ಲಿ ಆಳಿಸಿಕೊಳ್ಳಲು ಇನ್ನು ಮುಂದೆ ಸಿದ್ಧವಿಲ್ಲ ಎನ್ನುವಂತಾದಾಗ ಒಂದು ಕ್ರಾಂತಿಕಾರಿ ಸನ್ನಿವೇಶ ಉಂಟಾಗುತ್ತದೆ ಎಂದಿದ್ದರು. ಆದರೆ ಪರಿಸ್ಥಿತಿ ಈ ಘಟ್ಟವಿನ್ನೂ ತಲುಪದಿದ್ದಾಗ ಅಂದರೆ ಜನ ಇನ್ನೂ ಸಿದ್ಧರಾಗಿಲ್ಲದಾಗ, ಕನಿಷ್ಠ ಕಾರ್ಮಿಕ ವರ್ಗ ಅಧಿಕಾರ ಸೂತ್ರವನ್ನು ಹಿಡಿಯಲು ಸಿದ್ಧವಾಗಿರದಿದ್ದಾಗ ಏನಾಗುತ್ತದೆ? ಆಳುವ ವರ್ಗಗಳಿಗೆ ತಮ್ಮ ಆಂತರಿಕ ಬಿಕ್ಕಟ್ಟಿನಿಂದಾಗಿ ಹಳೆಯ ರೀತಿಯಲ್ಲಿ ಆಳ್ವಿಕೆ ನಡೆಸುವುದು ಇನ್ನು ಸಾಧ್ಯವಿಲ್ಲ ಎಂದನಿಸಿದಾಗ ಅವರು ತಮ್ಮ ಆಳ್ವಿಕೆಯನ್ನು ಉಳಿಸಿ, ಕ್ರೋಢೀಕರಿಸಲು ಫ್ಯಾಸಿಸ್ಟ್ ಮಾದರಿ ವಿಧಾನಗಳನ್ನು ಅಂಗೀಕರಿಸುತ್ತಾರೆ.

ಫ್ಯಾಸಿಸಂನ ಸೋಲು ಹಾಗೂ ವಸಾಹತುಗಳ ವಿಮೋಚನೆ ಆರಂಭವಾದಾಗ ಹಲವು ವಸಾಹತು ದೇಶಗಳು ಸಂಸದೀಯ ಪ್ರಜಾಪ್ರಭುತ್ವವನ್ನು ಅಂಗೀಕರಿಸಿದವು, ಸ್ವಾವಲಂಬೀ ಆರ್ಥಿಕದ ಮೂಲಕ ಗುಲಾಮಿಕೆಯಿಂದ ಮುಕ್ತವಾಗುವ ಕಣ್ನೋಟವನ್ನು ಅಂಗೀಕರಿಸಿದವು. ಆದರೆ ಈ ಕಣ್ನೋಟ ಕುಸಿದು ಬೀಳಲಾರಂಭಿಸಿದಾಗ ಆಳುವ ವರ್ಗಗಳು ಪ್ರಜಾಪ್ರಭುತ್ವ ಮುಖವಾಡಗಳನ್ನು ಕಿತ್ತೆಸೆದು ಸರ್ವಾಧಿಕಾರವನ್ನೇ ಅಂಗೀಕರಿಸುತ್ತವೆ. ಭಾರತದ ಜತೆಗೂಡಿ ಅಲಿಪ್ತ ಆಂದೋಲನ ಸ್ಥಾಪಿಸಿದ ಇಂಡೋನೇಷ್ಯಾ, ಇಜಿಪ್ಟ್ ಗಳು ಇದಕ್ಕೆ ಜ್ವಲಂತ ಉದಾಹರಣೆಗಳು.

ಭಾರತದಲ್ಲಿ ಈಗ

ಭಾರತವೂ ಇಂದು ಇಂತಹುದೇ ಸನ್ನಿವೇಶದಲ್ಲಿದೆ. ಈಗ ಜರ್ಮನ್ ಸ್ವರೂಪದ ಫ್ಯಾಸಿಸಂನ ಪ್ರಶ್ನೆ ಇಲ್ಲ. ಆದರೆ ಆಳುವ ವರ್ಗಗಳ ಅತ್ಯಂತ ಪ್ರತಿಗಾಮಿ ವಿಭಾಗಗಳು ತಮ್ಮ ರಾಜಕೀಯ ಗುರಿಸಾಧನೆಗಾಗಿ ಫ್ಯಾಸಿಸ್ಟ್ ವಿಧಾನಗಳನ್ನು, ಸೂತ್ರಗಳನ್ನು ಅಂಗೀಕರಿಸುತ್ತವೆ. ಆಳುವ ವರ್ಗದ ನೀತಿಗಳ ಹಾಗೂ ಅದರ ಆಳ್ವಿಕೆಯ ಬಿಕ್ಕಟ್ಟಿನ ಪರಿಣಾಮಗಳಿಂದಾಗಿ ಜನಗಳಲ್ಲಿ ಉಂಟಾಗಿರುವ ಅಸಂತೃ... ಯನ್ನು ಬಂಡವಾಳಶಾಹಿ-ಭೂಮಾಲಿ... ವರ್ಗಆಳ್ವಿಕೆಯ ಅತ್ಯಂತ ಪ್ರತಿಗಾಮಿ ವಿಭಾಗಗಳು ತಮ್ಮ ರಾಜಕೀಯ ಗುರಿಸಾಧನೆ... ದುರುಪಯೋಗ ಪಡಿಸಿಕೊಳ್ಳುತ್ತವೆ.

ಆರ್.ಎಸ್.ಎಸ್.-ಬಿ.ಜೆ.ಪಿ.-ವಿ.ಹೆಚ್... ಕೂಟ ಅಂದರೆ ಕಾವಿಪಡೆಗಳು ಈ... ಅಂಗೀಕರಿಸುತ್ತಿರುವ ವಿಧಾನಗಳಿಗೂ ಫ್ಯಾಸಿ... ಯುರೋಪನಲ್ಲಿ ಎದ್ದು ಬಂದಾಗ ಅಂಗೀ... ರಿಸಿದ ವಿಧಾನಗಳಿಗೂ ಬಹಳಷ್ಟು ಸಾಮ್ಯ... ಗಳಿವೆ- ಭಯ ಮೂಡಿಸುವಷ್ಟು ಸಾಧ್ಯತೆ... ಳಿವೆ. ಮೊದಲನೆಯದಾಗಿ, ಈ ಪಡೆಗ... ಫ್ಯಾಸಿಸ್ಟ್ ಮಾದರಿಯ "ಹಿಂದೂರಾಷ್ಟ... ಗುರಿಸಾಧನೆಗೆ ಸೈದ್ಧಾಂತಿಕ ಚೌಕಟ್ಟು ಮಾ... ವಲ್ಲ, ಸಂಘಟನಾ ಚೌಕಟ್ಟನ್ನೂ ಒದಗಿಸಿ... (ಈ ಬಗ್ಗೆ 'ಐಕ್ಯರಂಗ'ದಲ್ಲಿ ಹಾಗೂ ಸಿಪಿಐ(ಎಂ) ಪ್ರಕಟಣೆಗಳಲ್ಲಿ ಈಗಾಗಲೇ ವಿವರಿಸ... ಗಿದೆ)

ಈ ಪ್ರಯತ್ನದ ಸಾರವೆಂದರೆ ಹಿಟ್ಲ... ಮಾಡಿದ ರೀತಿಯಲ್ಲಿ ವಿಭಿನ್ನ ರೀತಿಯ... ಜನಗಳನ್ನು ಅವರ 'ಹೆಮ್ಮೆ' ಯ ಹೆಸ... (ಆರ್.ಎಸ್.ಎಸ್. ಮಾದರಿಯಲ್ಲಿ ಒಂ... ಅಖಂಡ ಹಿಂದುತ್ವ) ಒಂದುಗೂಡಿಸುವು... ಇದಕ್ಕಾಗಿ ಒಂದು 'ಶತ್ರು' ವನ್ನು ಸೃಷ್ಟಿಸಿ ... ಸಂಕಟಗಳಿಗೂ ಆ 'ಶತ್ರು'ವೇ ಕಾರ... ಎಂದು ಬಿಂಬಿಸುವುದು (ಹಿಟ್ಲರ್‌ಗೆ ಯೆಹೂ... ದಿಗಳಿದ್ದಂತೆ ಆರ್.ಎಸ್.ಎಸ್.ಗೆ ಮು... ಮರು ಈ 'ಶತ್ರು'ಗಳು) ಆ 'ಶತ್ರು'ಗಳ... ಏನು ಮಾಡಬೇಕು ಎಂಬುದರ ಬಗ್ಗೆಯ... ಅವೇ ಪಥ್ಯಗಳು - ಆ 'ಶತ್ರು'ವಿನ ... ದ್ವೇಷ ಹರಡಿಸುವುದು, ಆ 'ಶತ್ರು'... ನಿರ್ಮೂಲನ ಇತ್ಯಾದಿ.

ಈ ಸೈದ್ಧಾಂತಿಕ ಚೌಕಟ್ಟನ್ನು "ಸಾಕ... ದೊಡ್ಡ ಸುಳ್ಳುಗಳನ್ನು ಸಾಕಷ್ಟು ಬಾರಿ ಹ... ಸತ್ಯವೆಂದು ಕಾಣಿಸುವ" ಗೋಬೆಲ್ಸ್ ತಂ... (ಗೋಬೆಲ್ಸ್ ಹಿಟ್ಲರನ ಪ್ರಚಾರ ಮಂತ್ರಿ... ಗಿದ್ದಾತ) ಮೂಲಕ ವಾಸ್ತವಗೊಳಿಸಲು ಪ್ರ... ತ್ನಿಸಲಾಗುತ್ತಿದೆ.

"ಫ್ಯಾಸಿಸಂ ಸಾಮ್ರಾಜ್ಯಶಾಹಿಯ ಅತ್ಯಂತ ಪ್ರತಿಗಾಮಿ ವಲಯಗಳ ಹಿತಾಸಕ್ತಿಗಳ... ವಾಗಿ ಕಾರ್ಯನಿರ್ವಹಿಸುತ್ತಾ ಹಳೆಯ ಬಂ... ವಾಳಶಾಹಿ ಪಕ್ಷಗಳನ್ನೂ ಎಂದೂ ಒಪ್ಪ... ರದ ತನ್ನ ನಿಲುವಿನ ಮೂಲಕ ಹಳ... ಬಂಡವಾಳಶಾಹಿ ಸರಕಾರ ಕೈಬಿಟ್ಟ ಜ... ಮೂಹಗಳ ನಿರಾಸೆಯನ್ನು". -ತನ್ನ... ವಾಗಿ ಬಳಸಿಕೊಳ್ಳುತ್ತದೆ ಎಂದು ದಿ...



ಹಾರೆ, ಪಿಕಾಸಿಗಳು ಹಿಂದುತ್ವದ "ಹೆಮ್ಮೆ"ಯ ಪ್ರತೀಕಗಳೇ?

> **ಆರ್.ಎಸ್.ಎಸ್.-ಬಿ.ಜೆ... -ವಿ.ಹೆಚ್.ಪಿ.ಕೂಟ... ಅಂದರೆ ಕಾವಿಪಡೆಗ... ಈಗ ಅಂಗೀಕರಿಸು... ತ್ತಿರುವ ವಿಧಾನಗಳಿಗ... ಫ್ಯಾಸಿಸಂ ಯುರೋ... ಪನಲ್ಲಿ ಎದ್ದು ಬಂದ... ಅಂಗೀಕರಿಸಿದ ವಿಧಾ... ಳಿಗೂ ಬಹಳಷ್ಟು ಸಾಮ್ಯತೆಗಳಿವೆ-ಭಯ ಮೂಡಿಸುವಷ್ಟು ಸಾಧ್ಯತೆಗಳಿವೆ.**



ೂವ್ ಹೇಳುತ್ತಾರೆ.

ಇಂದು ಕಾವಿಪಡೆಗಳು ಸ್ವತಂತ್ರ ಾರತದ ರಾಜಕೀಯದ ಆಧಾರದ ಬಗಳಾದ ಜಾತ್ಯಾತೀತತೆ ಮತ್ತು ಜಾಪ್ರಭುತ್ವದ ಮೇಲೆ ಎಂತಹಾ ಷಪೂರಿತ ಧಾಳಿ ನಡೆಸುತ್ತಿವೆ ಂಬುದನ್ನು ಗಮನಿಸಿ. ಅದೇ ರೀತಿ ಬ್ರಿ ಮಸೀದಿಯ ಧ್ವಂಸ ದೇಶದ ಗಿನ ಸಂವಿಧಾನ ಹಾಗೂ ಕಾನೂ ನ ನಗ್ನ ಉಲ್ಲಂಘನೆ ಮಾಡಿ ತಾನು ಡೆಸಿದ ಕೃತ್ಯವಲ್ಲ, ಬದಲಾಗಿ ಅದಕ್ಕೆ ಂಪೂರ್ಣ ಹೊಣೆ ಪ್ರಸ್ತುತ ಸರಕಾರದ ೀತಿಗಳೇ ಎಂದು ಎಷ್ಟು ಆಕ್ರಾಮಕವಾಗಿ ವಿ ಪಡೆಗಳು ಸಾರುತ್ತಿವೆ ಎಂಬುದನ್ನು ಮನಿಸಿ.

ದಿಮಿತ್ರೋವ್ ಮುಂದುವರಿಯುತ್ತಾ ್ಯಾಸಿಸಂ ಒಂದೆಡೆ ಜನಗಳನ್ನು ಅತ್ಯಂತ ಷ್ಟ ಹಾಗೂ ದುಷ್ಟ ಶಕ್ತಿಗಳ ಮರ್ಜಿಗೆ ಳಪಡಿಸುತ್ತಲೇ ಇತ್ತ ಒಂದು ಪ್ರಾಮಾಣಿಕ, ಾಗೂ ಭ್ರಷ್ಟತೆಗೊಳಗಾಗಲಾರದ ಸರಕಾರ ಬಿಸುವ ಬೇಡಿಕೆಯ ಟ್ಟು ಜನಗಳ ಆಳ ದ ಭ್ರಮನಿಸರ್ಸನದ ಭ ಪಡೆಯುತ್ತದೆ...... ್ಯಾಸಿಸಂ ಜನರನ್ನು ಕ್ತಿಗಳು ಮಾಡುವ ತಂತ್ರ ನನ್ನು. ಆಯಾಯ ಶದ ವಿಶಿಷ್ಟತೆಗೆ ಅನು ಣವಾಗಿ ರೂಪಿಸಿಕೊ ್ತದೆ. ಆಯಾಯ ಶದ ಪುಟ್ಟ ಬಂಡ ಳಶಾಹಿ ವಿಭಾಗ, ಅಷ್ಟೇ ಅಲ್ಲ ಅಭಾವ, ರುದ್ಯೋಗ, ಅಭದ್ರತೆಯಿಂದಾಗಿ ನಿರಾಶ ದ ಕಾರ್ಮಿಕರ ಒಂದು ವಿಭಾಗವೂ ಸಿಸಂನ ಸಾಮಾಜಿಕ ಹಾಗೂ ಸಂಕುಚಿತ ಾರಕ್ಕೆ ಬಲಿಯಾಗುವುದರ ಪ್ರಯೋಜನ ್ನು ಪಡೆಯುತ್ತದೆ" ಎಂದು ಗಮನಿಸು ರೆ.

ಂದು ನಮ್ಮಲ್ಲಿ ಕಾವಿಪಡೆಗಳ ಪ್ರಚಾರದ ೂಪದಲ್ಲಿ ಇದನ್ನೇ ಕಾಣಬಹುದು. ('ಭ್ರಷ್ಟ ಒಳಗಾಗಲಾರದ ಸರಕಾರ' ನೀಡುತ್ತೇವೆ ುತ್ತಲೇ ಮಧ್ಯಪ್ರದೇಶದ ಬಿಜೆಪಿ ಸರ ಆರ್.ಎಸ್.ಎಸ್. ಪರಿವಾರದ ವಿವಿಧ ್ಥೆಗಳಿಗೆ 15 ಕೋಟಿ ರೂ. ಬೆಲೆಬಾಳುವ ಗಳನ್ನು 'ದಾನ' ಮಾಡಿತು ಎಂಬುದನ್ನು ನಿಸಿ- ಅಕ್ಟೋಬರ್ 30, 1992ರ ಡಿಯಾ ಟುಡೇ' ಇದರ ವಿವರ ನೀಡಿದೆ. ೇ ರೀತಿ ಉತ್ತರ ಪ್ರದೇಶದ ಕಲ್ಯಾಣ್ ್ ಸರಕಾರ ಸಾಧ್ವಿ ರಿತಂಬರಾ ಹೆಸರಿಗೆ ಕೋಟಿ ರೂಗಳಷ್ಟು ಬೆಲೆಬಾಳುವ ನನ್ನು ತರಾತುರಿಯಿಂದ ವರ್ಗಾಯಿಸಿ ಿ ನೀಡಿದ್ದನ್ನೂ ಗಮನಿಸಿ).

ಆ ಯುದ್ಧದ ಪ್ರತಿಯೊಂದು ನಿಮಿಷಕ್ಕೂ ಸೋವಿಯೆತ್ ಒಕ್ಕೂಟ 9 ಜೀವಗಳ, ಪ್ರತಿಗಂಟೆಯೂ 857, ಹಾಗೂ ಪ್ರತಿದಿನವೂ 14000 ಜೀವಗಳ ಬೆಲೆ ತೆರಬೇಕಾಯಿತು. ಆದರೂ ಅವರು ಗೆದ್ದೇ ಗೆದ್ದರು. ಕೊನೆಗೂ ಹಿಟ್ಲರನ ರಾಜಧಾನಿಯ ಮೇಲೆ ಹಾರಿಸಿದ್ದು ಕುಡುಗೋಲು, ಸುತ್ತಿಗೆಯ ಕೆಂಬಾವುಟವೇ ಹೊರತು ಅಮೇರಿಕಾದ ನಕ್ಷತ್ರಗಳು ಮತ್ತು ಪಟ್ಟೆಗಳ ಬಾವುಟವಲ್ಲ!

ಕಾವಿಪಡೆಗಳು ಜನಗಳ ದಾರಿತಪ್ಪಿಸಲು ಬಿಡಬೇಕೆ?

ಬಂಡವಾಳಶಾಹಿ-ಭೂಮಾಲಕ ವರ್ಗಗಳ ನೀತಿಗಳಿಂದಾಗಿ ಜನಗಳಲ್ಲಿ ಹೆಚ್ಚುತ್ತಿರುವ ಅಸಂತೃಪ್ತಿಯನ್ನು ಈ ಕಾವಿಪಡೆಗಳು ಜನಗಳ ಹೆಚ್ಚುತ್ತಾ ಸಾಗಿರುವ ಬಡತನದ ಪರಿಸ್ಥಿತಿಯನ್ನು ಬದಲಿಸುವ ದಾರಿಯತ್ತ ತಿರುಗಿಸದೆ ತಮ್ಮ ಗುರಿಸಾಧನೆಗಾಗಿ ಅದನ್ನು ಮತೀಯ ಕೋಮುವಾದಿ ಮಾರ್ಗಗಳತ್ತಲೇ ತಿರುಗಿಸಲು ಮಾತ್ರ ಬಳಸುತ್ತಿವೆ.

ಬಂಡವಾಳಶಾಹಿ-ಭೂಮಾಲಕ ವರ್ಗಗಳ ನೀತಿಗಳಿಂದಾಗಿ ಜನಗಳಲ್ಲಿ ಹೆಚ್ಚುತ್ತಿರುವ ಅಸಂತೃಪ್ತಿಯನ್ನು ಈ ಕಾವಿಪಡೆಗಳು ಜನಗಳ ಹೆಚ್ಚುತ್ತಾ ಸಾಗಿರುವ ಬಡತನದ ಪರಿಸ್ಥಿತಿಯನ್ನು ಬದಲಿಸುವ ದಾರಿಯತ್ತ ತಿರುಗಿಸದೆ ತಮ್ಮ ಗುರಿಸಾಧನೆಗಾಗಿ ಅದನ್ನು ಮತೀಯ ಕೋಮುವಾದಿ ಮಾರ್ಗಗಳತ್ತಲೇ ತಿರುಗಿಸಲು ಮಾತ್ರ ಬಳಸುತ್ತಿವೆ.

ರಾಮಜನ್ಮಭೂಮಿ ದೇವಸ್ಥಾನ ಕಟ್ಟುವುದು ಮಾತ್ರವೇ ತನ್ನ ಏಕೈಕ ಕಾರ್ಯಕ್ರಮ ಎಂದು ಜನರ ಮುಂದಿಡುತ್ತಾ ವಾಸ್ತವವಾಗಿ ಕಾವಿಪಡೆಗಳು ಜನಗಳ ಮೇಲೆ ಸಂಕಟಗಳನ್ನು ಸುರುವುತ್ತಿರುವ ಶೋಷಣೆಯ ವ್ಯವಸ್ಥೆಯನ್ನೇ ಗಟ್ಟಿಗೊಳಿಸುತ್ತಿವೆ. ಇದರೊಂದಿಗೆ ಸಾಮ್ರಾಜ್ಯಶಾಹಿ ಉದಾರ ಪೋಷಣೆ ಕೇಳಲೂ ಅಂದು ಹಿಂಜರಿದಿಲ್ಲ, ಇದು ಭಾರತೀಯ ಜನತೆಯ ವಿನಾಶದ ದಾರಿ.

ಜನಗಳ ವಾಸ್ತವ ಪರಿಸ್ಥಿತಿಯ, ಅವರ ಸಂಕಟಗಳ ಪರಿಹಾರ ತನಗೆ ಬೇಕಿಲ್ಲ ಎಂದು ಕಾವಿಪಡೆಗಳು ಈಗ ಸ್ಪಷ್ಟವಾಗಿ ತೋರಿಸಿಕೊಟ್ಟಿವೆ. ಇಡೀ ಅಮೇರಿಕಾದ ಜನಸಂಖ್ಯೆಗೂ ಮೀರಿದ ಜನಸಂಖ್ಯೆಯಲ್ಲಿ ಭಾರತೀಯರು ಬಡತನದ ರೇಖೆಯ ಕೆಳಗೆ ಶೋಚನೀಯ ಬಾಳು ಸಾಗಿಸುತ್ತಿದ್ದಾರೆ ಎಂಬುದು ಅವರಿಗೆ ಬೇಕಿಲ್ಲ, ಹಲವು ದೇಶಗಳ ಒಟ್ಟು ಜನಸಂಖ್ಯೆಯನ್ನೂ ಮೀರಿದ ಸಂಖ್ಯೆಯಲ್ಲಿರುವ ನಮ್ಮ ದೇಶದ ಮಕ್ಕಳೂ ಅನ್ನ ತಿನ್ನಲು ದುಡಿಮೆಗೆ ಇಳಿಯಲೇಬೇಕಾದ ಪರಿಸ್ಥಿತಿಯಿದೆ ಎಂಬುದೂ ಅವರಿಗೆ ಆತಂಕವುಂಟು ಮಾಡುವುದಿಲ್ಲ, ಭಾರತದಲ್ಲಿ ಪೋಷಕ ಆಹಾರವಿಲ್ಲದೆ ಪ್ರತಿವರ್ಷ ಸಾಯುತ್ತಿರುವ ಸಂಖ್ಯೆ ಇಡೀ ಆಸ್ಟ್ರೇಲಿಯಾ ದೇಶದ ಜನಸಂಖ್ಯೆಗಿಂತಲೂ ಹೆಚ್ಚು ಎಂಬುದರ ಬಗ್ಗೆಯೂ

-ಪುಟ 7ಕ್ಕೆ

ಮೂಕ ಸಾಲ ನೀತಿ

ಭಾರತೀಯ ರಿಸರ್ವ್ ಬ್ಯಾಂಕ್ 1995-96 ಮೊದಲರ್ಧದ ಸಾಲ ನೀತಿಯನ್ನು ಪ್ರಕಟಿಸಿದೆ. ಅರ್ಧ ವರ್ಷಕ್ಕೊಮ್ಮೆ ಪ್ರಕಟವಾಗುವ ಈ ನೀತಿ ದೇಶದ ಹಣಕಾಸು ನೀತಿಯಾಗಿರುತ್ತದೆ. ದೇಶದ ಹಣಕಾಸು ಪರಿಸ್ಥಿತಿ ಹದಗೆಟ್ಟು ಕುಳಿತಿರುವಾಗ ಈ ಸಾಲ ನೀತಿ ಇಂತಹ ಪರಿಸ್ಥಿತಿಯನ್ನು ಬದಲಿಸುವ ತೀವ್ರ ಪ್ರಯತ್ನ ಮಾಡುತ್ತದೆ ಎಂಬ ನಿರೀಕ್ಷೆ ಇತ್ತು.

ಈಗ ಪ್ರಕಟವಾದ ನೀತಿಯಲ್ಲಿ ಮಹತ್ತರವಾದದ್ದೇನೂ ಇಲ್ಲ. ಸಾವಧಿ ಠೇವಣಿ ಮೊತ್ತಕ್ಕೆ ನೀಡಬಹುದಾದ ಗರಿಷ್ಠ ಬಡ್ಡಿ ಪ್ರಮಾಣವನ್ನು ಶೇಕಡಾ 1 ರಷ್ಟು ಏರಿಸಿತು. ಈ ಏರಿಕೆಯ ಪ್ರಕಾರ ಠೇವಣಿಗಳ ಮೇಲೆ ಗರಿಷ್ಠ ಬಡ್ಡಿ ದರ ಶೇ 12 ಆಗಿರುತ್ತದೆ.

ಇದು ಜನತೆ ಹೆಚ್ಚೆಚ್ಚು ಉಳಿತಾಯ ಮಾಡಿ ಠೇವಣಿ ಇಡುವಂತೆ ಪ್ರೇರೇಪಿಸಿದರೆ ಹಣ ಬ್ಯಾಂಕುಗಳೊಳಗೆ ಬರುತ್ತದೆ. ಬ್ಯಾಂಕುಗಳ ಒಳಗೆ ಬರುವ ಹಣ ಹೆಚ್ಚಾದರೆ ಚಲನೆಯಲ್ಲಿರುವ ಹಣ ಕಡಿಮೆ ಆಗಿ ಹಣದುಬ್ಬರ ಕಡಿಮೆ ಆಗುತ್ತದೆ ಎಂಬುದು ಬಂಡವಾಳಶಾಹಿ ಅರ್ಥಶಾಸ್ತ್ರದ ಪಾಠ. ಅದನ್ನೇ ಭಾರತೀಯ ರಿಸರ್ವ್ ಬ್ಯಾಂಕ್ ಬಳಸಿದೆ. ಇದಲ್ಲದೆ ಬಜೆಟ್ ಪೂರ್ವದಲ್ಲಿ ಮಂಡಿಸಿದ ಆರ್ಥಿಕ ಸಮೀಕ್ಷೆ ಉಳಿತಾಯದ ಪ್ರಮಾಣ ಇಳಿಮುಖವಾಗುತ್ತಿರುವುದನ್ನು ಎತ್ತಿ ತೋರಿಸಿತ್ತು. ಉಳಿತಾಯ ಪ್ರಮಾಣವನ್ನು ಹೆಚ್ಚಿಸುವ ಉದ್ದೇಶವೂ ಇರಬಹುದು. ಆದರೆ ಇಲ್ಲಿ ಜನರ ಹೊಟ್ಟೆ ತುಂಬಿದರೆ ನಂತರ ಉಳಿತಾಯದ ಮಾತು ಎಂಬುದರ ಪರಿವೆ ಇವರಿಗಿದ್ದಂತಿಲ್ಲ.

ಎಂ.ಎಸ್. ಶೂಸ್ ಎಂಬ ಕಂಪೆನಿ ಶೇರು ಹಗರಣ ಮಾಡಿದ ಪರಿಣಾಮವಾಗಿ ಬ್ಯಾಂಕುಗಳು ಕಂಪನಿಗಳಿಗೆ ನೀಡುವ ಸೇತು ಸಾಲದ ಮೇಲೆ ಬಹಿಷ್ಕಾರ ಬಂದಿದೆ. ಈ ಸೇತು ಸಾಲವನ್ನು ಸಾರ್ವಜನಿಕರಿಗೆ ಶೇರು ನೀಡುವ ಕಂಪನಿಗಳಿಗೆ ಶೇರು ಹಣ ಬರುವ ಮೊದಲು ನೀಡಲಾಗುತ್ತದೆ.

ಬಡ ಬೋರೆಗೊಡನಿಗಂತೂ ಏನೂ ಇಲ್ಲ ಈ ನೀತಿಯಲ್ಲಿ.

ಎಂ.ಎಸ್. ಶೂಸ್ ಶೇರು ಹಗರಣ

ಹಾಗೆ ನೋಡಿದರೆ ಈ ಎಂ.ಎಸ್. ಶೂಸ್ ಹಗರಣ ವಿಶೇಷವಾದದ್ದೇನಲ್ಲ, ಉದಾರೀಕರಣ ಬಂದ ಮೇಲೆ ಈ ತರಹದ ಹಗರಣಗಳು ದಿನ ನಿತ್ಯ ನಡೆಯುತ್ತಿವೆ. ಹಾಗೆ ಉದಾರೀಕರಣ ಬಂದ ಮೇಲೆ ಹಗರಣ ಮತ್ತು ಸಹಜ ವ್ಯವಹಾರಗಳ ನಡುವಿನ ವ್ಯತ್ಯಾಸ ತಿಳಿಯದಂತಾಗಿ ಬಿಟ್ಟಿದೆ. ಎಂ.ಎಸ್. ಶೂಸ್‌ನದ್ದು ಸ್ವಲ್ಪ ಅತಿರೇಕಕ್ಕೆ ಹೋಗಿ ಸುದ್ದಿಯಾಯಿತು ಅಷ್ಟೇ.

ಎಂ.ಎಸ್. ಶೂಸ್ ಎಂಬ ಕಂಪನಿ ಬೂಟುಗಳ ವ್ಯವಹಾರದಲ್ಲಿ ತೊಡಗಿದ ದೆಹಲಿಯ ಕಂಪನಿ. ಇದನ್ನು ನಡೆಸುತ್ತಿರುವಾತ ಪವನ್ ಕುಮಾರ್ ಸಚ್ ದೇವ್ (ಸುಳ್ಳು ದೇವನಾ?). ಈ ಬೂಟು ವ್ಯವಹಾರದಲ್ಲಿ ಸ್ವಲ್ಪ ಅಲ್ಲಾಲಿ ಟೋಪಿ ವ್ಯವಹಾರವನ್ನೂ ಮಾಡಿರಬಹುದಾದ ಈತನ ವ್ಯವಹಾರ ಚೆನ್ನಾಗಿ ಕುದುರುತ್ತಿತ್ತು. ಸುಮಾರು 110 ಕೋಟಿ ರೂಪಾಯಿಗಳ ವ್ಯವಹಾರದ ಮಾಲಿಕತ್ವ ಈತನ ಕಂಪನಿಗಿತ್ತು.

ಬಂಡವಾಳಿಗರಿಗೆ ತೃಪ್ತಿ ಎಂಬುದಿರಲು ಸಾಧ್ಯವೇ ಇಲ್ಲ, ಇಡೀ ಜಗತ್ತನ್ನೇ ತನ್ನ ಮುಷ್ಠಿಯಲ್ಲಿಟ್ಟುಕೊಳ್ಳಲು ಪ್ರತಿಯೊಬ್ಬನೂ ಬಯಸುತ್ತಾನೆ. ಈ ಸಚ್ ದೇವ ಸಹ ಅಂತಹ ಯೋಚನೆಗೆ ಸಿಕ್ಕಿದವ. ತನ್ನ ವ್ಯವಹಾರಕ್ಕೆ ಸಂಬಂಧಪಡದ ಹೋಟೆಲು ಉದ್ಯಮ, ಇತ್ಯಾದಿಗಳಲ್ಲೆಲ್ಲ ಇಳಿದು ಬೆಳೆಯಲು ದೊಡ್ಡ ಕಂಪನಿಯಾಗಲು 500 ರಿಂದ ಸಾವಿರ ಕೋಟಿ ರೂಪಾಯಿಗಳ ಮಾಲಿಕತ್ವ ಹೊಂದಲು ಸಾರ್ವಜನಿಕ ಬಂಡವಾಳ ಎತ್ತಲು ಯೋಜನೆ ಹಾಕಿದ. ಈ ದಿನಗಳಲ್ಲಿ ಇದು ಅಸಹಜವೇನಲ್ಲ, ಹಲವಾರು ಕಂಪನಿಗಳು ಸಾರ್ವಜನಿಕರಿಗೆ ಶೇರು ಹಂಚಿ ಹಣ ದೋಚುತ್ತಾರೆ. ಈ ಶೇರುಗಳ ವ್ಯವಹಾರ ಹಿಂದೆಯೂ ಇತ್ತು. ಆದರೆ ಉದಾರೀಕರಣ ಬಂದ ಮೇಲೆ ಇದರ ಮೇಲಿನ ಹಿಡಿತ ತೀರ ಸಡಿಲವಾಗಿ ಹೋಗಿದೆ. ಆದ್ದರಿಂದಲೇ ಎಂತೆಂತಹದೂ ಕಂಪನಿಗಳೆಲ್ಲ ಈ ಶೇರುಗಳ ಮೂಲಕ ಬಂಡವಾಳ ಹೊಂಚತೊಡಗಿವೆ. ಇದರಲ್ಲಿ ದೊಡ್ಡ ಪ್ರಮಾಣದ ಅವ್ಯವಹಾರ ನಡೆಸುತ್ತವೆ. ಸುಳ್ಳುಗಳ ಸರಮಾಲೆಯನ್ನೇ ಹೆಣೆದು ಹಣ ಬಾಚುತ್ತವೆ. ಇರಲಿ

ಈ ಸಚ್ ದೇವನ ಕಂಪನಿಯೂ ಸಾರ್ವಜನಿಕ ಹಣ ಎತ್ತಲು ಶೇರು ಮತ್ತು ಡಿಬೆಂಚರ್ ನೀಡಲು ಮುಂದಾಯಿತು. ಇದರ ಜೊತೆಗೆ ಹಕ್ಕಿನ ಶೇರುಗಳನ್ನೂ ನೀಡುವ ವಿಚಾರವನ್ನು ಅದು ಪ್ರಕಟಿಸಿತು. ಸಾರ್ವಜನಿಕ ಶೇರು ಮತ್ತು ಹಕ್ಕಿನ ಶೇರು ನೀಡಿಕೆಯ ಸಮಯದಲ್ಲಿ 30 ದಿನಗಳಿಗಿಂತ ಹೆಚ್ಚಿನ ಅಂತರವಿರುವಂತಿಲ್ಲ, ಆದರೆ ಈ ಕಂಪನಿಗೆ ಸೆಕ್ಯೂರಿಟಿಗಳ ವಿನಿಮಯ ಮಂಡಳಿ (ಸೆ.ಬಿ.) ಅಂತಹ ಪರವಾನಗಿ ನೀಡಿತು. ಇಲ್ಲಿ ಸೆಬಿಯದೂ ಪಾತ್ರವಿರುವುದು (ಉದ್ದೇಶ ಪೂರಿತ ನಿರ್ಲಕ್ಷ್ಯ) ಸ್ಪಷ್ಟ.

ತನ್ನ ಶೇರುಗಳ ಬಗ್ಗೆ ಕಂಪನಿಯ ಸಾಧನೆಗಳ ಬಗ್ಗೆ ದೊಡ್ಡ ದೊಡ್ಡ ಪ್ರಚಾರಗಳನ್ನು ಕಂಪನಿ ಮಾಡಿತು. ಇದರಲ್ಲಿ ಹಲವು ಸುಳ್ಳುಗಳಿದ್ದವು. ಶೇರು ಮಾರುಕಟ್ಟೆಯಲ್ಲಿ ಎಂ.ಎಸ್.ನ ಶೇರು ಬೆಲೆ ತೀವ್ರ ಏರುವಂತೆ ಮಾಡಲು ಈ ಕಂಪನಿಯೇ ಬೇರೆಯವರ ಮೂಲಕ ತನ್ನದೇ ಶೇರುಗಳ ಖರೀದಿಗೆ ತೊಡಗಿತು.

ಸೆಬಿ ಈ ಕಂಪನಿ ಪ್ರಚಾರಗಳಲ್ಲಿ ಹೇಳುತ್ತಿರುವ ಸುಳ್ಳುಗಳಿಗೆ ತಿದ್ದುಪಡಿ ಸೂಚಿಸಿ (ಪ್ರಕಟಣೆ ನೀಡಬೇಕೆಂದು ನಿರ್ದೇಶನ ನೀಡಿತು. ಕಂಪನಿ ಅದನ್ನು ಮಾಡಿದರೂ ಹಳೆಯ ಸುಳ್ಳಿನ ಪ್ರಚಾರವನ್ನೂ ಮುಂದುವರೆಸಿತು. ಎಂ.ಎಸ್. ಶೂಸ್‌ನ ಪರವಾಗಿ (ಅದರದ್ದೇ) 17 ಕೋಟಿ ರೂಪಾಯಿಗಳ ಶೇರು ಕೊಂಡಿದ ಜಾವೇರಿ ಎಂಬ ದಲ್ಲಾಳಿ ಹಣ ಪಾವತಿ ಮಾಡುವಲ್ಲಿ ವಿಫಲವಾಗಿ (ಕಂಪನಿ ಹಣ ನೀಡದ್ದರಿಂದ) ಮುಂಬೈ ಶೇರು ಮಾರುಕಟ್ಟೆಯಲ್ಲಿ ವ್ಯವಹಾರ ನಿಂತು ಹೋಯಿತು.

ಈ ಎಲ್ಲವುಗಳ ಹಿನ್ನೆಲೆಯಲ್ಲಿ ಸಚ್‌ದೇವನ ಬಂಧನವಾಯಿತು. ಈಗ ವರಮಾನ ತೆರಿಗೆ ಇತ್ಯಾದಿ ಹಗರಣಗಳೂ ಹೊರಬರುತ್ತಿವೆ.

ಇದು ಸಂಕ್ಷಿಪ್ತವಾಗಿ ಎಂ.ಎಸ್. ಶೂಸ್ ಹಗರಣ ಆದರೆ ಮೊದಲೇ ಹೇಳಿದಂತೆ ಈ ಶೇರುಗಳ ವ್ಯವಹಾರವೇ ಹಗರಣಗಳ ಸರಮಾಲೆ.

ಸರಿಯಾದ ನಿಯಂತ್ರಣ ಇದ್ದರೆ ಇದೆಲ್ಲ ಆಗುವುದಿಲ್ಲ ಎಂದೆಲ್ಲ ಉದಾರೀಕರಣವಾದಿಗಳು ಹೇಳುತ್ತಿರುತ್ತಾರೆ. ಆದರೆ ಇಲ್ಲಿ ನಿಯಂತ್ರಣ ಪರಿಣಾಮಕಾರಿಯಾಗುವುದಿಲ್ಲ, ಕಪ್ಪೆಗಳನ್ನು ತೆರೆದ ಪಾತ್ರೆಯೊಳಕ್ಕೆ ತುಂಬಿದಂತೆ ಒಂದು ಕಪ್ಪೆ ಒಳಗೆ ಹಾಕುತ್ತಿರುವಂತೆಯೇ ಹಲವು ಹೊರಕ್ಕೆ ಹಾರಿ ಹೋಗುತ್ತವೆ.

ಇದೇ ಬಂಡವಾಳಶಾಹಿ ಪದ್ಧತಿಯ ಈ ಜೂಜಿನ ಮಹಿಮೆ.

ರಾಜನ್ ಪಿಳ್ಳೆ ಹಗರಣ

ಎಂ.ಎಸ್. ಶೂಸ್ ಸುದ್ದಿಯಾದಂತೆಯೇ ರಾಜನ್ ಪಿಳ್ಳೆಯದೂ ದೊಡ್ಡ ಸುದ್ದಿಯಾಯಿತು. ಸಿಂಗಾಪೂರದ ಕೋರ್ಟು ಈ ಪಿಳ್ಳೆ ಎಂಬ ಭಾರತದ ಬಂಡವಾಳಿಗನ ವಿರುದ್ಧ ವಾರಂಟು ಹೊರಡಿಸಿತು. ಪಿಳ್ಳೆ ತಪ್ಪಿಸಿಕೊಂಡು ಅಲ್ಲಿಂದ ಭಾರತಕ್ಕೆ ಬಂದು ಅಡಗಿಕೊಂಡ. ಹಲವು ದಿನಗಳ ನಂತರ ಈಗ ಪೋಲೀಸರಿಗೆ ಶರಣಾಗಿರುವ ಸುದ್ದಿಯಿದೆ.

ಕೇರಳದ ಗೋಡಂಬಿ ವ್ಯಾಪಾರಿಗಳ ಕುಟುಂಬದವನಾದ ಈ ರಾಜನ್ ಪಿಳ್ಳೆ ಸಿಂಗಾಪುರಕ್ಕೆ ಹೋಗಿ ಅಮೇರಿಕ ಮತ್ತು ಫ್ರೆಂಚ್ ಕಂಪನಿಗಳೊಂದಿಗೆ ಶಾಮೀಲಾಗಿ ಆಹಾರ ವಸ್ತುಗಳ ತಯಾರಿಕಾ ಕಂಪನಿಗಳನ್ನು ಹುಟ್ಟು ಹಾಕಿದ ಬ್ರಿಟಾನಿಯಾ ಇಂಡಸ್ಟ್ರೀಸ್ ಎಂಬ ಕಂಪನಿಗೆ ಮುಖ್ಯಸ್ಥನೂ ಆದ ಈತ. ಈತ ಕಾನೂನಿನಲ್ಲಿ ಇದ್ದ ನ್ಯೂನತೆಗಳನ್ನೆಲ್ಲ ಉಪಯೋಗಿಸಿ ವಿದೇಶೀ



-ಜಿ.ಎಸ್. ಮಣಿ

ಕಂಪನಿಗಳಿಗೆ ಮೋಸ ಮಾಡುತ್ತಾನೆ ಎಂಬುದು ಈತನ ಮೇಲಿರುವ ಆರೋಪ. ವಿಶೇಷವಾಗಿ ಕಾರ್ಯನಿರ್ವಹಕನಾಗಿ ತನ್ನ ಖರ್ಚುಗಳನ್ನು ವಿಪರೀತ ದೊಡ್ಡ ಪ್ರಮಾಣದಲ್ಲಿ ತಿಂದು ಹಾಕಿದ್ದಾನೆಂದು ಈತನ ಕಂಪನಿಗಳಲ್ಲಿ ಪಾಲು ಹೊಂದಿದ್ದ ವಿದೇಶಿ ಕಂಪನಿಗಳಾದ ಗ್ರೂಪ್ ಬಿ.ಎಸ್.ಎನ್. ಮತ್ತು ಜಾನ್ಸನ್ ಆರೋಪಿಸಿ ಲೆಕ್ಕ ಪತ್ರ ತಪಾಸಣೆಗೆ ಒತ್ತಡ ಹಾಕಿದರು.

ಲೆಕ್ಕ ಪತ್ರ ತಪಾಸಣೆಯಿಂದ ಲೆಕ್ಕದಲ್ಲಿ ಅಪರಾತಪರಾ ಆಗಿರುವುದು ನಿಜವೆಂಬುದು ಹೊರಬಂತು. ಆದ್ದರಿಂದಲೇ ಸಿಂಗಾಪೂರದ ಕೋರ್ಟು ಈತನ ವಿರುದ್ಧ ಬಂಧನದ ವಾರಂಟ್ ಹೊರಡಿಸಿದ್ದು.

ಕೇರಳದ ಮಾಜಿ ಮುಖ್ಯಮಂತ್ರಿ ಕೆ. ಕರುಣಾಕರನ್‌ರಿಗೆ ಆಪ್ತ ಎಂದೂ ಹೇಳಲಾಗುತ್ತಿರುವ ಈತ ಇಂತಹ ಮೋಸ ಇತ್ಯಾದಿಗಳಿಂದಾಗಿ ಸದಾ ಸುದ್ದಿಯಲ್ಲೇ ಇರುವಾತ. ಈತನ ವಿರುದ್ಧ ಆರೋಪ ಮಾಡಿ ಸಿದ್ಧಪಡಿಸಿರುವ ವಿದೇಶೀ ಕಂಪನಿಗಳ ಸಂಭಾವಿತವಾದವು ಎಂದೇನಲ್ಲ, ಅವೂ ಜನರಿಗೆ ಮೋಸವನ್ನೇ ಮಾಡುವುದು. ಬಂಡವಾಳಶಾಹಿ ಪದ್ಧತಿಯಲ್ಲಿ ಇವೆಲ್ಲ ಬಹಳ ಸಹಜವಾದವು. ಆದರೆ ಮೋಸ ಹೋದಾತ ಬಲಿಷ್ಠನಾಗಿದ್ದರೆ ಆತ ಅದನ್ನು ದೊಡ್ಡ ಸುದ್ದಿ ಮಾಡುತ್ತಾನೆ. ಹಲವು ಪ್ರಕರಣಗಳು ಯಾವುದೇ ಸುದ್ದಿಯಿಲ್ಲದೇ ಹಾಗೆ ಮುಳುಗಿ ಹೋಗುತ್ತವೆ.

ಧಣಿಗಳ ಅಟಾಟೋಪದ ಎದುರು ಕೈಕಟ್ಟಿ ನಿಂತವರು

ನರಸಿಂಹರಾಯರ ಸರ್ಕಾರದ ಧಣಿಗಳಾದ ಐ.ಎಂ.ಎಫ್. ಮತ್ತು ವಿಶ್ವ ಬ್ಯಾಂಕ್ ಗಳು ಅಟಾಟೋಪ ತೋರಿಸುತ್ತಿವೆ. ಅವರ ಮುಂದೆ ನಮ್ಮ ಮನಮೋಹನ ಸಿಂಗರು ಹಲ್ಲುಗಿಂಜುತ್ತಿದ್ದಾರೆ.

ಈ ಧಣಿಗಳ ಆರೋಪಗಳ ಹಲವು ಉದಾರೀಕರಣದ ವೇಗ ಕಡಿಮೆಯಾಗಿ ಹೋಗಿದೆ ಎಂಬುದು ಒಂದಾದರೆ ಹಣಕಾಸು ನಿರ್ವಹಣೆ ಸರಿಯಾಗಿಲ್ಲ ಎಂಬುದು ಇನ್ನೊಂದು, ರೈಲು ಪ್ರಯಾಣದ ಮೇಲೆ ನೀಡುವ ಎಲ್ಲ ತರಹದ ಸಹಾಯಧನವನ್ನು ನಿಲ್ಲಿಸಬಿಡಬೇಕೆಂಬ ಫರ್ಮಾನು ವಿಶ್ವಬ್ಯಾಂಕಿನಿಂದ.

ಮನಮೋಹನಸಿಂಗರು ಎಲ್ಲ ಅಡೆತಡೆಗ ನಡುವೆಯೂ ಉದಾರೀಕರಣವನ್ನು ಮುಂದುವರಿಸಿದ್ದೇವೆ. ನೀವೇ ಬಂದು ನೋಡಿ ಎಂದು ಈ ಧಣಿಗಳ ಎದುರು ಗೋಗರೆಯ ತೊಡಗಿದ್ದಾರೆ.

ಇವೆಲ್ಲವುಗಳ ನಡುವೆ ಅರ್ಥಶಾಸ್ತ್ರಜ್ಞರ ತಂಡವೊಂದು ಹಣಕಾಸು ನಿರ್ವಹಣೆ ಸರಿ ಇಲ್ಲದಿರುವುದರಿಂದ ದೊಡ್ಡ ಬಿಕ್ಕಟ್ಟು ತಲೆದೋರಬಹುದೆಂದು ಎಚ್ಚರಿಕೆ ನೀಡಿದೆ.

ಮೆಕ್ಸಿಕೋದಂತಹ ಸ್ಥಿತಿ ಭಾರತಕ್ಕೆ ಬರುವುದಿಲ್ಲ, ಯಾಕೆಂದರೆ ಅಲ್ಲಿನ ಪರಿಸ್ಥಿತಿಗೂ ಇಲ್ಲಿನ ಪರಿಸ್ಥಿತಿಗೂ ವ್ಯತ್ಯಾಸವಿದೆ ಎಂದು ಎಲ್ಲರಿಗೂ ಮನದಟ್ಟು ಮಾಡಿಕೊಡಲು ಮನಮೋಹನ ಸಿಂಗರು ಪ್ರಯತ್ನಿಸುತ್ತಿದ್ದಾರೆ.

ಹಣದುಬ್ಬರ ಕಡಿಮೆ ಆಗುತ್ತಿದೆ ಎಂದು ಉದಾರೀಕರಣವಾದಿಗಳು ಬೊಬ್ಬೆ ಹಾಕುತ್ತಿದ್ದಾರೆ.

ಆದರೆ ಈ ಎಲ್ಲ ಗೊಂದಲಗಳ ನಡುವೆ ನೋಡಿದರೆ ಜನಸಾಮಾನ್ಯರಿಗೆ ಕಾಣಬರುವ ಯಾವುದೇ ಸುಧಾರಣೆ ಆರ್ಥಿಕ ಪರಿಸ್ಥಿತಿಯಲ್ಲಿ ಇಲ್ಲ!!



-ವಿಶ್ವ

ಸಂಸ್ಥೆಯಾಗಿರುವ ಹಿಂದೂ ಚೇತನಾ ಮಂಚ್ ದೇವಾಸ್ ಜಿಲ್ಲೆಯಲ್ಲಿ ಬುಡಕಟ್ಟು ಜನರ ಮಧ್ಯೆ ಕೆಲಸ ಮಾಡುತ್ತಿರುವ ಕ್ರೈಸ್ತ ಮಿಶನರಿಗಳ ವಿರುದ್ಧ ಪ್ರಚಾರ ಮಾಡುತ್ತಿದೆ.

ಸನ್ಯಾಸಿನಿ ಕೊಲೆ

ಫೆಬ್ರವರಿ 25 ರಂದು ಈ ಜಿಲ್ಲೆಯಲ್ಲಿ ಸಿಸ್ಟರ್ ಮಾರಿಯಾ ಎಂಬ ಕ್ರೈಸ್ತ ಸನ್ಯಾಸಿನಿ (ನನ್)ಯನ್ನು ಒಬ್ಬ ಸ್ಥಳೀಯ ಬಿಜೆಪಿ ನಾಯಕ ಇತರ ಇಬ್ಬರು ಸಹಚರರೊಂದಿಗೆ ಸೇರಿಕೊಂಡು ಕೊಂದು ಹಾಕಿದ್ದ.

ಈ ಹತ್ಯೆ ನಡೆದ ಸ್ಥಳದಲ್ಲಿ ನಿರ್ಮಿಸಲಾಗಿದ್ದ ಸ್ಮಾರಕವನ್ನು ಗೂಂಡಾಗಳು ಏಪ್ರಿಲ್ ಮಧ್ಯಭಾಗದಲ್ಲಿ ಹಾಳು ಮಾಡಿದ್ದರು. ಹಿಂದೂತ್ವ ಶಕ್ತಿಗಳೇ ಈ ಕುಕೃತ್ಯ ನಡೆಸಿವೆ ಎಂದು ಅನುಮಾನ ವ್ಯಾಪಕವಾಗಿದೆ.

ಮಾರಿಯಾಳ ಹತ್ಯೆಯಿಂದ ಆಘಾತಗೊಂಡ ಕ್ರೈಸ್ತ ಸಮುದಾಯದಲ್ಲಿ ಕಂಡು ಬಂದ ಒಗ್ಗಟ್ಟನ್ನು ರಿತಂಬರಾ ಬಿಡುಗಡೆಗಾಗಿ ಚಳವಳಿ ಹೂಡುವುದಾಗಿ ಬೆದರಿಕೆ ಹಾಕಿವೆ.

ಅವು ಎತ್ತಿದ ಅಂಶಗಳು ತಾಂತ್ರಿಕವಾಗಿ ಸರಿಯಿರಬಹುದು. ಆದರೆ ಸಮಾಜದ ಸ್ವಾಸ್ಥ್ಯವನ್ನು ಕೆಡಿಸುವಂಥ ಕ್ರಮಕ್ಕೆ ಇಳಿದವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ವರ್ತಿಸುವುದು ಅಗತ್ಯವಾಗುತ್ತದೆ ಅಲ್ಲವೆ 'ಹಿಂದೂತ್ವವಾದಿಗಳೇ'?

ಬಂದ್ ಕರೆ, ದಾಂಧಲೆ

ರಿತಂಬರಾ ಬಂಧನವನ್ನು ಪ್ರತಿಭಟಿಸಿ ವಿ.ಹೆಚ್.ಪಿ., ದುರ್ಗಾವಾಹಿನಿ, ಬಜರಂಗದಳ ಮತ್ತು ಬಿಜೆಪಿಗಳು ಏಪ್ರಿಲ್ 25 ರಂದು ಇಂದೋರ್ ಹಾಗೂ ದೇವಾಸ್ ಬಂದ್‌ಗೆ ಕರೆ ನೀಡಿದ್ದವು. ಬಂದ್ ಸಂಘಟಕರು ಅಷ್ಟೆಲ್ಲ ಬೀದಿಗಳಲ್ಲಿ ದಾಂಧಲೆ ನಡೆಸಿದರೆಂದು ವರದಿಯಾಗಿದೆ. ಇಂದೋರ್ ಮಹಾನಗರಪಾಲಿಕೆಯ ಆರು ಬಿಜೆಪಿ ಕಾರ್ಪೋರೇಟರ್‌ಗಳ ಸಹಿತ 175 ಜನರನ್ನು ಹಿಂಸಾಚಾರದ ಆರೋಪದ ಮೇಲೆ ಬಂಧಿಸಲಾಗಿದೆ. ಧಾರ್ ಮತ್ತು ದೇವಾಸ್ ಗಳಲ್ಲಿ ಅನೇಕ ಬಜರಂಗ ದಳ ಕಾರ್ಯಕರ್ತರನ್ನು ಬಂಧಿಸಲಾಗಿದೆ.

ಇದೇ ವಿಷಯದ ಮೇಲೆ ದೆಹಲಿ ಬಂದ್ ನಡೆಸಲು ನೀಡಿದ ಕರೆಗೆ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಜಯಲಲಿತಾ ಬೆಂಬಲಿಗರಿಂದ ಅವಾಂತರ

ಕ್ರಿಮಿನಲ್ ಆರೋಪಗಳ ಆಧಾರದಲ್ಲಿ ತಮಿಳುನಾಡು ಮುಖ್ಯಮಂತ್ರಿ ಜಯಲಲಿತಾ ಅವರ ವಿರುದ್ಧ ವಿಚಾರಣೆ ನಡೆಸಲು ರಾಜ್ಯಪಾಲ ಎಂ. ಚೆನ್ನಾರಾಡ್ಡಿ ನೀಡಿರುವ ಅನುಮತಿ ವಿರುದ್ಧ ಜಯಾ ರಾಜ್ಯ ಹೈಕೋರ್ಟ್ ಗೆ ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿಯ ವಿಚಾರಣೆಯ ದಿನ ಆಳುವ ಎ.ಐ.ಎ.ಡಿ.ಎಂ.ಕೆ. ಕಾರ್ಯಕರ್ತರು ಹೈಕೋರ್ಟ್ ಆವರಣದಲ್ಲಿ ಭಾರೀ ದಾಂದಲೆ ನಡೆಸಿದರು. ಎ.ಐ.ಎ.ಡಿ.ಎಂ.ಕೆ. ಕಾರ್ಯಕರ್ತರ ಈ ಹಿಂಸಾಕೃತ್ಯವನ್ನು ಸಿಪಿಐ(ಎಂ) ತಮಿಳುನಾಡು ರಾಜ್ಯ ಸಮಿತಿ ಖಂಡಿಸಿದೆ.

ಹಿಂದೂ ಮತಾಂಧರ ದಾಂಧಲೆ

ಸಾಮಾನ್ಯವಾಗಿ ಮುಸ್ಲಿಂ ಅಲ್ಪಸಂಖ್ಯಾತರ ವಿರುದ್ಧ ಕತ್ತಿ ಮಸೆದು ರಕ್ತದ ಹೊಳೆ ಹರಿಸುತ್ತಿದ್ದ ಹಿಂದೂ ಮತಾಂಧ ಶಕ್ತಿಗಳ ಕಣ್ಣು ಈಗ ಕ್ರೈಸ್ತ ಅಲ್ಪಸಂಖ್ಯಾತರತ್ತ ಬಿದ್ದಿದೆ.

ಕೋಮುವಾದಿಗಳ ನಾಯಕಿಯರಲ್ಲಿ ಒಬ್ಬಳಾದ 'ಸಾಧ್ವಿ' ರಿತಂಬರಾ ಏಪ್ರಿಲ್ 23ರಂದು ಮಾಡಿದ ಭಾಷಣಕ್ಕೆ ದೇಶಾದ್ಯಂತ ಕಟು ಪ್ರತಿಕ್ರಿಯೆ ವ್ಯಕ್ತವಾಗಿದೆ.

ಹಿಂದೂಗಳನ್ನು ಮತಾಂತರಗೊಳಿಸಲು ಪ್ರಯತ್ನಿಸುತ್ತಿರುವುದಕ್ಕಾಗಿ 'ಹಿಂದುತ್ವ ಶಕ್ತಿಗಳು' ಕ್ರಿಶ್ಚಿಯನ್ ಸಮುದಾಯವನ್ನೇ ನಾಶಮಾಡಲಿವೆ ಎಂದು ಇಂದೋರ್ ಭಾಷಣದಲ್ಲಿ ರಿತಂಬರಾ ಬೆದರಿಕೆ ಹಾಕಿದ್ದಳು. ತಾನು 'ಸಾಧ್ವಿ' ಎಂದು ಹೇಳಿಕೊಳ್ಳುವ ಈ ನಾ[illegible]ಣೆ ಮುಸ್ಲಿಮರ ವಿರುದ್ಧ ವಿಷಕಾರುವ ಭಾಷಣ ಮಾಡುವಲ್ಲಿ ನಿಸ್ಸಿಮಳು. ಈಗ ಕ್ರೈಸ್ತರ ವಿರುದ್ಧವೂ ಆಕೆಯ ನಾಲಿಗೆ ಹರಿಯುತ್ತಿದೆ.

ಮಧ್ಯಪ್ರದೇಶ ದೇವಾಸ್ ಜಿಲ್ಲೆಯ ಉದಯನಗರ ಪಟ್ಟಣದಲ್ಲಿ ಹಿಂದೂ ಚೇತನಾ ಮಂಚ್ ಸಂಘಟನೆ ಏಪ್ರಿಲ್ 23 ರಂದು ಏರ್ಪಡಿಸಿದ ಸಭೆಯಲ್ಲಿ ರಿತಂಬರಾ ಮಾತನಾಡಿ ಈ ರೀತಿ ಹೇಳಿದ್ದಳು.

[illegible]ಸೇಥಿತ ವಿಶ್ವ ಹಿಂದೂ ಪರಿಷತ್ತಿನ ಅಂಗ 'ಎದುರಿಸಲು' ರಿತಂಬರಾ ಉದಯನಗರಕ್ಕೆ 'ಧಾವಿಸಿದ್ದಳು'.

ಸಭೆಯಲ್ಲಿ ಮುಸ್ಲಿಮರು ಮತ್ತು ಮುಲಾಯಂ ಸಿಂಗ್ ಸರಕಾರದ ವಿರುದ್ಧ ವಿಷಕಾರಿದ ರಿತಂಬರಾ, ಕ್ರೈಸ್ತ ಮಿಶನರಿಗಳ ವಿರುದ್ಧವೂ ಭಾಷಣ ಮಾಡಿದಳು. ಒಬ್ಬನೇ ಒಬ್ಬ ಹಿಂದೂವನ್ನು ಮತಾಂತರ ಮಾಡಿದರೂ ಇಡೀ ಕ್ರಿಶ್ಚಿಯನ್ ಸಮುದಾಯವನ್ನು ನಿರ್ಮೂಲ ಮಾಡುವುದಾಗಿ ಹೇಳಿದ್ದಳು.

ಈ ಪ್ರದೇಶದಲ್ಲಿ ಯಾವುದೇ ಮತಾಂತರ ಪ್ರಕರಣ ಗಮನಕ್ಕೆ ಬಂದಿಲ್ಲ ಎಂದು ಹಿರಿಯ ಪೋಲೀಸ್ ಅಧಿಕಾರಿ ಅಯೋಧ್ಯನಾಥ ಪಾಠಕ್ ತಿಳಿಸಿದ್ದಾರೆ.

ಬಿಜೆಪಿ ಬೊಬ್ಬೆ

ಪ್ರಚೋದನಕಾರಿ ಭಾಷಣ ಮಾಡಿದ ರಿತಂಬರಾಳನ್ನು ಇಂದೋರ್ ನಲ್ಲಿ ಏಪ್ರಿಲ್ 24 ರಂದು ಬಂಧಿಸಲಾಗಿದೆ.

ರಾತ್ರಿಯಾದ ಮೇಲೆ ಮಹಿಳೆಯನ್ನು ಬಂಧಿಸಬಾರದೆಂಬ ನಿಯಮವನ್ನು ರಿತಂಬರಾ ಪ್ರಕರಣದಲ್ಲಿ ಉಲ್ಲಂಘಿಸಲಾಗಿದೆ. ಆಕೆಯನ್ನು ವಶಕ್ಕೆ ತೆಗೆದುಕೊಳ್ಳುವ ಮಹಿಳಾ ಪೋಲೀಸರು ಇರಲಿಲ್ಲ ಎಂಬಿತ್ಯಾದಿಯಾಗಿ ಆರೆಸ್ಸೆಸ್ -ಬಿಜೆಪಿ ವಿ.ಹೆ.ಪಿ. ಕೂಟ ಹೇಳಿ ದೊಡ್ಡದಾಗಿ ಬೊಬ್ಬೆ ಹಾಕುತ್ತಿದೆ.

ಕೊಲೆಗಡುಕರ ರಕ್ಷಣೆ

ರಿತಂಬರಾ ಹಿಂದೂ ಹೆಂಗಸಿನ ಹೆಸರಲ್ಲಿ ಒಂದು ಸಂಘಟನೆಯ ನೇತೃತ್ವ ವಹಿಸಿರಬಹುದು. ಆದರೆ ಆಕೆ ಒಬ್ಬ ಮುಗ್ಧ ಮಹಿಳೆಯನ್ನು ಅಮಾನುಷವಾಗಿ ಕೊಂದ ಕೊಲೆಗಡುಕ ಹೇಡಿಗಳನ್ನು ರಕ್ಷಿಸಲು ಮಧ್ಯಪ್ರದೇಶಕ್ಕೆ ಹೋಗಿದ್ದಳೆನ್ನುವುದು ವಾಸ್ತವ ವಿಚಾರ......

ಇದು ರಿತಂಬರಾ ಪ್ರಕರಣದ ಬಗ್ಗೆ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ (AIDWA) ತೀಕ್ಷ್ಣ ಪ್ರತಿಕ್ರಿಯೆಯಾಗಿದೆ.

ರಿತಂಬರಾ ಭಾಷಣ ಮತ್ತು ಅದಕ್ಕೆ ಬಿಜೆಪಿ ಕೊಟ್ಟಿರುವ ಬೆಂಬಲವನ್ನು ಖಂಡಿಸುವಂತೆ AIDWA ಮಹಿಳೆಯರಿಗೆ ಕರೆ ನೀಡಿದೆ. ಕೋಮುವಾದದ ವಿರುದ್ಧದ ಹೋರಾಟ ಮುಂದುವರಿಯಬೇಕಾದ ಅವಶ್ಯಕತೆಯನ್ನು ಈ ಪ್ರಕರಣ ತೋರಿಸುತ್ತದೆ ಎಂದು ಅದು ಹೇಳಿದೆ.

ಇ.ಪಿ. ಪ್ರಕರಣ: ಒತ್ತಡಕ್ಕೆ ತಲೆಬಾಗಿದ ಮುಖ್ಯಮಂತ್ರಿ ಆಂಟನಿ

ಕೇರಳ ಶಾಸಕ ಇ.ಪಿ. ಜಯರಾಜನ್ ಅವರ ಹತ್ಯೆ ಯತ್ನಕ್ಕೆ ಬಳಸಲಾದ ಪಿಸ್ತೂಲಿಗೆ ಸಂಬಂಧಿಸಿದ ಪ್ರಕರಣದ ಬಗ್ಗೆ ಆ ರಾಜ್ಯದ ಕ್ರೈಂ ಬ್ರಾಂಚ್ ತನಿಖೆ ನಡೆಸಲಿದೆ.

ಇಡೀ ಪ್ರತಿಪಕ್ಷದ ಸತತ ದಾಳಿಯಿಂದ ತತ್ತರಿಸಿದ ಮುಖ್ಯಮಂತ್ರಿ ಎ.ಕೆ. ಆಂಟನಿ ಏಪ್ರಿಲ್ 25 ರಂದು ವಿಧಾನಸಭೆಯಲ್ಲಿ ಈ ವಿಷಯವನ್ನು ಪ್ರಕಟಿಸಿದರು. ತನಿಖೆ ಕಾರ್ಯವನ್ನು ಪೋಲೀಸ್ ಕ್ರೈಂಬ್ರಾಂಚ್ ಗೆ ಹಸ್ತಾಂತರಿಸುವುದಾಗಿ ಹೇಳಿದರು.

ಈ ನಡುವೆ, ಇ.ಪಿ. ಜಯರಾಜನ್ ಹತ್ಯೆ ಯತ್ನದ ಪಿತೂರಿ ನಡೆಸಿದ ಹಾಗೂ ಗುಂಡು ಹಾರಿಸಿದ ಆರೋಪಿಗಳಿಗೆ ರಕ್ಷಣೆ ಒದಗಿಸಿದ ಸಹಕಾರ ಸಚಿವ ಎಂ.ವಿ. ರಾಘವನ್ ಮತ್ತು ಕಣ್ಣೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸುಧಾಕರನ್ ಅವರನ್ನು ಶಿಕ್ಷಿಸುವಂತೆ ಒತ್ತಾಯಿಸಿತು.

ಎಡಪ್ರಜಾಸತ್ತಾತ್ಮಕ ರಂಗ (ಎಲ್.ಡಿ.ಎಫ್) ಏಪ್ರಿಲ್ 25 ರಂದು ತಿರುವನಂತಪುರದಲ್ಲಿ ವಿಧಾನಸಭೆ ಮುಂದೆ ಬೃಹತ್ ಪ್ರದರ್ಶನ ನಡೆಸಿತು.

ಅಸೆಂಬ್ಲಿ ಅಧಿವೇಶನದಲ್ಲಿ ಇ.ಕೆ. ನಾಯನಾರ್ ಮತ್ತು ಪಿ. ವಿಜಯನ್ ಪ್ರಕರಣವನ್ನು ಪ್ರಸ್ತಾಪಿಸಿ ಸರಕಾರದ ನಿಷ್ಕ್ರಿಯತೆಯನ್ನು ಎತ್ತಿ ತೋರಿಸಿದರು.

ಎಸ್.ಎಫ್.ಐ. ರಂಗದ ಜಯಭೇರಿ

ಕೇರಳ ವಿಶ್ವ ವಿದ್ಯಾಲಯದ ವಿದ್ಯಾರ್ಥಿ ಸಂಘಕ್ಕೆ ಏಪ್ರಿಲ್ 22 ರಂದು ನಡೆದ ಚುನಾವಣೆಯಲ್ಲಿ ಎಸ್.ಎಫ್.ಐ. ನೇತೃತ್ವದ ರಂಗ ಜಯಭೇರಿ ಬಾರಿಸಿದೆ.

ಎಸ್.ಎಫ್.ಐ. ಅಭ್ಯರ್ಥಿಗಳಾದ ಆರ್.ಕೆ. ದೀಪಾ ಮತ್ತು ಸತ್ಯನ್ ಅನುಕ್ರಮವಾಗಿ ಸಂಘದ ಅಧ್ಯಕ್ಷ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಎನ್.ಎಸ್.ಯು.ಐ. ಸಂಯೋಜಿತ ಕೇರಳ ವಿದ್ಯಾರ್ಥಿ ಸಂಘ (ಕೆ.ಎಸ್.ಯು) ಕೇವಲ ಒಂದು ಸ್ಥಾನ (ಉಪಾಧ್ಯಕ್ಷ) ದಲ್ಲಿ ಜಯಗಳಿಸಿದೆ.

ಬೀಡಿ ಕಾರ್ಮಿಕರ ವಾರ್ಷಿಕ ಮಹಾಸಭೆ

[illegible]: ಏಪ್ರಿಲ್ 4ರಂದು ಬೆಳಿಗ್ಗೆ 10 [illegible]ಗೆ ಮಲ್ಪೆ ಪ್ರದೇಶದ ಬೀಡಿ ಕೆಲಸಗಾರರ [illegible] 11 ನೇ ವಾರ್ಷಿಕ ಮಹಾಸಭೆಯು ಉಮೇಶ ಕುಂದರ್ ಇವರ ಅಧ್ಯಕ್ಷತೆ[illegible] ಸೇರಿತು. ಕಾರ್ಯದರ್ಶಿಯವರಾದ [illegible] ಸುವರ್ಣನವರು ಕಳೆದ ವರ್ಷದ [illegible] ವರದಿ ಹಾಗೂ ಲೆಕ್ಕಾಚಾರದ ವರದಿಯನ್ನು ಮಂಡಿಸಿದರು. ವರದಿಯ ಮೇಲೆ [illegible] ನಡೆದು ವರದಿಯನ್ನು ಅಂಗೀಕರಿಸಲಾಯಿತು.

ಮಹಾಸಭೆಯನ್ನುದ್ದೇಶಿಸಿ ನೆಯ್ಗೆ ಕೆಲಸಗಾರರ ಸಂಘದ ಕಾರ್ಯದರ್ಶಿಯವರಾದ ಗುರುರಾಜ್ ಶೆಟ್ಟಿಗಾರರು ಹಾಗೂ ಅಂಗಾರ ಪೂಜಾರಿಯವರು ಸಂಘಟನೆಯನ್ನು ವಿಸ್ತರಿಸಿ ಬೆಳೆಸಲು ಹೇಳಿ ಮಹಾಸಭೆ ಯಶಸ್ವಿಯಾಗಲೆಂದು ಶುಭ ಹಾರೈಸಿದರು.

ಕರ್ನಾಟಕ ರಾಜ್ಯದ ಬೀಡಿ ವರ್ಕ್ಸ್ ಫೆಡರೇಷನ್ ಪ್ರಧಾನ ಕಾರ್ಯದರ್ಶಿಯವರಾದ ಕಾ. ಕೆ. ಶಂಕರ ರವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

1995ನೇ ಸಾಲಿಗೆ ಸಂಘದ ಅಧ್ಯಕ್ಷರಾಗಿ ಉಮೇಶ್ ಕುಂದರ್ . ಉಪಾಧ್ಯಕ್ಷರಾಗಿ ಅಪ್ಪಿ ಮತ್ತು ಕಮಲ, ಕಾರ್ಯದರ್ಶಿಯಾಗಿ ಲೀಲಾ ಮತ್ತು ಯಶೋಧ ಹಾಗೂ ಕೋಶಾಧಿಕಾರಿಯಾಗಿ ರಮೇಶ ಜತ್ತನ್ನರವರನ್ನು ಸರ್ವಾನುಮತದಿಂದ ಸಭೆಯಲ್ಲಿ ಆಯ್ಕೆ ಮಾಡಲಾಯಿತು.

ಬೇಡಿಕೆಗಳ ಈಡೇರಿಕೆಗೆ ಡಿ.ವೈ.ಎಫ್.ಐ. ಒತ್ತಾಯ

ಗಂಗಾವತಿ: ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ನೇತೃತ್ವದಲ್ಲಿ ಏಪ್ರಿಲ್ 7 ರಂದು ಹಲವಾರು ದಿನಗಳಿಂದ ನೆನೆಗುದಿಗೆ ಬಿದ್ದಿರುವ ಪ್ಲಾಟ್ ವಿತರಣೆ, ಶೌಚಾಲಯ, ಸರಕಾರಿ ಸೌಲಭ್ಯಕ್ಕಾಗಿ ನೂರಾರು [illegible] ನಗರದ ಪ್ರಮುಖ ಬೀದಿಗಳಲ್ಲಿ ಕೂಲಿಕಾರರನ್ನು ಮೋಸಗೊಳಿಸಿದ ಪುರಸಭೆ ಆಡಳಿತ ವರ್ಗದ ವಿರುದ್ಧ ಘೋಷಣೆ ಕೂಗುತ್ತಾ ತಹಸೀಲ್ದಾರರ ಕಛೇರಿ ಹಾಗೂ ನಗರ ಸಭೆಗೆ ತೆರಳಿ ಮನವಿ ಪತ್ರವನ್ನು ಅರ್ಪಿಸಿದರು. ಮನವಿ ಸ್ವೀಕರಿಸಿದ ಪೌರ ಆಯುಕ್ತರು 7 ದಿನಗಳ ಒಳಗೆ ಬೇಡಿಕೆಗಳನ್ನು ಪರಿಶೀಲನೆ ಮಾಡಿ [illegible]ಸುವುದಾಗಿ ಆಶ್ವಾಸನೆ ನೀಡಿದರು.

ಹಲವಾರು ದಿನಗಳಿಂದ ನಗರ ಕೊಳಚೆ [illegible] ವಾಸಿಸುವ ಜನರಿಗೆ ಪ್ಲಾಟ್ [illegible] ಮಾಡಬೇಕು. ಗಾಳೆಮ್ಮನ [illegible] ವಾಸಿಸುವ ಜನರಿಗೆ [illegible] [illegible] ನಡೆಸುವ [illegible] ಜೀವನ ನಡೆಸುತ್ತಿದ್ದು ಕೂಡಲೇ ವಿದ್ಯುತ್ ಸೌಲಭ್ಯ ಮತ್ತು ಪ್ಲಾಟ್ ಇಲ್ಲದ ಜನರಿಗೆ ಪ್ಲಾಟ್ ವಿತರಣೆ ನೀಡಬೇಕು, ಸ.ನಂ. 56 ರಲ್ಲಿ 46 ಕುಟುಂಬಗಳಿಗೆ ಸಹಾಯಕ ಆಯುಕ್ತರು ಪ್ಲಾಟ್ ವಿತರಿಸಲು ಆದೇಶ ನೀಡಿದ್ದನ್ನು ಜಾರಿಗೆ ತರಬೇಕು. ಶೌಚಾಲಯ ವ್ಯವಸ್ಥೆ ಕೂಡಲೇ ನಿರ್ಮಿಸಬೇಕು ಎಂದು ಪುರಸಭೆ ಮುಂದೆ ಧರಣಿ ಸತ್ಯಾಗ್ರಹ ನಡೆಸುತ್ತ ಬಂದರೂ ಸಹ ಹಿಂದಿನ ಪುರಸಭೆ ಅಧ್ಯಕ್ಷರು ಕಣ್ಣೊರೆಸುವ ಕೆಲಸ ಮಾಡಿದ್ದನ್ನು ಜನ ನೋಡಿ ಬೇಸತ್ತು ಮತ್ತೆ ಹೋರಾಟಕ್ಕೆ ಮುಂದಾಗಲು ಸಿದ್ಧರಾಗಿದ್ದಾರೆ ಎಂದು ದಾದಾಪೀರ್ ತಿಳಿಸಿದರು. ಸಾಮೂಹಿಕ ಸಂಘಟನೆಗಳಾದ ಎಸ್.ಎಫ್.ಐ, ಕೂಲಿಕಾರರ ಸಂಘದ ಕಾರ್ಯಕರ್ತರು ಹೋರಾಟದಲ್ಲಿ ಭಾಗವಹಿಸಿ ಬೆಂಬಲಿಸಿ ಮಾತನಾಡಿದರು . ಪ್ರತಿಭಟನಾ ನೇತೃತ್ವವನ್ನು ನಬೀಸಾಬ್, ಸತ್ಯಪ್ಪ . ಎ. ಹುಲಗಪ್ಪ ಬಿ. ನಾಗರಾಜ, [illegible]ಗೌಡ, ಲಿಂಗಪ್ಪ ಮತ್ತು ಮೇಸ್ತ್ರಿ [illegible] ಇನ್ನಿತರ ಕಾರ್ಯಕರ್ತರು ಭಾಗವಹಿಸಿದ್ದರು.

ಮಹಾಚೈತ್ರ ಭೀಮಣ್ಣ ಖಂಡ್ರೆ ಹೇಳಿಕೆಗೆ ಎಸ್.ಎಫ್.ಐ. ಖಂಡನೆ

ಮಹಾಚೈತ್ರ ನಾಟಕದ ಕರ್ತೃ ಹೆಚ್. ಎಸ್. ಶಿವಪ್ರಕಾಶ್ ಅವರನ್ನು ಜೈಲಿಗೆ ಹಾಕಬೇಕೆಂದು, ಮಹಾಚೈತ್ರ ಕೃತಿಯನ್ನು ಸಂಪೂರ್ಣ ನಿಷೇಧ ಮಾಡಬೇಕೆಂದು ಮಾತನಾಡಿರುವ ವಿಧಾನ ಪರಿಷತ್ ಸದಸ್ಯ ಭೀಮಣ್ಣ ಖಂಡ್ರೆಯವರ ಹೇಳಿಕೆಯನ್ನು ಭಾರತ ವಿದ್ಯಾರ್ಥಿ ಫೆಡರೇಷನ್ ರಾಜ್ಯ ಸಮಿತಿ ಹಾಗೂ ಬೆಂಗಳೂರು ಜಿಲ್ಲಾ ಸಮಿತಿಗಳು ತೀವ್ರವಾಗಿ ಖಂಡಿಸಿವೆ.

ಮಹಾಚೈತ್ರ ಕೃತಿಯ ವಿಷಯದಲ್ಲಿ ಲೇಖಕನ ಅಭಿವ್ಯಕ್ತಿ ಸ್ವಾತಂತ್ರ್ಯದ ಪ್ರಶ್ನೆಗಿಂತ ಮುಖ್ಯವಾಗಿ ಬಸವಣ್ಣನವರನ್ನು ಅವಹೇಳನ ಮಾಡುವಂತಹದ್ದು, ಅಪಮಾನ ಮಾಡುವಂತದ್ದು ಈ ಕೃತಿಯಲ್ಲಿ ಏನೂ ಇಲ್ಲ ಎಂಬುದು ತೀರಾ ಮುಖ್ಯ. ವಚನ ಚಳುವಳಿ, ಇತಿಹಾಸ, ಐಕ್ಯತೆ, ಪುರಾಣ ಕಥೆಗಳನ್ನು ಬಳಸಿಕೊಂಡಿರುವ ಈ ಕೃತಿಯು ಬಸವಣ್ಣನವರ ಹಾಗೂ ವಚನ ಚಳುವಳಿಯ ಮಹಾ ಆಶಯವನ್ನು ಎತ್ತಿ ಹಿಡಿಯುವ ಕೃತಿಯಾಗಿದೆ.

ಮಠ ಮಾನ್ಯಗಳನ್ನು ಕಟ್ಟಿಕೊಂಡು, ಬಸವಣ್ಣನವರ ತತ್ವಗಳಿಗೆ ವಿರುದ್ಧವಾಗಿ ಜಾತೀಯ ಲಾಬಿ ಮಾಡುತ್ತಿರುವ ಮಠಾಧಿಪತಿಗಳು ಹಾಗೂ ಜಾತಿವಾದಿ ರಾಜಕಾರಣಿಗಳಿಗೆ ಮಹಾಚೈತ್ರ ಕೃತಿ ಕಿರಿಕು ಉಂಟುಮಾಡಿದರೆ ಅದರಲ್ಲಿ ಆಶ್ಚರ್ಯವೇನಿಲ್ಲ. ಇಂತಹ ಜಾತಿವಾದಿ ಕೋಮುವಾದಿ ಶಕ್ತಿಗಳಿಗೆ ಮಾನ್ಯತೆ ನೀಡಬಾರದು. ಸ್ವಾರ್ಥ ರಾಜಕೀಯಕ್ಕಾಗಿ ಇಂತಹ ಕ್ಷುಲ್ಲಕ ಹೇಳಿಕೆ ನೀಡುತ್ತಿರುವ ಭೀಮಣ್ಣ ಖಂಡ್ರೆಯಂತಹ ವ್ಯಕ್ತಿಗಳ ವಿರುದ್ಧ ಸರಕಾರ ಕಠಿಣ ಕ್ರಮ ಕೈಕೊಳ್ಳಬೇಕೆಂದು ಎಸ್.ಎಫ್.ಐ. ಸರಕಾರವನ್ನು ತೀವ್ರವಾಗಿ ಒತ್ತಾಯಿಸಿದೆ.



ಡಿ.ವೈ.ಎಫ್.ಐ: ಧರಣಿ ಸತ್ಯಾಗ್ರಹ

ಮಳವಳ್ಳಿ: ಡಿ.ವೈ.ಎಫ್.ಐ. ಮಳವಳ್ಳಿ ತಾಲ್ಲೂಕು ಸಮಿತಿಯು ಏಪ್ರಿಲ್ 26 ರಂದು ಕೆಲವು ಮೂಲಭೂತ ಸಮಸ್ಯೆಗಳಾದ ಕುಡಿಯುವ ನೀರಿನ ಸಮಸ್ಯೆ ಸಮರ್ಪಕ ವಿದ್ಯುಚ್ಛಕ್ತಿ ಪೂರೈಕೆ, ವಿಧವೆ, ವೃದ್ಧಾಪ್ಯ, ಅಂಗವಿಕಲ, ನಿವೃತ್ತಿ ವೇತನಗಳ ಅಡಿಯಲ್ಲಿ ನಡೆಯುತ್ತಿರುವ ವಂಚನೆ ಹಾಗು ಸರ್ಕಾರಿ ಆಸ್ಪತ್ರೆಗಳ ಸೌಲಭ್ಯ, ರೈತರಿಗೆ ಕಾಲಕಾಲಕ್ಕೆ ಸರಿಯಾಗಿ ನೀರು ಪೂರೈಸದೆ ಬೆಳೆ ಒಣಗುತ್ತಿರುವ ಬಗ್ಗೆ ಹಸಿರು ಕಾರ್ಡು ಮುಂತಾದ ಸಮಸ್ಯೆಗಳ ವಿರುದ್ಧ ಯುವಜನರು-ಮಹಿಳೆಯರು ಒಳಗೊಂಡಂತೆ ಸರ್ಕಾರಿ ಬಸ್ಸು ನಿಲ್ದಾಣದಿಂದ ಮೆರವಣಿಗೆ ಹೊರಟು ತಾಲ್ಲೂಕು ಕಛೇರಿ ಮುಂಬಾಗದಲ್ಲಿ ಸಂಜೆ ೪ ಘಂಟೆವರಗೆ ಧರಣಿ ಸತ್ಯಾಗ್ರಹ ನಡೆಯಿತು. ತಹಸಿಲ್ದಾರ್ ಪರವಾಗಿ ಶಿರಸ್ತೆದಾರ್ ಬಂದು ಮನವಿ ಪತ್ರ ಸ್ವಿಕರಿಸಿ ಸಮಸ್ಯೆಗಳ ಪರಿಹಾರಕ್ಕೆ ಎಲ್ಲಾ ಅಧಿಕಾರಿಗಳ ಜೂತೆ ಚರ್ಚಿಸಿ ಪರಿಹಾರ ನೀಡುವುದಾಗಿ ಒಪ್ಪಿಕೊಂಡರು . ಇದಕ್ಕೆ ಮುಂಚೆ ಜಿಲ್ಲಾ ಸಂಚಾಲಕರಾದ ಎಂ. ಪುಟ್ಟಮಾದಯ್ಯ ಜನರ ಮೂಲಭೂತ ಸಮಸ್ಯೆಗಳ ಬಗ್ಗೆ ಹಾಗು ದೇಶದ ರಾಜಕೀಯ ಅಧೋಗತಿಯಬಗ್ಗೆ ಮಾತನಾಡಿದರು. ಧರಣಿ ಸತ್ಯಾಗ್ರಹದ ನೇತೃತ್ವವನ್ನು ತಾಲ್ಲೂಕು dyfi ಅಧ್ಯಕ್ಷರಾದ ಟಿ. ಹೆಚ್. ಆನಂದ ಕಾರ್ಯದರ್ಶಿ ಜವರಯ್ಯ. ಕಾಂತರಾಜು ಹಾಗೂ ಎನ್. ಕೆ. ಶಿವಣ್ಣ ವಹಿಸಿದ್ದರು.

ನೀರಿನ ವ್ಯವಸ್ಥೆಗೆ ಒತ್ತಾಯಿಸಿ ರಸ್ತೆ ತಡೆ.

ಚಿಕ್ಕಬೇಗೂರು ಗೇಟ್: ಎಪ್ರಿಲ್ 26 ರಂದು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್‌ನ ಸ್ಥಳಿಯ ಘಟಕದವರ ನೇತೃತ್ವದಲ್ಲಿ ಕುಡಿಯುವ ನೀರಿನ ವ್ಯವಸ್ಥೆಗಾಗಿ ರಸ್ತೆ ತಡೆ ಚಳುವಳಿ ನಡೆಯಿತು 50 ಮಹಿಳೆಯರು ಸೇರಿದಂತೆ 150ಕ್ಕೂ ಮಿಗಿಲಾದ ಜನ ನೀರಿಗಾಗಿ ಘೋಷಣೆಗಳನ್ನು ಕೂಗುತ್ತಾ 30 ನಿಮಿಷಗಳ ಕಾಲ ರಸ್ತೆ ತಡೆ ಮಾಡಿದರು.

ಸಂಬಂಧಪಟ್ಟ ಅಧಿಕಾರಿಗಳು ಮತ್ತು ಪೋಲೀಸ್ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಚಿಕ್ಕ ಬೇಗೂರು ಗೇಟ್ ಪ್ರದೇಶಕ್ಕೆ ಕುಡಿಯುವ ನೀರಿನ ವ್ಯವಸ್ಥೆ ತಕ್ಷಣವೇ ಮಾಡುವುದಾಗಿ ಭರವಸೆ ಕೊಟ್ಟಮೇಲೆ ನಾಗರೀಕರು ಹೋರಾಟವನ್ನು ತಾತ್ಕಾಲಿಕವಾಗಿ ನಿಲ್ಲಿಸಲು ಒಪ್ಪಿ ಕಾರ್ಯಕ್ರಮವನ್ನು ಮುಗಿಸಿಧರು.

ಅದೇ ಸಂದರ್ಭದಲ್ಲಿ ಇನ್ನು ಒಂದು ವಾರದೊಳಗೆ ನೀರಿಗಾಗಿ ಕೆಲಸಗಳು ಆರಂಭವಾಗದಿದ್ದರೆ, ಉಗ್ರವಾದ ಹೋರಾಟವನ್ನು ಹಮ್ಮಿಕ್ಕೊಳ್ಳಲಾಗುತ್ತದೆಂದು ಡಿ.ವೈ.ಎಫ್.ಐ.ನ ನಾಯಕರುಗಳು ಎಚ್ಚರಿಸಿದ್ದಾರೆ.

ಕಾರ್ಯಕ್ರಮವನ್ನು ಉದ್ದೇಶಿಸಿ ಡಿ.ವೈ.ಎಫ್.ಐ ಘಟಕದ ಕಾರ್ಯದರ್ಶಿ ಕಾಂ. ಲಕ್ಷ್ಮಣ, ಡಿ.ವೈ.ಎಫ್.ಐ ಬೆಗಳೂರು ಜಿಲ್ಲಾ ಸಮಿತಿ ಅಧ್ಯಕ್ಷರು. ಕಾಂ. ಎಂ. ಅಶೋಕನ್ ಮತ್ತು ಸಿ.ಪಿ.ಐ(ಎಂ)ನ ಕಾಂ ಶಾಮಣ್ಣ ರೆಡ್ಡಿ ಮುಂತಾದವರು ಮಾತನಾಡಿದರು.

ಲೋಕಸಂಚಾರ

-ಶರತ್ಚಂದ್ರ

ಅಮೇರಿಕಾದ ಒಕ್ಲೋಹಾಮ ನಗರದಲ್ಲಿ ಸ್ಫೋಟ: 60 ಕ್ಕೂ ಹೆಚ್ಚು ಸಾವು 400 ಜನಕ್ಕೆ ಗಾಯ

ಅಮೇರಿಕದ ಒಕ್ಲೋಹಾಮಾ ನಗರದಲ್ಲಿ ಕಾರ್ ಬಾಂಬ್ ಒಂದು ಸ್ಫೋಟಗೊಂಡು 68ಕ್ಕೂ ಹೆಚ್ಚು ಜನ ಮಡಿದಿದ್ದಾರೆ. 400ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ. ಮೂರು ನಾಲ್ಕು ದಿನಗಳ ಪರಿಹಾರ ಕಾರ್ಯನಂತರವೂ, 200ಕ್ಕೂ ಹೆಚ್ಚು ಜನ ಕಾಣೆಯಾಗಿದ್ದಾರೆ. ಕಾರ್ ಬಾಂಬ್ ನ್ನು ಫೆಡರಲ್ ಸರ್ಕಾರದ ಕಛೇರಿಯೊಂದರಲ್ಲಿ ಇಡಲಾಗಿತ್ತು. ಒಂಭತ್ತು -ಮಾಳಿಗೆಯ ಈ ಕಟ್ಟದ ಹಲವಾರು ಭಾಗಗಳು ಕಾರ್ ಬಾಂಬ್ ನಿಂದ ಧ್ವಂಸವಾಗಿದವು. ನ್ಯೂಯಾರ್ಕ್‌ನ ಜಾಗತಿಕ ವಾಣಿಜ್ಯ ಕೇಂದ್ರ ಕಟ್ಟದಲ್ಲಿ ಆದ ಭಾರಿ ಸ್ಫೋಟದ ನಂತರ ಇದು ಅಮೇರಿಕದಲ್ಲಿ ನಡೆದ ಅತಿ ದೊಡ್ಡ ಸ್ಫೋಟ. ಈ ಸ್ಫೋಟದ ನಂತರ ಇನ್ನೂ 15 ಫೆಡರಲ್ ಕಟ್ಟಡಗಳಿಗೆ ಬೆದರಿಕೆಗಳು ಬಂದಿವೆ ಎಂದು ಹೇಳಲಾಗಿದೆ. ಎಲ್ಲಾ ಫೆಡರಲ್ ಕಟ್ಟಡಗಳಲ್ಲಿ ಭದ್ರತೆ ಬಿಗಿಗೊಳಿಸಲಾಗಿದ್ದರೂ ಭಯ ಆತಂಕ ಹರಡಿದೆ.

ಅಮೇರಿಕನ್ ಸರ್ಕಾರದ ವಿರುದ್ಧ ಎಲ್ಲಾ ಭಯೋತ್ಪಾದಕ ಚಟುವಟಿಕೆಗಳಿಗೆ ಜವಾಬ್ದಾರಿಯನ್ನು ಮುಸ್ಲಿಂ ಮೂಲಭೂತವಾದಿಗಳ ಮೇಲೆ ಹೊರಿಸುವುದು ಈಗ ಅಮೇರಿಕನ್ ಸರ್ಕಾರಿ ವಲಯಗಳಲ್ಲಿ ಅಭ್ಯಾಸ-ಫ್ಯಾಷನ್ ಸಹ. ಸ್ಫೋಟವಾದ ದಿನ ಪತ್ರಿಕೆಗಳೆಲ್ಲಾ ಮಧ್ಯ-ಏಶ್ಯಾದ ಅರಬ್ ಭಯೋತ್ಪಾದಕ ಗುಂಪೊಂದು ಇದಕ್ಕೆ ಕಾರಣ. ಮಧ್ಯ-ಏಶ್ಯಾದ ಭಯೋತ್ಪಾದಕ ಗುಂಪಿನ ಬಳಿ ಮಾತ್ರ ಇಂತಹ ಭಾರಿ ಸ್ಫೋಟದ ತಂತ್ರಜ್ಞಾನ ಇರುವುದು ಇತ್ಯಾದಿ ಊಹಾಪೋಹಗಳು ಸುದ್ದಿಗಳಾಗಿದ್ದವು. ಆದರೆ ಈಗ ಕೂಲಂಕಷ ತನಿಕೆ ನಂತರ ಇಬ್ಬರು ಬಿಳಿಯರನ್ನು ಬಂಧಿಸಲಾಗಿದೆ. ಜನಾಂಗದ್ವೇಷಿ ಬಿಳಿಯರ ಬಲಪಂಥೀಯ ಮಿಚಿಗನ್ ಮಿಲಿಶಿಯಾ ಎಂಬ ಗುಂಪಿಗೆ ಇವರು ಸೇರಿರುವುದು ಎಂದು ಹೇಳಲಾಗಿದೆ. ಇತ್ತೀಚೆಗೆ ಬಿಳಿಯ ಜನಾಂಗದ್ವೇಷಿ ಗುಂಪಿನ ಸದಸ್ಯನೊಬ್ಬನಿಗೆ ಮರಣದಂಡನೆ ವಿಧಿಸಿದ್ದರ ವಿರುದ್ಧ ಪ್ರತೀಕಾರ ಕ್ರಮ ಇರಬಹುದು ಎಂದು ಹೇಳಲಾಗಿದೆ. ಕ್ಯಾಂಪ್ ಡೇವಿಡಿಯನ್ ಇನ್ನೊಂದು ಗುಂಪಿನ ವಿರುದ್ಧ ಪೋಲೀಸ್ ಕಾರ್ಯಾಚರಣೆಗೆ ಪ್ರತೀಕವೂ ಇರಬಹುದು ಎಂದು ಹೇಳಲಾಗಿದೆ.

ಅಮೇರಿಕನ್ ಸರ್ಕಾರಿ ಕಟ್ಟಡಗಳ ವಿರುದ್ಧ ಭಯೋತ್ಪಾದಕ ಧಾಳಿ ಅತ್ಯಂತ ಪ್ರಬಲ ಸಾಮ್ರಾಜ್ಯಶಾಹಿ ಸರ್ಕಾರದ ಅಭೇಧ್ಯ ಭದ್ರತೆಗೆ ಭಾರಿ ಸವಾಲು ಇತರ ಎಲ್ಲೆಡೆ ಭಯೋತ್ಪಾದಕ ಗುಂಪುಗಳಿಗೆ ಕುಮ್ಮಕ್ಕು ಕೊಡುವ ಅದನ್ನು ವಿದೇಶಾಂಗ ನೀತಿಯ ಅಸ್ತ್ರವಾಗಿ ಬಳಸುವ ಅಮೇರಿಕನ್ ಸರ್ಕಾರಕ್ಕೆ ಅವರದ್ದೇ ಮದ್ದಿನ ರುಚಿ

ರಶ್ಯಾದಿಂದ ಪ್ಲುಟೋನಿಯಂ ಕಳ್ಳಸಾಗಾಣಿಕೆ - ಜರ್ಮನ್ ಏಜೆಂಟರ ನಾಟಕವೇ?

ಒಂದು ವರ್ಷದ ಹಿಂದೆ ಜರ್ಮನಿಯ ಮ್ಯುನಿಕ್ ವಿಮಾನ ನಿಲ್ದಾಣ ವೊಂದರಲ್ಲಿ ಮಾಸ್ಕೋದಿಂದ ಬಂದ ಮೂವರು ಕಳ್ಳಸಾಗಾಣಿಕೆದಾರರನ್ನು ಬಂಧಿಸಲಾಗಿದೆ. ಅವರು ರಶ್ಯದಿಂದ ಪ್ಲುಟೋನಿಯಂ (ಅಣ್ವಸ್ತ್ರ ತಯಾರಿಸಲು ಬೇಕಾದ ಪ್ರಮುಖ ಇಂಧನ) ಕಳ್ಳಸಾಗಾಣಿಕೆಯಲ್ಲಿ ತೊಡಗಿದ್ದರು ಎಂದು ವರದಿಯಾಗಿತ್ತು. ಅದು ಜರ್ಮನ್ ಬೇಹುಗಾರಿಕೆ ಸಂಸ್ಥೆಯ ಉತ್ತಮ ಕಾರ್ಯಾಚರಣೆಯಲ್ಲಿ ಒಂದು ಎಂದೆಲ್ಲಾ ಹೊಗಳಲಾಗಿತ್ತು. ಆದರೆ ಈಗ ಅದು ಜರ್ಮನ್ ಏಜೆಂಟರೇ ಆಡಿದ್ದ ನಾಟಕ ಎಂದು ಬಯಲಾಗಿದೆ. ಜರ್ಮನಿಯ ಅತಿ ದೊಡ್ಡ ಗೌರವಾನ್ವಿತ ಪತ್ರಿಕೆ ತನ್ನ ತನಿಖೆಯ ನಂತರ ಈ ರೀತಿ ಹೇಳಿದೆ. ಈ ಆಪಾದನೆಯ ಹಿನ್ನೆಲೆಯಲ್ಲಿ ಜರ್ಮನ್ ಛಾನ್ಸಲರ್ ಹೆಲ್ಮಟ್ ಕೋಹ್ಲ್ ಗೆ ಬೇಹುಗಾರಿಕೆ ಸಲಹಾಗಾರ ಹಾಗೂ ಬೇಹುಗಾರಿಕೆ ಸಂಸ್ಥೆಗಳ ಮುಖ್ಯಸ್ಥ ರಾಜಿನಾಮೆ ಕೊಡಬೇಕು ಎಂಬ ತೀವ್ರ ಒತ್ತಾಯ ಬಂದಿದೆ. ಇದು ಆಳುವ ಪಕ್ಷ ಅಪರಾಧಗಳ ಬಗ್ಗೆ ಬಿಗಿ ಕ್ರಮ ತೆಗೆದುಕೊಳ್ಳಲು ಹಿಂಜರಿಯುವುದಿಲ್ಲ ಎಂದು ತೋರಿಸಲು ಮಾಡಿದ ಚುನಾವಣಾ ಸ್ಟಂಟ್ ಎಂದೂ ವಿರೋಧ ಪಕ್ಷಗಳು ಆಪಾದಿಸಿವೆ.

ಡೆರ್ ಸ್ಪಿಗಲ್ ಎಂಬ ಜರ್ಮನ್ ಪತ್ರಿಕೆ ತನ್ನ ತನಿಖಾ ವರದಿಯಲ್ಲಿ ಸ್ಪೇನ್ ನಲ್ಲಿ ಜರ್ಮನ್ ಏಜೆಂಟರುಗಳು ಕಳ್ಳಸಂತೆಯಲ್ಲಿ ಪ್ಲುಟೋನಿಯಂ ಇಂಧನ ಒದಗಿಸಿಕೊಟ್ಟವರಿಗೆ 27.6 ಕೋಟಿ ಡಾಲರು ಕೊಡುವುದಾಗಿ ಸುದ್ದಿ ಹರಡಿಸಿದ್ದರಂತೆ. ಇದಕ್ಕೆ ಪ್ರತಿಕ್ರಿಯೆಯಾಗಿ ಇಬ್ಬರು ಸ್ಪಾನಿಷ್ ಹಾಗೂ ಒಬ್ಬ ಕೋಲಂಬಿಯನ್ ವ್ಯಾಪಾರಿಗಳಿಗೆ ಈ ಕಳ್ಳಸಂತೆಯಲ್ಲಿ ಭಾಗವಹಿಸಲು ಉತ್ತೇಜಿಸಿದರಂತೆ. ಅನಂತರ ಮ್ಯುನಿಕ್ ವಿಮಾನ ನಿಲ್ದಾಣದ 'ನಾಟಕ' ನಡೆಯಿತಂತೆ. ಆಗಲೇ ಇದು 'ನಾಟಕ' ಎಂಬ ವದಂತಿ ಹಬ್ಬಿತ್ತು. ಈಗ ಅದು ಗುರುತರ ಆಪಾದನೆ ಆಗಿದೆ. ಜರ್ಮನ್ ಬೇಹುಗಾರಿಕೆ ಸಂಸ್ಥೆ ಈ ಆಪಾದನೆಯನ್ನು ನೇರವಾಗಿ ನಿರಾಕರಿಸಿಲ್ಲ. ಕೆಲವೊಮ್ಮೆ ಅಪರಾಧಿ ಗ್ಯಾಂಗ್ ಪತ್ತೆ ಹಚ್ಚಲು ಇಂತಹ ತಂತ್ರಗಳನ್ನು ಬಳಸುವುದು ಉಂಟು ಎಂದು ಹಾರಿಕೆ ಉತ್ತರ ನೀಡಿದೆ. ಈ ಆಪಾದನೆ ಬಗ್ಗೆ ತನಿಕೆ ನಡೆಸುವುದಾಗಿ ಭರವಸೆ ನೀಡಿದೆ.

ಈ ಆಪಾದನೆ ನಿಜವಾದಂತೆ ಜರ್ಮನ್ ಬೇಹುಗಾರಿಕೆ ಸಂಸ್ಥೆ ಬಿ.ಎನ್.ಡಿ. ತನ್ನ ಸೀಮೆಯನ್ನು ಅತಿಕ್ರಮಿಸಿದೆ ಎಂದು ಜರ್ಮನ್ ಪಾರ್ಲಿಮೆಂಟಿನಲ್ಲಿ ತೀವ್ರವಾಗಿ ಟೀಕಿಸಿದ್ದಾರೆ. ಇಂತಹ ಅಪಾಯಕಾರಿ ವಸ್ತುಗಳ ಕಾಳಸಂತೆಗೆ ಉತ್ತೇಜನ ನೀಡವುದು ಅಕ್ರಮ. ಬಿ.ಎನ್.ಡಿಯನ್ನು ಬರ್ಖಾಸ್ತು ಮಾಡಬೇಕು ಎಂಬ ಒತ್ತಾಯ ಬಂದಿದೆ. ಛಾನ್ಸಲರ್ ಬೇಹುಗಾರಿಕೆ ಸಲಹೆಗಾರ ಪಾರ್ಲಿಮೆಂಟಿಗೆ ಬಂದು ಈ ಬಗ್ಗೆ ಸಮುಜಾಯಿಷಿ ನೀಡಲು ಆಜ್ಞೆ ಮಾಡಲಾಗಿದೆ.

ಹೇಗಿದೆ ಸಾಮ್ರಾಜ್ಯಶಾಹಿ ದೇಶಗಳ ಬೇಹುಗಾರಿಕೆ ಸಂಸ್ಥೆಗಳ ನಾಟಕ? ಮುಂದಿನ ಬಾರಿ ಸಾಮ್ರಾಜ್ಯಶಾಹಿ ಬೇಹುಗಾರಿಕೆ ಸಂಸ್ಥೆಗಳು ಇಂತಹ ಭಾರಿ ಕಾರ್ಯಾಚರಣೆ ನಡೆಸಿದಾಗ ನೆನಪಿಸಿಕೊಳ್ಳಿ ಅದು 'ನಾಟಕ' ಇರಬಹುದು ಅಂತ!

ವಿಶ್ವಸಂಸ್ಥೆ ಶಾಂತಿಪಾಲನಾ ಪಡೆಯಲ್ಲಿ ಜನಾಂಗ ಭೇದ ನೀತಿಯೇ?

"ವಿಶ್ವಸಂಸ್ಥೆಯಲ್ಲಿ ಜನಾಂಗಭೇಧ ನೀತಿ ಇದೆ. ಯುಗೋಸ್ಲಾವಿಯಾದಲ್ಲಿ ವಿಶ್ವಸಂಸ್ಥೆ "ಶಾಂತಿ ಪಾಲನಾ ಪಡೆ (UNPROFOR) ಯ ಹೈಕಮಾಂಡ್ ಯುರೋಪಿನ ಮತ್ತು ಮೂರನೇ ಜಗತ್ತಿನ ಶಾಂತಿ ಪಾಲನಾ ಪಡೆಗಳ ಬಗ್ಗೆ ಬೇಧ ಭಾವ ತೋರಿಸುತ್ತದೆ".

ಇದು ಸಾಮ್ರಾಜ್ಯಶಾಹಿ ವಿರೋಧಿ ಸಂಘಟನೆಯೊಂದರ ಟೀಕೆಯಲ್ಲ ಮಾಜಿ ಯುಗೋಸ್ಲಾವಿಯಾದ ಶಾಂತಿಪಾಲನಾ ಪಡೆಯಲ್ಲಿ ಭಾಗವಹಿಸಿದ್ದ 1200 ಸೈನಿಕರ ಬಾಂಗ್ಲಾದೇಶಿ ಬಿಟಲಿಯನ್ ಕಮಾಂಡರ್ ಕರ್ನಲ್ ಅಖ್ತಾರ್‌ರ ಟೀಕೆ ಇದು. ಬೋಸ್ನಿಯಾದ ಬಿಹಾಕ್ ಎಂಬ ಪ್ರದೇಶದಲ್ಲ ಕಳಿಸಲಾದ ಬಾಂಗ್ಲಾದೇಶಿ ಪಡೆ ಪಟ್ಟ ಪಾಡಿನ ಅನುಭವದ ಆಧಾರದಿಂದ ಬಂದ ಟೀಕೆ ಇದು. ಖಾಸಗಿಯಾಗಿ ಇದು ನಿಜ ಎಂದು ಹಲವಾರು ವಿಶ್ವಸಂಸ್ಥೆ ಅಧಿಕಾರಿಗಳೂ ಒಪ್ಪಿಕೊಳ್ಳುತ್ತಾರೆ. ವಿಶ್ವಸಂಸ್ಥೆ ಅಧಿಕಾರಶಾಹಿ ಮೂರನೇ ಜಗತ್ತಿನ ಪಡೆಗಳ ಸಮಸ್ಯೆಗಳ ಬಗ್ಗೆ ನಿರ್ಲಕ್ಷ್ಯ ತೋರುತ್ತದೆ ಎನ್ನುತ್ತಾರೆ ಅವರು. ಏಕೆಂದರೆ ಈ ಅಧಿಕಾರಶಾಹಿ ಹೆಚ್ಚಾಗಿ ಸಾಮ್ರಾಜ್ಯಶಾಹಿ ಬಿಳಿಯ ದೇಶಗಳಿಂದ ಬಂದದ್ದು. ಬಾಂಗ್ಲಾದೇಶಿ ಪಡೆಗಳ ಬಿಹಾಕ್ ನ ಗಲಭೆ-ಪೀಡಿತ ಪ್ರದೇಶಗಳಲ್ಲಿ ಕಳಿಸಿದಾಗ ಅವರಿಗೆ ಬೇಕಾದ ಶೀತಕಾಲದ ಉಡುಪುಗಳು, ಬೆಚ್ಚಗಿಡಲು ಇತರ ಉಪಕರಣ, ಮೂಲಭೂತ ಶಸ್ತ್ರಾಸ್ತ್ರಗಳೂ ಇರಲಿಲ್ಲ. ಬಾಂಗ್ಲಾದೇಶ ಪಡೆಗಳಿಗಿಂತ ಮೊದಲು ಯುರೋಪ್ ಸೇರಬೇಕಾಗಿದ್ದ 50 ಟನ್‌ಗಳ ಉಪಕರಣಗಳು ಅಮೇರಿಕನ್ ಕಂಪೆನಿಯೊಂದರ ನಿರ್ಲಕ್ಷ್ಯದಿಂದ ತಪ್ಪಾಗಿ ಈಜಿಪ್ಟ್ ಸೇರಿ, ಕೆಲವು ತಿಂಗಳುಗಳ ನಂತರ ಯುರೋಪ್ ತಲುಪಿತು. ಅಷ್ಟರೊಳಗೆ ಅಲ್ಲಿನ ಪರಿಸ್ಥಿತಿ ಎಷ್ಟು ಹದಗೆಟ್ಟಿತ್ತೆಂದರೆ ಅದನ್ನು ಬಾಂಗ್ಲಾದೇಶಿ ತಲುಪಿಸುವ ಗೋಜಿಗೆ ವಿಶ್ವಸಂಸ್ಥೆ ಹೈಕಮಾಂಡ್‌ಗೆ ಹೋಗಿಲ್ಲ. ಕೆಲವೇ ತಿಂಗಳುಗಳ ಹಿಂದೆ, ಅದೇ ಪ್ರದೇಶದಲ್ಲಿ ಫ್ರೆಂಚ್ ಪಡೆಗಳ ಮೇಲು ದಾಳಿಯಾದಾಗ ಅದೇ ಹೈಕಮಾಂಡ್ ವಿಶ್ವಸಂಸ್ಥೆ ನಾಟೋ ವಿಮಾನಗಳ ರಕ್ಷಣೆ ಒದಗಿಸಿತ್ತು. ಅವರ ರಕ್ಷಣೆಯಡಿಯಲ್ಲಿ ಫ್ರೆಂಚ್ ಪಡೆಗಳಿಗೆ ಅಗತ್ಯ ಸರಬರಾಜುಗಳನ್ನು ಸಾಗಿಸಿತ್ತು. ಇದು ಜನಾಂಗಭೇದ ನೀತಿ ಅಲ್ಲದಿದ್ದರೆ ಇನ್ನೇನೂ ಬಾಂಗ್ಲಾದೇಶಿ ಪಡೆಗಳಿಗೆ ಇಂಧನ ಪೂರೈಕೆಯ ಜವಾಬ್ದಾರಿ ಹೈಕಮಾಂಡ್ ದ್ದಾಗಿತ್ತು. ಅದು ಹಲವು ತಿಂಗಳುಗಳ ನಂತರವೂ ಅಲ್ಲಿಗೆ ಸೇರಲಿಲ್ಲ, ಇಂಧನದ ಅಭಾವದಿಂದ ಹತಾಶರಾದ ಸೈನಿಕರು ಕ್ಯಾಂಪ್ ನಿಂದ ಹೋರಗೆ ಇಂಧನ ಹುಡುಕಿಕೊಂಡು ಹೊರಟಾಗಲೇ ಸೈನಿಕರು ಸತ್ತಿದ್ದು. ಇಂಧನ ಸಿಕ್ಕದೆ ಟ್ಯಾಂಕ್ ತೈಲ ಇತ್ಯಾದಿ ಬಳಸಿ ಯುಗೋಸ್ಲಾವಿಯಾದ ಶೀತಕಾಲದವನ್ನು ಬಾಂಗ್ಲಾ ದೇಶಿ ಸೈನಿಕರು ಎದುರಿಸಬೇಕಾಯಿತು. ಸಾಲದಕ್ಕೆ ಬಿಹಾಕ್ ಪ್ರದೇಶದ ಕಮಾಂಡರ್ ಕರ್ನಲ್ ಅಖ್ತರ್ ಮೇಲೆ ಬಿಹಾಕ್ ಪ್ರದೇಶ ಕಮಾಂಡ್ ಎಂಬ ಹೊಸ ಹುದ್ದೆ ಸೃಷ್ಟಿಸಿ ಕೆನಡಿಯನ್ ಕರ್ನಲ್‌ನ್ನು ಹಾಕಲಾಯಿತು. ಫ್ರೆಂಚ್ ಪಡೆಗಳು ಇದೇ ಪ್ರದೇಶದಲ್ಲಿದ್ದಾಗ ಅವರು ನೇರವಾಗಿ UNPROFOR ಮುಖ್ಯ ಕಛೇರಿಯ ಕಮಾಂಡ್ ಅಡಿಯಲ್ಲಿತ್ತು. ಇದಕ್ಕೆ ವಿಶ್ವಸಂಸ್ಥೆ ಅಧಿಕಾರಿಗಳು ಕೊಡುವ ಕಾರಣವೆಂದರೆ, ವಿಶ್ವಸಂಸ್ಥೆಯ ಅಧಿಕಾರಶಾಹಿ ಬಾಂಗ್ಲಾದೇಶಿ ಕರ್ನಲ್ ನ ಬೇಡಿಕೆಗಳ ಬಗ್ಗೆ ನಿರ್ಲಕ್ಷ್ಯ ತೋರಿಸಬಹುದು ಎಂದರಂತೆ. ಇದು ಜನಾಂಗಭೇದ ವಿಶ್ವಸಂಸ್ಥೆಯ ಅಧಿಕೃತ ನೀತಿ ಎಂಬ ಪರೋಕ್ಷ ಸ್ವೀಕಾರವಲ್ಲದೆ ಇನ್ನೇನು?

ಇದು ಸಾಲದೆಂಬಂತೆ ಕ್ರೋಶಿಯಾದ ಸರ್ಕಾರ ವಿಶ್ವಸಂಸ್ಥೆ ಶಾಂತಿಪಾಲನಾ ಪಡೆಯಲ್ಲಿ ಮೂರನೇ ಜಗತ್ತಿನ ಪಡೆಗಳು ಇರಬಾರದೆಂದು ತಾಕೀತು ಮಾಡಿದೆಯಂತೆ! ಏಕೆಂದರೆ ಶಾಂತಿಪಾಲನಾ ಪಡೆಯಲ್ಲಿ ಯುರೋಪಿಯನ್ ಸೈನಿಕರಿದ್ದರೆ, ಪ್ರದೇಶದಲ್ಲಿ ಶಾಂತಿಪಾಲನೆ ಬಗ್ಗೆ ವಿಶ್ವಸಂಸ್ಥೆ ಮುತುವರ್ಜಿ ವಹಿಸುತ್ತದೆಯಂತೆ. ವಿಶ್ವಸಂಸ್ಥೆಯ ಜನಾಂಗಭೇದ ನೀತಿ ಬಗ್ಗೆ ಇದ್ದಕ್ಕಿಂತ ಹೆಚ್ಚಿನ ಸರ್ಟಿಫಿಕೇಟ್ ಬೇಕೆ?!

ಕ್ಯೂಬಾದ ದಿಗ್ಬಂಧನಕ್ಕೆ ಅಂತರ್ರಾಷ್ಟ್ರೀಯ ರೂಪ ಕೊಡುವ ಯತ್ನ ಅಧ್ಯಕ್ಷ ಕ್ಲಿಂಟನ್‌ಗೆ ಸಿಐಟಿಯು ಪ್ರತಿಭಟನಾ ಪತ್ರ

ಸಿಐಟಿಯು ಪ್ರಧಾನ ಕಾರ್ಯದರ್ಶಿ ಡಾ. ಎಂ.ಕೆ. ಫಂದೆ ಅಮೇರಿಕಾದ ಅಧ್ಯಕ್ಷರಿಗೆ ಬಿಲ್ ಕ್ಲಿಂಟನ್‌ರಿಗೆ ಬರೆದಿರುವ ಒಂದು ಪತ್ರದಲ್ಲಿ ಹೊಸ ಹೆಲ್‌ಮ್ಸ್ ಬರ್ಟನ್ ಯೋಜನೆಯ ಮೂಲಕ ಕ್ಯೂಬಾದ ಮೇಲೆ ಹೇರಿರುವ ಅಮೇರಿಕಾದ ದಿಗ್ಬಂಧನಕ್ಕೆ ಅಂತರ್ರಾಷ್ಟ್ರೀಯ ರೂಪ ಕೊಡುವ ಪ್ರಯತ್ನದ ಬಗ್ಗೆ ಬಲವಾದ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ. ಅಮೇರಿಕನ್ ಸಂಸತ್ತಿನ ಪ್ರತಿನಿಧಿ ಸದನದಲ್ಲಿ ಸೆನೇಟರ್ ಹೆಲ್‌ಮ್ಸ್ ಹಾಗೂ ಸೆನೇಟರ್ ಬರ್ಟನ್ ಮುಂಡಿಸಿರುವ ಹೊಸ ಕಾನೂನು ಯೋಜನೆ ಕ್ಯೂಬಾದೊಂದಿಗೆ ವ್ಯವಹಾರ ನಡೆಸುವ ಧೈರ್ಯ ತೋರುವ ವ್ಯಕ್ತಿಗಳನ್ನು ಹಾಗೂ ದೇಶಗಳನ್ನು ಶಿಕ್ಷಿಸುವ ಯೋಜನೆಯನ್ನು ಮುಂದಿಟ್ಟಿದೆ.

ಡಾ. ಫಂದೆ ತಮ್ಮ ಪತ್ರದಲ್ಲಿ "ಭಾರತೀಯ ಕಾರ್ಮಿಕ ವರ್ಗ ಮತ್ತು ಸಿಐಟಿಯು ಈಗಾಗಲೇ ಕ್ಯೂಬಾದ ಮೇಲೆ ಅಮೇರಿಕಾದ ದಿಗ್ಬಂಧನವನ್ನು ಖಂಡಿಸಿರುವವರ ಸಾಲಿಗೆ ಸೇರಿದ್ದು ಅಮೇರಿಕನ್ ನಿರ್ಬಂಧ ಹೇರಿರುವ ಪಿತೂರಿಗಳ ವಿರುದ್ಧ ಕ್ಯೂಬಾ ಜನತೆಯ ಹೋರಾಟದೊಂದಿಗೆ ಸೌಹಾರ್ದ ವ್ಯಕ್ತಪಡಿಸುವವರೊಂದಿಗೆ ತನ್ನನ್ನು ಗುರುತಿಸಿಕೊಂಡಿದೆ. ಈ ದಿಗ್ಬಂಧವನ್ನು ಅಂತರ್ರಾಷ್ಟ್ರೀಯಗೊಳಿಸುವ ಹೆಲ್‌ಮ್ಸ್-ಬರ್ಟನ್ ಯೋಜನೆ ಇತರ ದೇಶಗಳ ಸಾರ್ವಭೌಮತ್ವದಲ್ಲಿ ನಗ್ನ ಹಸ್ತಕ್ಷೇಪ ಮಾತ್ರವೇ ಅಲ್ಲ, ಕ್ಯೂಬಾ ಶರಣಾಗುವಂತೆ ಮಾಡಲು ಒಂದು ರಾಕ್ಷಸೀ ಪಿತೂರಿ ಮಾತ್ರವೇ ಅಲ್ಲ, ಅಮೇರಿಕಾದ ಈ ತಂತ್ರವನ್ನು ವಿರೋಧಿಸುವವರಿಗೆ, ಖಂಡಿಸುವವರಿಗೆ ಕೂಡಾ ಒಂದು ಬೆದರಿಕೆ" ಎಂದಿದ್ದಾರೆ.

ಇಂತಹ ಒಂದು ಶಾಸನ ತರುವ ಯೋಜನೆಗೆ ಬಲವಾದ ಪ್ರತಿಭಟನೆ ವ್ಯಕ್ತಪಡಿಸುತ್ತಾ ಸಿಐಟಿಯು ಪ್ರಧಾನ ಕಾರ್ಯದರ್ಶಿಗಳು "ಕ್ಯೂಬಾದ ವಿರುದ್ಧ ಅಮೇರಿಕಾದ ಈ ತಂತ್ರದ ವಿರುದ್ಧ ಅಂತರ್ರಾಷ್ಟ್ರೀಯ ಅಭಿಪ್ರಾಯವನ್ನು ಗಮನಕ್ಕೆ ತಗೊಳ್ಳಬೇಕು, ಕ್ಯೂಬಾದ ವಿರುದ್ಧ ಅಮಾನವೀಯ ದಿಗ್ಬಂಧನವನ್ನು ಹಿಂತೆಗೆದುಕೊಳ್ಳಬೇಕು" ಎಂದು ಅಧ್ಯಕ್ಷ ಕ್ಲಿಂಟನ್‌ರನ್ನು ಆಗ್ರಹಪಡಿಸಿದ್ದಾರೆ. "ಕ್ಯೂಬಾದ ವಿರುದ್ಧ ದಿಗ್ಬಂಧನಕ್ಕೆ ಸಂಬಂಧಪಟ್ಟಂತೆ ವಿಶ್ವಸಂಸ್ಥೆಯ ನಿರ್ಣಯವನ್ನು ನಿಮ್ಮ ಸರಕಾರ ಗೌರವಿಸಬೇಕು ಎಂದು ಸಿಐಟಿಯು ಬಲವಾಗಿ ಒತ್ತಾಯಿಸುತ್ತದೆ" ಎಂದು ಡಾ. ಫಂದೆ ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಹಿಟ್ಲರನ ಹಾದಿಯಲ್ಲಿ......

-ಪುಟ 5 ರಿಂದ...

ಅವರಿಗೆ ಆಂತಕವಿಲ್ಲ, ಆದ್ದರಿಂದ ಅವರ ಸಂಕುಚಿತ ಗುರಿ ಸಾಧನೆಗೆ ಈ ರೀತಿ ಜನಗಳ ಅಸಂತೃಪ್ತಿಯ ದಾರಿ ತಪ್ಪಿಸಲು ಬಿಡಬೇಕೇ? ರಾಮನ ಹೆಸರಿನಲ್ಲಿ ಅವರು ಕೋಟಿಗಟ್ಟಲೆ ಭಾರತೀಯರನ್ನು ಹೆಚ್ಚೆಚ್ಚು ದಾರಿದ್ರ್ಯದ ಸ್ಥಿತಿಗೆ ತಳ್ಳಲು ಪ್ರಯತ್ನಿಸಲು ಬಿಡಬೇಕೇ?

ವಿನಾಶಕಾರೀ ಅಜೆಂಡಾ

ಇಷ್ಟೇ ಅಲ್ಲ, ಕಾವಿ ಪಡೆಗಳ ಅಜೆಂಡಾ ನಮ್ಮ ಆರ್ಥಿಕಕ್ಕೂ ಭಾರೀ ಹಾನಿಯುಂಟು ಮಾಡಿದೆ. ಡಿಸೆಂಬರ್ 6, 1992ರ ಕರಾಳ ಕೃತ್ಯದಿಂದಾಗಿ ಸಾವಿರಾರು ಕೋಟಿ ರೂಪಾಯಿಗಳ ಆಸ್ತಿಪಾಸ್ತಿ ನಾಶವಾದುದಷ್ಟೇ ಅಲ್ಲ ಮುಂಬೈಯ ಗಲಭೆಗಳಲ್ಲಿ ಆರ್ಥಿಕಕ್ಕೆ ಅಗಣಿತ ನಷ್ಟ ಹಾಗೂ ಅಂತರ್ರಾಷ್ಟ್ರೀಯವಾಗಿ ನಮ್ಮ ಪ್ರತಿಷ್ಠೆಗೆ ಕುಂದು ತಂದವು. ಈಗ ಮಥುರಾ ಹಾಗೂ ವಾರಾಣಾಸಿಯ ಮಸೀದಿಗಳ ಧ್ವಂಸವನ್ನು ತನ್ನ ಅಜೆಂಡಾದಲ್ಲಿತರುವ ಬೆದರಿಕೆ ಹಾಕುತ್ತಿವೆ. ಖಂಡಿತಾ ಇದು ಇನ್ನೂ ಸಾವಿರಾರು ಭಾರತೀಯರ ಜೀವಗಳನ್ನು ಬಲಿಗೊಟ್ಟು ದೇಶವನ್ನು ಒಂದು ನಿರಂತರ ತಿಕ್ಕಾಟಕ್ಕೆ ತಳ್ಳುವ ಬೆದರಿಕೆ.

ಕಾವಿಪಡೆಗಳು ದೇಶದ ಮುಂದೆ ಇಡುತ್ತಿರುವ ಅಜೆಂಡಾ ಹಾಗೂ ತಮ್ಮ ಗುರಿಸಾಧನೆಗೆ ಅವು ಬಳಸುತ್ತಿರುವ ವಿಧಾನಗಳು ಭಾರತೀಯ ಮಾದರಿಯ ಫ್ಯಾಸಿಸ್ಟ್ ತರಹದ ಆಳ್ವಿಕೆ ಹೇಗಿರುತ್ತದೆ ಎಂದು ತೋರಿಸುತ್ತದೆಯಲ್ಲದೆ ಮತ್ತೇನನ್ನೂ ಅಲ್ಲ. ಬಿಜೆಪಿ ಬಯಸುವ ಪ್ರಭುತ್ವ ಎಂತದ್ದು ಎಂಬುದು ಹಾಗೂ ಅದರ ಆರ್ಥಿಕ ಹಾಗೂ ಸಾಮಾಜಿಕ ಧೋರಣೆಗಳನ್ನು ನೋಡಿದಾಗ ಅದು ಆಳುವ ವರ್ಗಗಳಲ್ಲಿ ಅತ್ಯಂತ ಪ್ರತಿಗಾಮಿ ವಿಭಾಗ ಎಂದು ಬಯಲಾಗುತ್ತದೆ" ಈಗ ಕಾವಿ ಪಡೆಗಳು ಪ್ರಯತ್ನಿಸುತ್ತಿರುವುದು ಒಂದು ಮಧ್ಯಕಾಲೀನ ಮತೀಯ ಆಧಾರದ "ಹಿಂದೂರಾಷ್ಟ್ರ"ದ ಸ್ಥಾಪನೆ ಮಾತ್ರವೇ ಅಲ್ಲ ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತತೆ ಆಧಾರವನ್ನೇ ನಿರಾಕರಿಸುವ ಪ್ರಯತ್ನ ಅವರದ್ದು.

ಇಂತಹ ಒಂದು ಫ್ಯಾಸಿಸ್ಟ್ ಮಾದರಿ ಬೆದರಿಕೆ ದೇಶದ ಆಳುವ ಪಕ್ಷವನ್ನು ಬದಲಿಸಕ್ಕಷ್ಟೇ ಅಲ್ಲ ಎಂಬುದನ್ನು ಗಮನಿಸಬೇಕು. ಅದು ಕೇಂದ್ರದಲ್ಲಿ ಒಂದು ಪಕ್ಷದ ಸ್ಥಾನದಲ್ಲಿ ಇನ್ನೊಂದು ಪಕ್ಷ ಅಧಿಕಾರಕ್ಕೆ ಬರುವ ಸಾಮಾನ್ಯ ಕ್ರಿಯೆ ಅಲ್ಲ, ಅದು ಜಾತ್ಯಾತೀತತೆಯನ್ನು ಆಧರಿಸಿದ ಸಂಸದೀಯ ಪ್ರಜಾಪ್ರಭುತ್ವದ ಸ್ಥಾನದಲ್ಲಿ ಒಂದು ಅಸಹಿಷ್ಣು ಮತೀಯ ಸಿದ್ಧಾಂತವನ್ನು ಆಧಾರಿಸಿದ ಬಹಿರಂಗ ಭಯೋತ್ಪಾದಕ ಸರ್ವಾಧಿಕಾರ ತರುವ ಕ್ರಿಯೆ. ಇದು ಕೇವಲ ಸ್ವರೂಪದಲ್ಲಿನ ಬದಲಾವಣೆಯಷ್ಟೇ ಅಲ್ಲ, ತಿರುಳಿನಲ್ಲಿನ ಬದಲಾವಣೆ ಕೂಡಾ ಅದೂ ಅತ್ಯಂತ ದುಷ್ಟ ಬದಲಾವಣೆ.

ಸರಿ, ಹಾಗಾದರೆ ಇದನ್ನು ಎದುರಿಸುವುದು ಹೇಗೆ? ದೇಶಪ್ರೇಮಿ ಜಾತ್ಯಾತೀತ ಶಕ್ತಿಗಳ ಸಾಧ್ಯವಾದಷ್ಟು ವ್ಯಾಪಕ ಐಕ್ಯತೆಯ ಮೂಲಕ. ಕಾಂಗ್ರೆಸ್ ಇದರ ಭಾಗವಾಗುತ್ತದೆಯೇ? ಇಲ್ಲ, ಏಕೆ? ಏಕೆಂದರೆ ಅದರ ಧೋರಣೆಗಳಿಂದಾಗಿಯೇ ಜನಗಳಲ್ಲಿ ಅಸಂತೃಪ್ತಿ ಹುಟ್ಟಿದ್ದು, ಪ್ರತಿಗಾಮಿ ಫ್ಯಾಸಿಸ್ಟ್ ಮಾದರಿ ಶಕ್ತಿಗಳು ಬಳಸಲು ಪ್ರಯತ್ನಿಸುತ್ತಿರುವುದು ಈ ಅಸಂತೃಪ್ತಿಯನ್ನೇ. ಈ ಅಸಂತೃಪ್ತಿಯನ್ನು ಕ್ರಾಂತಿಕಾರಿ ಪ್ರಗತಿಶೀಲ ಆಂದೋಲನಗಳತ್ತ ತಿರುಗಿಸುವುದೇ ಇಂದು ಫ್ಯಾಸಿಸ್ಟ್ ಸ್ವರೂಪದ ಶಕ್ತಿಗಳನ್ನು ಖಂಡಿತವಾದಿಗಳೂ ತಡೆದು ನಿಲ್ಲಿಸಬಹುದಾದಂತ ದಾರಿ. ಫ್ಯಾಸಿಸಂ ಸ್ವರೂಪದ ಶಕ್ತಿಗಳು ಗೆಲ್ಲುತ್ತವೆಯೋ ಅಥವಾ ಕ್ರಾಂತಿಕಾರಿ ಶಕ್ತಿಗಳೋ ಎಂಬುದನ್ನು ಭವಿಷ್ಯತ್ತು ನಿರ್ಧರಿಸುತ್ತದೆ.

ಇಂದು ಫ್ಯಾಸಿಸಂನ ಸೋಲಿನ ವಾರ್ಷಿಕೋತ್ಸವದ ಆಚರಣೆಯೆಂದರೆ ನಮ್ಮ ದೇಶದಲ್ಲಿನ ಪ್ರತಿಗಾಮಿ ಶಕ್ತಿಗಳನ್ನು ಸೋಲಿಸುವ ನಮ್ಮ ನಿರ್ಧಾರವನ್ನು ಮತ್ತೊಮ್ಮೆ ಒತ್ತಿ ಹೇಳುವುದು. ಇದು ಎಲ್ಲಾ ದೇಶಪ್ರೇಮಿಗಳಿಗೆ ಸಿಪಿಐ(ಎಂ)ನ ಕರೆ.

KRNM/BGS-405 MAG (2) PRB DECR 319-78/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು-27. ಫೋನ್ ನಂ. 2236462 ಮುದ್ರಣ: ರಾಜಾ ಪ್ರಿಂಟರ್ಸ್, ಸಂಪಂಗಿರಾಮನಗರ, ಬೆಂಗಳೂರು. -27

ನೃಪೇನ್ ಚಕ್ರವರ್ತಿಯವರ ಕುತ್ಸಿತ ಆರೋಪಗಳು

ಆರು ದಶಕಗಳ ಸುದೀರ್ಘ ಕಾಲ ಪಕ್ಷ ಕಟ್ಟಲು ರಕ್ತ ಬೆವರು ಸುರಿಸಿದ ಹಿರಿಯ ನಾಯಕರೊಬ್ಬರು ಪಕ್ಷದ ವಿರುದ್ಧವೇ ತಿರುಗಿ ಬಿದ್ದಿದ್ದಾರೆಂದು ಹೇಳುವುದು ಕಷ್ಟವೇ, ಆದರೆ ಅದೀಗ ಕಟುವಾಸ್ತವ ಎಂದು ಖೇದದಿಂದ ಹೇಳುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಯವರು ನೃಪೇನ್ ಚಕ್ರವರ್ತಿಯವರ ವರ್ತನೆ ಹಾಗೂ 'ಆರೋಪ'ಗಳ ಬಗ್ಗೆ ಬರೆಯುತ್ತಾರೆ.

ವ್ಯಕ್ತಿವಾದ, ಪುಟ್ಟ ಬಂಡವಾಳಶಾಹಿ ಅಹಂಭಾವದ ಫಲ

-ಸುರ್ಜಿತ್

ಚಂಡೀಗಢದಲ್ಲಿ ನಡೆದ 15ನೇ ಮಹಾಧಿವೇಶನ ಪಕ್ಷವನ್ನು ರಾಜಕೀಯವಾಗಿಯೂ ಸೈದ್ಧಾಂತಿಕವಾಗಿಯೂ ಒಗ್ಗೂಡಿಸುವಲ್ಲಿ ಯಶಸ್ವಿಯಾಗಿರುವುದಕ್ಕೆ ಇಡೀ ಪಕ್ಷ (ಸಿಪಿಐ-ಎಂ) ಸಂಭ್ರಮದಲ್ಲಿರುವಾಗ ಅದರ ಮೇಲೆ ಭಾರೀ ಒಂದು ಆಕ್ರಮಣ ನಡೆಯಿತು. ಹೊಸ ಆರ್ಥಿಕ ನೀತಿಗಳು ಎಸೆದಿರುವ ಸವಾಲುಗಳನ್ನು ಹಾಗೂ ಕೋಮುವಾದಿ ಶಕ್ತಿಗಳ ಅಪಾಯವನ್ನು ಎದುರಿಸಲು ಎಡ, ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ಶಕ್ತಿಗಳನ್ನು ಒಗ್ಗೂಡಿಸಲು ಪಕ್ಷ ಸಜ್ಜಾಗುತ್ತಿರುವಾಗ ಅನಿರೀಕ್ಷಿತ ಮೂಲದಿಂದ ಈ ಆಕ್ರಮಣ ಉಂಟಾಯಿತು. ನೃಪೇನ್ ಚಕ್ರವರ್ತಿ ಅವರಂಥ ಪಕ್ಷದ ಒಬ್ಬ ಹಿರಿಯ ನಾಯಕ ಈ ರೀತಿಯ ದಾಳಿ ನಡೆಸಿದರೆಂಬುದು ದುರಂತ ಮಾತ್ರವಲ್ಲ ದುರದೃಷ್ಟಕರವೂ ಹೌದು.

ಭಾರತದ ಕಮ್ಯುನಿಸ್ಟ್ ಚಳವಳಿಯ ಘಟಾನುಘಟಿ ಮುಖಂಡರಲ್ಲಿ ಒಬ್ಬರಾದ ಇವರು ಪತ್ರಿಕೆಗಳ ಒಂದು ವಿಭಾಗ ಹಾಗೂ ಕಮ್ಯುನಿಸ್ಟ್ ವಿರೋಧಿಗಳ ನೆರವು ಪಡೆದು ಪಕ್ಷದ ವಿರುದ್ಧ ಅಪಪ್ರಚಾರದ ಸುರಿಮಳೆಗೆರೆದರು.

ನೃಪೇನ್ ಚಕ್ರವರ್ತಿಯವರ ಈ ಅಪಪ್ರಚಾರ, ಕುತ್ಸಿತ ಆರೋಪ ಹಾಗೂ ಅಸಂಗತ ಆಪಾದನೆಗಳು ಪಕ್ಷದ ವ್ಯಕ್ತಿತ್ವ ಮತ್ತು ಘನತೆಗೆ ಮಸಿ ಬಳಿಯುವ ಕ್ರಮಗಳಾಗಿವೆ.

ಯಾವುದೇ ಒಬ್ಬ ವ್ಯಕ್ತಿ ಪಕ್ಷದ ಎಷ್ಟೇ ಉನ್ನತ ಸ್ಥಾನದಲ್ಲಿದ್ದರೂ ಆತ (ಆಕೆ) ಪಕ್ಷದ ಸಾಮೂಹಿಕ ಹೊಣೆಗಾರಿಕೆ ನಿಯಮವನ್ನು ಉಲ್ಲಂಘಿಸಲು ಅವಕಾಶ ಕೊಟ್ಟಿಲ್ಲ, ಪಕ್ಷದ ಅಸ್ತಿತ್ವದ ಇಷ್ಟು ದೀರ್ಘಕಾಲದಲ್ಲಿ ಹಿಂದೆ ಮಾಡಲಾದ ತಪ್ಪುಗಳನ್ನು ಈ ಪ್ರಕ್ರಿಯೆ ಮೂಲಕವೇ ಸರಿಪಡಿಸಿಕೊಳ್ಳಲಾಗಿದೆ ಹಾಗೂ ಅದರಿಂದಾಗಿ ಅದು ಬಲಗೊಂಡಿದೆ. ಆದರೆ ಯಾವುದೇ ವ್ಯಕ್ತಿ ಈ ನಿಯಮವನ್ನು ಹಾಗೂ ನಿರ್ಧಾರ ತೆಗೆದುಕೊಳ್ಳುವ ಸ್ವಾಯವನ್ನು ಅಳವಡಿಸಿಕೊಳ್ಳಲು ವಿಫಲರಾದರೆ ಮತ್ತು ಸಾಮೂಹಿಕ ಚರ್ಚೆಯನ್ನು ಒಪ್ಪದಿದ್ದರೆ ಹಾಗೂ ಬಹುಸಂಖ್ಯಾತ ನಿರ್ಣಯವನ್ನು ಒಪ್ಪದಿದ್ದರೆ ಅಂಥವರಲ್ಲಿ ಪೆಟ್ಟಿ ಬೂರ್ಜ್ವಾ ಅಹಂಭಾವ ಮೊಳಕೆಯೊಡೆಯುತ್ತದೆ. ಇದು ಆತ ಪಕ್ಷದೊಂದಿಗೆ ಹಾಗೂ ವಾಸ್ತವಿಕತೆಯೊಂದಿಗೆ ಸಂಘರ್ಷಕ್ಕಿಳಿಯಲು ಹಾದಿ ಮಾಡಿಕೊಡುತ್ತದೆ.

ವೈರಿಗಳ ಸಂಗದಲ್ಲಿ

ಕಮ್ಯುನಿಸ್ಟರು ಯಾವ ಪ್ರವೃತ್ತಿಯ ವಿರುದ್ಧ ಜಾಗೃತರಾಗಿರಬೇಕೋ ಆ ಪ್ರವೃತ್ತಿಗೆ ನೃಪೇನ್ ಚಕ್ರವರ್ತಿ ಬಲಿ ಬಿದ್ದಿದ್ದಾರೆ.

1935ರಲ್ಲಿ ಪಕ್ಷ ಸೇರಿ, ಆಂದೋಲನ ಎದುರಿಸುವಂಥ ಹತ್ತು ಹಲವಾರು ಎಡರು ತೊಡರುಗಳನ್ನು ಅನುಭವಿಸಿರುವ ನೃಪೇನ್ ಚಕ್ರವರ್ತಿ ಪ್ರಜ್ಞಾಪೂರ್ವಕವಾಗಿಯೋ ಅಥವಾ ಗೊತ್ತಿಲ್ಲದೆಯೋ ಪಕ್ಷದ ವೈರಿಗಳಿಗೆ ನೆರವಾಗುವಂಥ ಸ್ಥಿತಿಯನ್ನು ತಲುಪಿದ್ದಾರೆ.

ಅಪಾರ ತ್ಯಾಗ ಮಾಡಿ ಪಶ್ಚಿಮ ಬಂಗಾಳ ಮತ್ತು ತ್ರಿಪುರಾದಲ್ಲಿ ಎಡರಂಗ ಸರಕಾರಗಳ ನೇತೃತ್ವ ವಹಿಸಿರುವ ಸಿಪಿಐ(ಎಂ) ಈ ಎರಡೂ ರಾಜ್ಯಗಳಲ್ಲಿ ದೊಡ್ಡ ರಾಜಕೀಯ ಶಕ್ತಿಯಾಗಿದೆ ಎನ್ನುವುದು ನೃಪೇನ್‌ಗೆ ಚೆನ್ನಾಗಿ ಗೊತ್ತಿದೆ.

ಈ ಎರಡೂ ರಾಜ್ಯಗಳಲ್ಲಿ ಪಕ್ಷ ಯಾವ ಶಕ್ತಿಗಳ ವಿರುದ್ಧ ಹೋರಾಟ ನಡೆಸಿತ್ತೋ ಹಾಗೂ ಈಗಲೂ ನಡೆಸುತ್ತಿದೆಯೋ ಅದೇ ಶಕ್ತಿಗಳೊಂದಿಗೆ ನೃಪೇನ್ ಕೈ ಜೋಡಿಸಿದ್ದಾರೆ. ಚಳವಳಿಯನ್ನು ಬೆಳೆಸುವಲ್ಲಿ ವ್ಯಕ್ತಿಗಳ ಪಾತ್ರ ಕೊಡುಗೆ ಮಹತ್ವದಿದ್ದಾಗ್ಯೂ ಸಮೂಹಕ್ಕಿಂತ ವ್ಯಕ್ತಿ ಹೆಚ್ಚಲ್ಲ, ಇಂಥ ಆಂದೋಳನ ಸೃಷ್ಟಿಯಾಗಲು ಸಾಮೂಹಿಕ ಪ್ರಯತ್ನವೇ ಕಾರಣ ಎಂಬುದು ವಾಸ್ತವ.

ಪಾಲಿಟ್‌ಬ್ಯೂರೋ ಮತ್ತು ಕೇಂದ್ರ ಸಮಿತಿಗೆ ಆಯ್ಕೆಯಾಗಿದ್ದರೂ ನೃಪೇನ್ ಚಕ್ರವರ್ತಿ 14ನೇ ಮಹಾಧಿವೇಶನದ ನಂತರ ಈ ಎರಡೂ ಸಮಿತಿಗಳ ಸಭೆಗಳಿಗೆ ಹಾಜರಾಗುತ್ತಿರಲಿಲ್ಲ; ಅದೂ ಮುಖ್ಯವಾಗಿ 1993ರ ನಂತರ ಹಾಜರಾಗುತ್ತಿರಲಿಲ್ಲ, ಅದೇ ರೀತಿ ಪಕ್ಷದ ತ್ರಿಪುರಾ ಸಮಿತಿಗಳ ಸಭೆಗಳಿಗೆ ಹಾಜರಾಗುವುದನ್ನು ಕೂಡಾ ಅವರು ನಿಲ್ಲಿಸಿದ್ದರು. ಪಕ್ಷದ ನೇತೃತ್ವದ ಎಡರಂಗ ತ್ರಿಪುರಾದಲ್ಲಿ ಮತ್ತೆ ಅಧಿಕಾರಕ್ಕೆ ಬಂದ ಹಿನ್ನೆಲೆಯಲ್ಲಿ ಈ ಪ್ರವೃತ್ತಿಯನ್ನು ಕಾಣಬೇಕು. ಸಾಮೂಹಿಕ ನಿರ್ಧಾರ ಕೈಗೊಳ್ಳುವ ನಿಯಮದಿಂದ ದೂರವುಳಿದ ಅವರು ಲೆನಿನ್ ವಾದಿ ಸಂಘಟನಾತ್ಮಕ ಧೋರಣೆಗೆ ಹೊರತಾದ ನಿಲುವನ್ನು ತಳೆಯತೊಡಗಿದರು. ಪಕ್ಷವನ್ನು ಉಲ್ಲಂಘಿಸಿ ಚಳವಳಿಗೆ ತನಗೆ ಬೇಕಾದ ರೀತಿಯಲ್ಲಿ ಮಾರ್ಗದರ್ಶನ ನೀಡಲು ಯತ್ನಿಸಿದರು.

1993 ರಿಂದಷ್ಟೇ

1978ರಿಂದಲೂ ತಮಗೆ ಪಕ್ಷದೊಂದಿಗೆ ಭಿನ್ನಾಭಿಪ್ರಾಯಗಳಿದ್ದವು ಎಂದು ನೃಪೇನ್ ಚಕ್ರವರ್ತಿ ಈಗ ಹೇಳಿಕೊಳ್ಳುತ್ತಿದ್ದಾರೆ. ಇದೊಂದು ಅಪ್ಪಟ ಸುಳ್ಳು. 1993ರಲ್ಲಿ ಅವರು ತ್ರಿಪುರಾ ಸರಕಾರದಿಂದ ಹೊರಗುಳಿದರು ಹಾಗೂ ರಾಜ್ಯದ ಯೋಜನಾ ಮಂಡಳಿಗೆ ರಾಜಿನಾಮೆ ನೀಡಿದರು. ಅಲ್ಲಿಯವರೆಗೂ ಅವರು ಯಾವತ್ತು ಪಕ್ಷದ ಧೋರಣೆ ಬಗ್ಗೆ ಭಿನ್ನಾಭಿಪ್ರಾಯ ವ್ಯಕ್ತಪಡಿಸಿರಲಿಲ್ಲ, ಅವರ ಎಲ್ಲಾ ಪತ್ರಗಳು ಹಾಗೂ ತಥಾಕಥಿತ ಭಿನ್ನಾಭಿಪ್ರಾಯಗಳು 1993ರ ಮಧ್ಯಭಾಗದ ನಂತರ ಆರಂಭವಾದವುಗಳಾಗಿವೆ.

ಕಡೆಕಡೆಗೆ ಅವರು ಪಕ್ಷಕ್ಕೆ ಮಸಿಬಳಿಯಲು ಬಂಡವಾಳಶಾಹಿ ಪತ್ರಿಕಾ ಮಾಧ್ಯಮವನ್ನು ಆಶ್ರಯಿಸತೊಡಗಿದರು. 1994 ಡಿಸೆಂಬರ್‌ನಲ್ಲಿ ಕಲ್ಕತ್ತದ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಂದರ್ಭದಲ್ಲಿ ಕಲ್ಕತ್ತಾದ ದೈನಿಕವೊಂದಕ್ಕೆ ನೀಡಿದ ಸಂದರ್ಶನ ಇಂಥದ್ದರಲ್ಲಿ ಮೊದಲನೆಯದಾಗಿತ್ತು.

ಆಗ ಸಭೆ ಸೇರಿದ್ದ ಕೇಂದ್ರ ಸಮಿತಿ ಇದನ್ನು ಗಂಭೀರವಾಗಿ ಪರಿಗಣಿಸಿ ನೃಪೇನ್‌ಗೆ ಎಚ್ಚರಿಗೆ ನೀಡುವಂತೆ ಪ್ರಧಾನ ಕಾರ್ಯದರ್ಶಿಗೆ ಸೂಚಿಸಿತು. ಈ ತಪ್ಪನ್ನು ಪುನಾರಾವರ್ತಿಸುವುದಿಲ್ಲ ಎಂದು ಆಗ ನೃಪೇನ್ ಮಾತು ಕೊಟ್ಟಿದ್ದರು. ಹಾಗಿದ್ದರೂ ಅವರು 15ನೇ ಮಹಾಧಿವೇಶನ ಸಂದರ್ಭದಲ್ಲಿ ಪಕ್ಷದ ತ್ರಿಪುರಾ ಹಾಗೂ ಪ.ಬಂಗಾಳದ ಘಟಕಗಳನ್ನು ಅವಹೇಳನ ಮಾಡಿ ಇನ್ನೊಂದು ಸಂದರ್ಶನ ನೀಡಿದರು.

ವೈರಿಗಳೂ ಮಾಡದಂಥದ್ದು.....

ಪಕ್ಷದ ವೈರಿಗಳು ಕೂಡಾ ಇಂಥ ಆಪಾದನೆಗಳನ್ನು ಮಾಡಲು ಹಿಂಜರಿಯುತ್ತಾರೆ. ಆ ರೀತಿಯ ಆರೋಪಗಳನ್ನು ಅವರು ಮಾಡಿದರು. ಈ ಆರೋಪಗಳನ್ನು ಹಿಂತೆಗೆದುಕೊಳ್ಳುವಂತೆ ಸೂಚಿಸಿ ಪಾಲಿಟ್ ಬ್ಯೂರೋ ಪರವಾಗಿ ಪ್ರಧಾನಕಾರ್ಯದರ್ಶಿ ನೃಪೇನ್‌ರಿಗೆ ಪುನಃ ಪತ್ರ ಬರೆದರು.

ನೃಪೇನ್ ಚಕ್ರವರ್ತಿ ಅದಕ್ಕೆ ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ, ಅವರು ಪಕ್ಷಕ್ಕೆ ಸಲ್ಲಿಸಿದ ಸುದೀರ್ಘ ಸೇವೆಯನ್ನು ಪರಿಗಣಿಸಿ ಅವರನ್ನು ಪಕ್ಷದ ಎಲ್ಲಾ ಚುನಾಯಿತ ಸ್ಥಾನಗಳಿಂದ ಮಾತ್ರ ತೆಗೆದು ಹಾಕಿ ತಮ್ಮ ನಿಲುವನ್ನು ಸರಿಪಡಿಸಿಕೊಳ್ಳಲು ಅವಕಾಶ ನೀಡಬೇಕು ಎಂದು ಆಗ ಚಂಡೀಗಢದಲ್ಲಿ ಸಭೆ ಸೇರಿದ್ದ ಕೇಂದ್ರ ಸಮಿತಿ ನಿರ್ಧರಿಸಿತು.

ದುರದೃಷ್ಟವಶಾತ್, ತಮ್ಮನ್ನು ಸರಿಪಡಿಸಿಕೊಳ್ಳುವ ಬದಲಿಗೆ ಅವರು ಪುನಃ ಪತ್ರಿಕೆಗಳ ಮೂಲಕ ಪಕ್ಷ ಹಾಗೂ ಅದರ ನಾಯಕರ ಮೇಲೆ ಮಾನಹಾನಿಕರವಾದ ಆಕ್ರಮಣವನ್ನು ನಡೆಸಿದರು. ತಪ್ಪಿನ ಗಹನತೆಯನ್ನು ಅರಿತುಕೊಂಡು ಇಂಥ ಕ್ರಮದಿಂದ ಹಿಂದೆ ಸರಿಯುವಂತೆ ಪಿ.ಬಿ. ಮತ್ತೆ ಕೇಳಿಕೊಂಡಿತು.

ತ್ರಿಪುರಾದಲ್ಲಿನ ಪರಿಸ್ಥಿತಿಯನ್ನು ಅಭದ್ರಗೊಳಿಸಲು ಕಾಂಗ್ರೆಸ್(ಐ) -ಟಿಯುಜೆಎಸ್ ಕೂಟ ನಡೆಸುತ್ತಿರುವ ಯತ್ನಗಳ ವಿರುದ್ಧ ಕಠಿಣ ಹೋರಾಟದಲ್ಲಿ ತೊಡಗಿರುವ ಪಕ್ಷದ ಕಷ್ಟ ನೃಪೇನ್ ನಿಲುವಿನಿಂದಾಗಿ ಹೆಚ್ಚಾಯಿತು. ಕೇಂದ್ರ ಸರಕಾರದ ಆರ್ಥಿಕ ನೀತಿಗಳು ಮತ್ತು ಕೋಮು ಶಕ್ತಿಗಳ ವಿರುದ್ಧ ಬೃಹತ್ ಸಂಘರ್ಷಗಳನ್ನು ಸಂಘಟಿಸುತ್ತಿರುವ ಸಂದರ್ಭದಲ್ಲಿ ಪಕ್ಷದ ಘನತೆಗೆ ಕುಂದು ಬರಲು ಬಿಡಬಾರದು ಎಂದು ಪಿ.ಬಿ. ಭಾವಿಸಿತು. ತಮ್ಮ ಕ್ರಮದ ಬಗ್ಗೆ ವಿಷಾದ ವ್ಯಕ್ತಪಡಿಸಲು ನೃಪೇನ್ ಚಕ್ರವರ್ತಿ ವಿಫಲರಾದ್ದರಿಂದ ಅವರನ್ನು ಪಕ್ಷದಿಂದ ಉಚ್ಚಾಟಿಸುವುದು ಅನಿವಾರ್ಯವಾಯಿತು.

ಆನಂತರ, ಸ್ವತಃ ತಮ್ಮ ಕೃತ್ಯಗಳಿಂದಾಗಿ ಅವರು ಪಕ್ಷದ ವಿರೋಧಿಗಳ ಶಿಬಿರದಲ್ಲಿ ಕಾಲಿಡುವಂತಾಯಿತು. ಕಮ್ಯುನಿಸ್ಟರ ವಿರುದ್ಧ ವಿಷ ಕಾರುವಂಥ ಮಮತಾ ಬ್ಯಾನರ್ಜಿಯಂಥವರು ಅಗರ್ತಲಾಕ್ಕೆ ಧಾವಿಸಿ ನೃಪೇನ್ ಚಕ್ರವರ್ತಿಯವರನ್ನು ಭೇಟಿ ಮಾಡಿ ಶುಭಾಷಯ ಸಲ್ಲಿಸಿದ್ದು ಆಕಸ್ಮಿಕ ವಿದ್ಯಮಾನವೇನೂ ಅಲ್ಲ, ಅಭಿನಂದನೆ ಸ್ವೀಕರಿಸಿದ ನೃಪೇನ್ ಚಕ್ರವರ್ತಿ ಮಮತಾರನ್ನು ಭಾರೀ ಕೊಂಡಾಡಿದರು. ಇತ್ತೀಚಿನ ವರ್ಷಗಳಲ್ಲಿ ಪಕ್ಷದಿಂದ ಉಚ್ಚಾಟಿತರಾದವರನ್ನು ನೃಪೇನ್ ಚಕ್ರವರ್ತಿ ಕರೆಯುತ್ತಿದ್ದಾರೆ. ನೃಪೇನ್‌ರನ್ನು ಕಟುವಾಗಿ ಟೀಕಿಸುತ್ತಿದ್ದ ಅಜಯ್ ಬಿಶ್ವಾಸ್ ಕೂಡಾ ಅವರಲ್ಲಿ ಒಬ್ಬರು. ಇದು ಎಂಥ ವಿಪರ್ಯಾಸ ಅಲ್ಲವೇ?

ಆರು ದಶಕಗಳ ಸುದೀರ್ಘ ಕಾಲ ಜೀವಮಾನವನ್ನು ಸವೆದು ಪಕ್ಷವನ್ನು ಕಟ್ಟಲು ರಕ್ತ ಬೆವರು ಸುರಿಸಿದ ಹಿರಿಯ ನಾಯಕರೊಬ್ಬರು ಪಕ್ಷದ ವಿರುದ್ಧವೇ ತಿರುಗಿಬಿದ್ದಿದ್ದಾರೆಂದು ಹೇಳುವುದು ಕಷ್ಟವೇ. ಆದರೆ ಅದು ನಂಬಬೇಕಾದ ಕಟು ವಾಸ್ತವ. ಇದು ಅತಿ ವ್ಯಕ್ತಿವಾದ ಹಾಗೂ ಪೆಟ್ಟಿ ಬೂರ್ಜ್ವಾ ಅಹಂಭಾವದ ಫಲವಾಗಿದೆ. ಸಾಮೂಹಿಕ ಹೊಣೆಗಾರಿಕೆಯ ತತ್ವವನ್ನು ಒಪ್ಪದಿದ್ದರೆ ಈ ಪ್ರವೃತ್ತಿ ಬೆಳೆಯುತ್ತದೆ. ವ್ಯಕ್ತಿವಾದವು ಅಸಹನೆ ಹಾಗೂ ಅಹಂಕಾರವಾಗಿ ಪರಿವರ್ತನೆಗೊಂಡು ಅಂತಿಮವಾಗಿ ಅಧಿಕಾರಶಾಹಿ ಪ್ರವೃತ್ತಿ ಬೆಳೆಯುತ್ತದೆ ಎಂಬುದನ್ನು ಕಮ್ಯುನಿಸ್ಟ್ ಆಂದೋಳನದ ಅನುಭವದ ಸಾಬೀತು ಪಡಿಸಿದೆ.

'ಆರೋಪ'ಗಳೇನು?

1993 ಆಗಸ್ಟ್ 23 ರಂದು ಪಿ.ಬಿ.ಗೆ ಬರೆದ ಪತ್ರದಲ್ಲಿ ತಾವು ಪಕ್ಷದ ಪಶ್ಚಿಮ ಬಂಗಾಳ ಘಟಕದ ವಿರುದ್ಧ ಮಾಡಿರುವ ಆರು ಆರೋಪಗಳನ್ನು ನೃಪೇನ್ ಚಕ್ರವರ್ತಿ ಪ್ರಸ್ತಾವಿಸುತ್ತಾರೆ. ಆದರೆ, ಪಿ.ಬಿಯಲ್ಲಿ ಈ ಬಗ್ಗೆ ಚರ್ಚೆ ನಡೆಯಬೇಕೆಂದು ನಾನು ಬಯಸುವುದಿಲ್ಲ, ಪಿ.ಬಿ. ಸದಸ್ಯರಿಗೆ ಈ ಪತ್ರವನ್ನು ವಿತರಿಸಬೇಕು ಎಂದಷ್ಟೇ ನಾನು ಆಶಿಸುತ್ತೇನೆ ಎಂದು ತಮ್ಮ ಪತ್ರದ ಕೊನೆಯಲ್ಲಿ ಹೇಳಿರುವುದನ್ನು ನೃಪೇನ್ ಚಕ್ರವರ್ತಿ ಮರೆತಿದ್ದಾರೆ. ಅಲ್ಲದೆ ತಾವು ಸದಸ್ಯರಾಗಿರುವ ಪಿ.ಬಿ. ಮತ್ತು ಸಿ.ಸಿ. ಸಭೆಗಳಿಗೆ ಹಾಜರಾಗುವುದು ಸೂಕ್ತ ಎಂದೂ ಅವರೂ ಭಾವಿಸಲಿಲ್ಲ.

ಪ. ಬಂಗಾಳ ಘಟಕದ ವಿರುದ್ಧ ಮಾಡಲಾದ ಆರೋಪಗಳೇನೆಂಬುದನ್ನು ಪರಿಶೀಲಿಸೋಣ. ಮೊದಲನೆಯದಾಗಿ, ಪಶ್ಚಿಮ ಬಂಗಾಳ ಘಟಕಕ್ಕೆ ವರ್ಗ ಸಂಘರ್ಷದಲ್ಲಿ ನಂಬಿಕೆಯಿದೆ. ನೃಪೇನ್ ಚಕ್ರವರ್ತಿ ಪ್ರಕಾರ, ಅದು ವರ್ಗಗಳನ್ನು ಪರಿಶಿಷ್ಟ ಜಾತಿ (ಎಸ್.ಸಿ.) ಪರಿಶಿಷ್ಟ ಪಂಗಡ (ಎಸ್.ಟಿ) ಇತರ ಹಿಂದುಳಿದ ವರ್ಗಗಳು (ಒಬಿಸಿ) ಎಂಬುದಾಗಿ ವಿಭಜಿಸುವುದಿಲ್ಲ. ಹಾಗಾದರೆ ಗೊಂದಲ ಏನಿದೆ? ಎಸ್.ಸಿ. ಎಸ್.ಟಿ. ಮತ್ತು ಓಬಿಸಿ ಗಳ ಅಸ್ತಿತ್ವ ಭಾರತದ ಒಂದು ವಾಸ್ತವಿಕ ಪರಿಸ್ಥಿತಿಯಾಗಿದೆ. ಅದನ್ನು ನಾವು ಗಣನೆಗೆ ತೆಗೆದುಕೊಳ್ಳಬೇಕು. ಇದನ್ನು ಒಪ್ಪುವಾಗಲೇ ವರ್ಗ ಸಂಘರ್ಷ ವೇ ಇತಿಹಾಸದ ಮುನ್ನಡೆಯ ಪ್ರೇರಕ ಶಕ್ತಿ ಎಂಬ ವಾಸ್ತವತೆಯನ್ನು ನಾವು ಮರೆಯಬಾರದು. ಕೆಲವು ಬಂಡವಾಳಶಾಹಿ ಪಕ್ಷಗಳ ಹಾಗೂ ನಾಯಕರು ಎಸ್.ಸಿ., ಎಸ್.ಟಿ ಮತ್ತು ಓಬಿಸಿಗಳ ಸಮಸ್ಯೆಗಳಿಗೆ ಅನ್ವಯಿಸುವ ಧೋರಣೆಯನ್ನು ಅನುಸರಿಸಿದರೆ ಜಾತಿ ವಿಭಜನೆಯ ಸ್ಥಿತಿಯನ್ನು ಮುಂದುವರಿಸಲು ನಾವು ನೆರವು ನೀಡಿದಂತಾಗುತ್ತದೆ. ಇದು ಮಾರ್ಕ್ಸ್‌ವಾದಿ ಧೋರಣೆಗೆ ವಿರುದ್ಧವಾಗಿರುತ್ತದೆ.

> **ಇದು ಅತಿ ವ್ಯಕ್ತಿವಾದ ಹಾಗೂ ಪೆಟ್ಟಿ ಬೂರ್ಜ್ವಾ ಅಹಂಭಾವದ ಫಲವಾಗಿದೆ. ಸಾಮೂಹಿಕ ಹೊಣೆಗಾರಿಕೆಯ ತತ್ವವನ್ನು ಒಪ್ಪದಿದ್ದರೆ ಈ ಪ್ರವೃತ್ತಿ ಬೆಳೆಯುತ್ತದೆ. ವ್ಯಕ್ತಿವಾದವು ಅಸಹನೆ ಹಾಗೂ ಅಹಂಕಾರವಾಗಿ ಪರಿವರ್ತನೆಗೊಂಡು ಅಂತಿಮವಾಗಿ ಅಧಿಕಾರಶಾಹಿ ಪ್ರವೃತ್ತಿ ಬೆಳೆಯುತ್ತದೆ ಎಂಬುದನ್ನು ಕಮ್ಯುನಿಸ್ಟ್ ಆಂದೋಳನದ ಅನುಭವದ ಸಾಬೀತು ಪಡಿಸಿದೆ**

ಪ. ಬಂಗಾಳದಲ್ಲಿ ಗ್ರಾಮೀಣ ದುಡಿಯುವ ವರ್ಗದವರನ್ನು ಪ್ರತ್ಯೇಕ ಸಂಘಟನೆಗಳಡಿ ಸಂಘಟಿಸಿಲ್ಲ ಎಂಬುದು ಅವರ ಎರಡನೇ ಆರೋಪವಾಗಿದೆ. ಗ್ರಾಮೀಣ ಜನಸಮುದಾಯದ ವಿವಿಧ ವಿಭಾಗಗಳ ನಡುವಿನ ಸಂಬಂಧ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಭೂ ಸುಧಾರಣೆಯಿಂದ ಉಂಟಾಗಿರುವ ಬದಲಾವಣೆಗಳನ್ನು ಪಕ್ಷ ತನ್ನ ನಾನಾ ದಸ್ತಾವೇಜುಗಳಲ್ಲಿ ಅಂದಾಜು ಮಾಡಿರುವುದನ್ನು ನೃಪೇನ್ ಚಕ್ರವರ್ತಿ ಗಮನಿಸಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಪಂಚಾಯಿತಿ ಮತ್ತು ಇತರ ಸ್ಥಳೀಯ ಸಂಸ್ಥೆಗಳಲ್ಲಿ ಕೃಷಿ ಕಾರ್ಮಿಕರು ಮತ್ತು ಬಡವರು ಅಧಿಕಾರ ಸ್ಥಾನಗಳನ್ನು ಗಳಿಸಿ ಹೊಸ ಬಲ ಪಡೆದಿದ್ದಾರೆ.

ಪ. ಬಂಗಾಳದಲ್ಲಿ ಬುಡಕಟ್ಟು ಜನರೇ ವಾಸವಾಗಿರುವ ಪ್ರದೇಶಗಳಿವೆ, ಆದರೆ ಅವರಿಗಾಗಿ ಸ್ವಾಯತ್ತ ಮಂಡಳಿಯನ್ನು ರಚಿಸಲು ರಾಜ್ಯ ಸರಕಾರ ವಿರೋಧವಾಗಿದೆ ಎನ್ನುವುದು ಮೂರನೇ ಆರೋಪ. ಇದು ಅಪ್ಪಟ ಸುಳ್ಳು ಆರೋಪವಾಗಿದೆ. ಪಶ್ಚಿಮ ಬಂಗಾಳವನ್ನು ಒಟ್ಟಾರೆಯಾಗಿ ಪರಿಗಣಿಸಿದರೆ ಬುಡಕಟ್ಟು ಜನರ ಸಂಖ್ಯೆ ಕಡಿಮೆಯಾಗಿದೆ. ಯಾವುದೇ ಜಿಲ್ಲೆ ಅಥವಾ ಉಪ ವಿಭಾಗಗಳಲ್ಲಿ ಕೂಡಾ ಅವರು ಬಹುಸಂಖ್ಯಾತರಾಗಿಲ್ಲ, ಅಥವಾ ಸ್ವಾಯುತ್ತ ಮಂಡಳಿ ಅಗತ್ಯವೆನಿಸುವ ರೀತಿಯಲ್ಲಿ ಅವರು ನಿರ್ದಿಷ್ಟ ಪ್ರದೇಶದಲ್ಲಿ ವಾಸವಾಗಿಲ್ಲ, ಪರಿಸ್ಥಿತಿ ಹೀಗಿದ್ದರೂ ಬುಡಕಟ್ಟು ಜನರಿಗೆ ಜಮೀನನ್ನು ವಿತರಿಸಿದ ಹಾಗೂ ನೀತಿ ನಿರ್ಧಾರದ ಸಂಸ್ಥೆಗಳಲ್ಲಿ ಅವರು ಪಾಲ್ಗೊಳ್ಳುವಿಕೆಯನ್ನು ಖಾತರಿ ಪಡಿಸಿದ ಕೀರ್ತಿ ಪ. ಬಂಗಾಳದ ಎಡರಂಗ ಸರ್ಕಾರಕ್ಕೆ ಸಲ್ಲುತ್ತದೆ.

ಗೂರ್ಖಾಲ್ಯಾಂಡ್ ಬೇಡಿಕೆಯನ್ನು ನ್ಯಾಯಬದ್ಧವಾಗಿ ಎತ್ತುವಂತಾಗಲು ರಾಷ್ಟ್ರೀಯ ಅಲ್ಪಸಂಖ್ಯಾತರನ್ನು ಪ.ಬಂ ಸರಕಾರ ಮಾನ್ಯ ಮಾಡುತ್ತಿಲ್ಲ -ಇದು ನಾಲ್ಕನೆಯ ಆರೋಪವಾಗಿದೆ. ನೇಪಾಳಿ ಮಾತನಾಡುವ ಜನರು ಬಹುಸಂಖ್ಯೆಯಲ್ಲಿರುವ ಡಾರ್ಜಿಲಿಂಗ್‌ಗೆ ಪ್ರತ್ಯೇಕ ಸ್ವಾಯತ್ತ ಮಂಡಳಿ ಬೇಕು ಎಂದು ಸಿಪಿಐ(ಎಂ) ಮತ್ತು ರಾಜ್ಯದ ಇತರ ಎಡಪಕ್ಷಗಳು ದೀರ್ಘಕಾಲದಿಂದ ಒತ್ತಾಯಿಸುತ್ತಾ ಬಂದಿರುವುದನ್ನು ಇಲ್ಲಿ ಸ್ಮರಿಸಬಹುದು. ನೇಪಾಳಿ ಭಾಷೆಯನ್ನು ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರಿಸಬೇಕೆಂದು ಕೂಡಾ ಪಕ್ಷ ಆಗ್ರಹಪಡಿಸುತ್ತಿದೆ. ಪ್ರತ್ಯೇಕ ರಾಜ್ಯಕ್ಕಾಗಿ ಚಳವಳಿ ಹುಟ್ಟಿಕೊಂಡಾಗ ಡಾರ್ಜಿಲಿಂಗ್ ನಲ್ಲಿ ಸ್ವಾಯತ್ತ ಜಿಲ್ಲಾ ಮಂಡಳಿಯ ರಚನೆಗಾಗಿ ಸಂವಿಧಾನಕ್ಕೆ ತಿದ್ದುಪಡಿ ತರುವಂತೆ ರಾಜ್ಯ ಸರಕಾರ ಕೇಂದ್ರ ಸರ್ಕಾರವನ್ನು ಕೋರಿತು. ಜಾರ್ಖಂಡ್, ಉತ್ತರಾಖಂಡ್ ಮೊದಲಾದ ಬೇಡಿಕೆಗಳಿಗೆ ಕೂಡಾ ಪಕ್ಷದ ಇದೇ ದೋರಣೆ ಅನ್ವಯವಾಗುತ್ತದೆ.

ಪಶ್ಚಿಮ ಬಂಗಾಳದಲ್ಲಿ ಪರಿಶಿಷ್ಟ ಜಾತಿಗಳ ಪ್ರತ್ಯೇಕ ಸಂಘಟನೆ ಕಟ್ಟುತ್ತಿರುವುದರಿಂದ ಸಮಸ್ಯೆ ಪರಿಹಾರ ವಾಗುವುದಿಲ್ಲ ಎನ್ನುವುದು ಪಕ್ಷದ ಅಭಿಪ್ರಾಯ. ಸಾಮಾನ್ಯ ಸ್ಥಾನಮಾನಗಳನ್ನು ಕಲ್ಪಿಸಿ ಸಾಮಾಜಿಕ ದೌರ್ಜನ್ಯದಿಂದ ಬಿಡುಗಡೆಗೊಳಿಸಲು ಅನುಕೂಲವಾಗುವಂತೆ ಅವರಿಗೆ ಆರ್ಥಿಕ ಸೌಲಭ್ಯಗಳನ್ನು ಒದಗಿಸುವಲ್ಲಿ ಪರಿಹಾರ ಅಡಗಿದೆ. ಭೂಸುಧಾರಣೆ ಈ ಹೋರಾಟದ ಪ್ರಮುಖ ಅಂಗವಾಗಿದೆ. ಈ ವಿಚಾರದಲ್ಲಿ ಪಶ್ಚಿಮ ಬಂಗಾಳ ಮಾದರಿಯನ್ನೇ ಹಾಕಿಕೊಟ್ಟಿದೆ.

ಕೊನೆಯದಾಗಿ, ಇತರ ಹಿಂದುಳಿದ ವರ್ಗ (ಓಬಿಸಿ) ಅಸ್ತಿತ್ವವನ್ನು ಪ.ಬಂಗಾಳ ಸರಕಾರ ಒಪ್ಪುವುದಿಲ್ಲ ಎನ್ನುವುದು ನೃಪೇನ್ ಚಕ್ರವರ್ತಿ ಆರೋಪವಾಗಿದೆ. ಮಂಡಲ್ ಆಯೋಗದ ಶಿಫಾರಸನ್ನು ಪ. ಬಂಗಾಳ ಸರಕಾರ ತಾತ್ವಿಕವಾಗಿ ಒಪ್ಪಿದೆ ಎಂದು ನೃಪೇನ್‌ಚಕ್ರವರ್ತಿಯವರು ಗಮನಿಸಬೇಕು. ಅದೇ ಹೊತ್ತಿಗೆ ಈ ವಿಷಯವನ್ನು ಪರಿಗಣಿಸುವಾಗ ಐತಿಹಾಸಿಕ ದೃಷ್ಟಿಕೋನವನ್ನು ಗಮನದಲ್ಲಿಟ್ಟು ಕೊಳ್ಳಬೇಕು. ಅವೆಂದರೆ ಪಶ್ಚಿಮ ಬಂಗಾಳದಲ್ಲಿ ಸಾಮಾಜಿಕ ಸುಧಾರಣೆಗಾಗಿ ನಡೆದ ಚಳವಳಿಗಳು ಮತ್ತು ಅಭಿವೃದ್ಧಿ. ಇತರ ಹಿಂದುಳಿದ ವರ್ಗಗಳನ್ನು ಗುರುತಿಸಲಿಕ್ಕಾಗಿ ರಾಜ್ಯ ಸರಕಾರ ಆಯೋಗವೊಂದನ್ನು ರಚಿಸಿದ್ದು ಅದು 26 ಸಮುದಾಯಗಳನ್ನು ಗುರುತಿಸಿ ಸರಕಾರದ ಮುಂದೆ ಎರಡು ವರದಿಗಳನ್ನು ಈಗಾಗಲೇ ಮಂಡಿಸಿದೆ.

ಬೇರೆ ರೀತಿಯ ಆಕ್ರಮಣ

ಈ ರೀತಿಯ ಆರೋಪಗಳಿಂದ ತೃಪ್ತರಾಗದ ನೃಪೇನ್ ಚಕ್ರವರ್ತಿ, ಈ ಎರಡೂ ರಾಜ್ಯಗಳಲ್ಲಿ (ಪ.ಬಂಗಾಳ ಹಾಗೂ ತ್ರಿಪುರಾ)ಕಾನೂನು ಮತ್ತು ಸುವ್ಯವಸ್ಥೆ ಕುಸಿದು ಬಿದ್ದಿದೆ, ಅಲ್ಲಿನ ಸರಕಾರಗಳು ಕ್ರಿಮಿನಲ್ ಹಾಗೂ ಭ್ರಷ್ಟ ಚಟುವಟಿಕೆಗಳಲ್ಲಿ ತೊಡಗಿವೆ' ಎಂದು ಆರೋಪಿಸಿದ್ದಾರೆ. ಹಲವು ಚುನಾವಣೆಗಳಲ್ಲಿ ಈ ಸರಕಾರಗಳನ್ನು ಆಯ್ಕೆ ಮಾಡುವ ಮೂಲಕ ಜನರೇ ಈ ಆರೋಪಗಳಿಗೆ ಉತ್ತರ ನೀಡಿದ್ದಾರೆ.

ತಮ್ಮ ಹೇಳಿಕೆ ಮತ್ತು ಸಿಪಿಐ(ಎಂ) ವಿರುದ್ಧದ ಅವರ ಆರೋಪಗಳನ್ನು ಪತ್ರಿಕೆಗಳು ಇಡೀ ಇಡೀಯಾಗಿ ಪ್ರಕಟಿಸಿದ್ದರಿಂದ ಉತ್ತೇಜಿತರಾದ ನೃಪೇನ್ ಚಕ್ರವರ್ತಿ, ಪ.ಬಂಗಾಳ ಮುಖ್ಯಮಂತ್ರಿ ಜ್ಯೋತಿ ಬಸು ಅವರನ್ನು ವೈಯುಕ್ತಿಕವಾಗಿ ದೂಷಿಸಲು ಆರಂಭಿಸಿದರು. ಎಲ್ಲಿ ರಾಜಕೀಯ ಪಕ್ಷಗಳ, ಮತ್ತು ಸಿದ್ಧಾಂತಗಳ ಜನರಿಂದ ಮೀರಿ ಜ್ಯೋತಿಬಸು ಸರ್ವತ್ರ ಗೌರವಕ್ಕೆ ಪಾತ್ರರಾಗಿರುವ ನಾಯಕರು ಎಂಬುದನ್ನು ಮತ್ತೆ ಇಲ್ಲಿ ಹೇಳಬೇಕಾಗಿಲ್ಲ, ಶ್ರೀಮಂತ ಕುಟುಂಬವೊಂದರಿಂದ ಬಂದ ಬಸು, ದುಡಿಯುವ ವರ್ಗದ ಹಿತಕ್ಕಾಗಿ ಕಠಿಣವಾಗಿ ಪರಿಶ್ರಮಿಸಿ ಪಕ್ಷದ ಅತ್ಯುನ್ನತ ಮಂಡಳಿಯವರೆಗೆ ತಲುಪಿದ್ದಾರೆ. ಆಂದೋಲನಕ್ಕಾಗಿ ಜ್ಯೋತಿಬಸು ಮಾಡಿರುವ ಕೆಲಸ, ತ್ಯಾಗ ಮತ್ತು ಕೊಡುಗೆಯನ್ನು ಘಟಕ ಪರಿಶೀಲಿಸುವುದು ಅಗತ್ಯವೆಂದು ನನಗನಿಸುವುದಿಲ್ಲ, ಅದು ಪಕ್ಷದ ಇತಿಹಾಸದ ಭಾಗವಾಗಿದೆ. ಪಕ್ಷದ ವಿರೋಧಿಗಳು ಕೂಡಾ ಜ್ಯೋತಿ ಬಸು ವ್ಯಕ್ತಿತ್ವದ ವಿರುದ್ಧ ಈ ರೀತಿಯಾದ ಕಟ್ಟುಕತೆ ಹೆಣೆದು ಅಪಪ್ರಚಾರ ಮಾಡಿರಲಿಲ್ಲ,

ಭಾರತೀಯ ಜನತಾಪಕ್ಷ (ಬಿಜೆಪಿ) ಕುರಿತ ಪಕ್ಷದ ನಿಲವನ್ನು ನೃಪೇನ್ ಚಕ್ರವರ್ತಿ ಒಪ್ಪುತ್ತಿರಲಿಲ್ಲ, ಇದೊಂದೇ ಅವರು ಪಕ್ಷದೊಂದಿಗೆ ಹೊಂದಿದ್ದ ರಾಜಕೀಯ ಭಿನ್ನಾಭಿಪ್ರಾಯ ಆಗಿತ್ತು, ಕಾಂಗ್ರೆಸ್ ಮತ್ತು ಬಿಜೆಪಿ ಅವಳಿ ಅಪಾಯಗಳು ಎಂದು ಪಕ್ಷ ಹೇಳುತ್ತಿರುವಾಗ, ಪಕ್ಷದ ಆಕ್ರಮಣ ಕಾಂಗ್ರೆಸ್ ಮೇಲೆ ಕೇಂದ್ರೀಕೃತವಾಗಬೇಕು ಎಂದು ಹೇಳುತ್ತಿದ್ದ ನೃಪೇನ್ ಚಕ್ರವರ್ತಿ ಬಿಜೆಪಿಯ ಅಪಾಯವನ್ನು ಕಡೆಗಣಿಸುತ್ತಿದ್ದರು.

ಯಾವುದೇ ವ್ಯಕ್ತಿ ಪಕ್ಷಕ್ಕಿಂತ ದೊಡ್ಡವನಲ್ಲ ಎಂಬುದನ್ನು ಮತ್ತೆ ಒತ್ತಿ ಹೇಳಬೇಕಾಗಿದೆ. ಪಕ್ಷ ಸೋಷಲ್ ಡೆಮಾಕ್ರಟಿಕ್ ಪಕ್ಷವಾಗಿ ಪರಿವರ್ತನೆಗೊಳ್ಳುತ್ತಿದೆ ಎಂದು ನೃಪೇನ್ ಆರೋಪಿಸಿದ್ದಾರೆ. ಆದರೆ ಪಕ್ಷದ ಸಾಮೂಹಿಕ ಹೊಣೆಗಾರಿಕೆಯನ್ನು ಒಪ್ಪದೆ, ಪ್ರಜಾಸತ್ತಾತ್ಮಕ ಕೇಂದ್ರವಾದವನ್ನು ಅಂಗೀಕರಿಸದೆ ಸ್ವತಃ ಅವರೇ ಸೋಷಲ್ ಡೆಮಾಕ್ರಟಿಕ್ ಪ್ರವೃತ್ತಿಗೆ ಬಲಿ ಬೀಳುತ್ತಿದ್ದಾರೆ ಎನ್ನುವುದು ದುರಂತದ ವಿಷಯವಾಗಿದೆ. ಇಂತಹ ದೂಷಣೆ, ಒದರಾಟಗಳು ಪಕ್ಷಕ್ಕೇನೂ ತೊಂದರೆ ಮಾಡಲಾರವು ಎಂಬ ಬಗ್ಗೆ ಸಂಶಯವಿಲ್ಲ,

ಮಹಾನ್ ಹಿನ್ನೆಲೆಯುಳ್ಳ ಒಬ್ಬ ನಾಯಕ ಪಕ್ಷದ ವಿರುದ್ಧವೇ ತಿರುಗಿಬಿದ್ದು ಕಮ್ಯುನಿಸ್ಟ್ ವಿರೋಧಿ ಒಲವಿನ ಪತ್ರಿಕೆಯೊಂದರ ಅಂಕಣಕಾರನಾಗುವುದಕ್ಕೆ ತೃಪ್ತಿಪಟ್ಟುಕೊಳ್ಳುತ್ತಿರುವದು ನಿಜವಾಗಿಯೂ ಬೇಸರದ ಸಂಗತಿಯಾಗಿದೆ.